ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ

ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಚಂದನಾ ಕೆ. ಎಸ್.

ಮಾರ್ಗದರ್ಶಕರು

ಪ್ರೊ. ಕೆ. ಅಭಯ್ ಕುಮಾರ್

ಪ್ರಾಧ್ಯಾಪಕರು

ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ 574 199.

2023

ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ

ಪ್ರಸ್ತಾವನೆ

- ಅಧ್ಯಯನದ ಉದ್ದೇಶ
- ಅಧ್ಯಯನದ ವ್ಯಾಪ್ತಿ
- ಈ ಕುರಿತು ನಡೆದಿರುವ ಅಧ್ಯಯನಗಳು
- ಅಧ್ಯಯನದ ವೈಧಾನಿಕತೆ

ಅಧ್ಯಾಯ 1: ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 1.1: ಪ್ರದೇಶ ಮತ್ತು ಪ್ರಾದೇಶಿಕತೆ

1.1.1. ಪ್ರದೇಶ

1.1.2. ಪ್ರಾದೇಶಿಕತೆ

1.1.3. ಪ್ರಾದೇಶಿಕತೆಯ ಅಧ್ಯಯನ

ಅಧ್ಯಾಯ 1.2: ಪ್ರಾದೇಶಿಕ ಸಂಸ್ಕೃತಿ

1.2.1. ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ

ಅಧ್ಯಾಯ 1.3: ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನದ ಆವಶ್ಯಕತೆ

ಅಧ್ಯಾಯ 2: ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 2.1: ವೈದೇಹಿಯವರ ಕಥನ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 2.2: ವೈದೇಹಿಯವರ ಕವನಗಳಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 2.3: ವೈದೇಹಿಯವರ ಮಕ್ಕಳ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 2.4: ವೈದೇಹಿಯವರ ಇತರ ಸಾಹಿತ್ಯ ಪ್ರಕಾರಗಳಲ್ಲಿ ಪ್ರಾದೇಶಿಕ ಸಂಸ್ಕೃತಿ

ಅಧ್ಯಾಯ 3: ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 3.1: ಸಾಮಾಜಿಕ ಚಿಂತನೆಯ ಅರ್ಥ

3.1.1. ಸಮಾಜಶಾಸ್ತ್ರೀಯ ಚಿಂತನೆಯ ಹಿನ್ನೆಲೆಯಲ್ಲಿ

3.1.2. ಸಮಾಜಕೇಂದ್ರಿತ ಆಧುನಿಕ ವಿಮರ್ಶಾ ಪ್ರಸ್ಥಾನಗಳ ಹಿನ್ನೆಲೆಯಲ್ಲಿ

3.1.2.1. ಚಾರಿತ್ರಿಕ ವಿಮರ್ಶೆ

3.1.2.2. ಮಾರ್ಕ್ಸ್‌ವಾದಿ ವಿಮರ್ಶೆ

3.1.2.3. ಸ್ತ್ರೀವಾದಿ ವಿಮರ್ಶೆ

ಅಧ್ಯಾಯ 3.2: ವೈದೇಹಿಯವರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯ ಅಧ್ಯಯನದ ಆವಶ್ಯಕತೆ

ಅಧ್ಯಾಯ 4: ವೈದೇಹಿಯವರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 4.1: ವೈದೇಹಿಯವರ ಕಥನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 4.2: ವೈದೇಹಿಯವರ ಕವನಗಳಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 4.3: ವೈದೇಹಿಯವರ ಮಕ್ಕಳ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 4.4: ವೈದೇಹಿಯವರ ಇತರ ಸಾಹಿತ್ಯ ಪ್ರಕಾರಗಳಲ್ಲಿ ಸಾಮಾಜಿಕ ಚಿಂತನೆ

ಅಧ್ಯಾಯ 5: ವೈದೇಹಿಯವರ ಸಾಹಿತ್ಯದ ವೈಶಿಷ್ಟ್ಯ

ಉಪಸಂಹಾರ

- ಅಧ್ಯಯನದ ಫಲಿತಗಳು
- ಮುಂದಿನ ಅಧ್ಯಯನದ ಸಾಧ್ಯತೆಗಳು

ಅನುಬಂಧ

- ಮೂಲ ಪಠ್ಯಗಳು
- ಸಂಶೋಧನಾ ಮಹಾಪ್ರಬಂಧಗಳು
- ಕನ್ನಡ ಕೃತಿಗಳು
- ಕನ್ನಡ ಲೇಖನಗಳು.
- ಜಾಲತಾಣ ಕೊಂಡಿಗಳು

ಪ್ರಸ್ತಾವನೆ

ಸಮೃದ್ಧ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮಹಿಳೆಯರ ಕೊಡುಗೆ ಗಣನೀಯವಾಗಿದೆ. ಕಂತಿ, ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ, ಸೂಳೆ ಸಂಕವ್ವೆ, ಕೊಟ್ಟಣದ ಸೋಮವ್ವೆ ಮುಂತಾದ ಮಹಿಳೆಯರು ಮಾತು ಮತ್ತು ಬರೆಹದಲ್ಲಿ ಸಮಾಜದ ಬಗ್ಗೆ ತಮಗನಿಸಿದ್ದನ್ನು ಮತ್ತು ಸಮಾಜದಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಿದರು. ಸಂಚಿ ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ ಸಾಂಗತ್ಯ ಕೃತಿಗಳನ್ನು ಮತ್ತು ಚೆಲ್ವಾಂಬೆ (ಹದಿನೆಂಟನೇ ಶತಮಾನ) 'ವರನಂದಿ ಕಲ್ಯಾಣ' ಕಾವ್ಯವನ್ನು ಬರೆದರು. ಶಿಷ್ಟ ಸಾಹಿತ್ಯದೊಂದಿಗೆ ಮಹಿಳೆಯರು ಜನಪದ ಸಾಹಿತ್ಯವನ್ನೂ ಬೆಳೆಸಿದ್ದಾರೆಂಬುದು ಮಗಳು, ತಾಯಿ, ಸೊಸೆ, ಅತ್ತೆ, ಅಕ್ಕ–ತಂಗಿಯರು ಮುಂತಾದ ಹಲವು ಪಾತ್ರಗಳಲ್ಲಿ ಹೆಣ್ಣುಮಕ್ಕಳು ಹಾಡಿರುವ ಜನಪದ ಗೀತೆಗಳು, ತ್ರಿಪದಿಗಳಿಂದ ತಿಳಿಯುತ್ತದೆ.

ಹೊಸಗನ್ನಡ ಸಾಹಿತ್ಯದ ಕಾಲಘಟ್ಟದಲ್ಲಿಯೂ ಅನೇಕ ಮಹಿಳೆಯರು ಸಾಹಿತ್ಯವನ್ನು ಬೆಳೆಸಿದ್ದಾರೆ. ಆಧುನಿಕ ಶರಣೆ ಜಯದೇವಿ ತಾಯಿ ಲಿಗಾಡೆ, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ತಿರುಮಲಾಂಬಾ ಮತ್ತು ಆರ್. ಕಲ್ಯಾಣಮ್ಮ, ಹಾಸ್ಯ ಬರಹಗಳಿಗೆ ಪ್ರಸಿದ್ಧರಾದ ಟಿ. ಸುನಂದಮ್ಮ, ನವೋದಯ ಕತೆಗಾರ್ತಿ ಕೊಡಗಿನ ಗೌರಮ್ಮ, ಮನೋವಿಜ್ಞಾನದ ಸಾಹಿತ್ಯ ಬರೆದ ತ್ರಿವೇಣಿ, ಪ್ರಸಿದ್ಧ ಕತೆಗಾರ್ತಿ ಸರಸ್ವತಿಬಾಯಿ ರಾಜವಾಡೆ, ಹೆಚ್. ವಿ. ಸಾವಿತ್ರಮ್ಮ, ಹೆಚ್. ಎಸ್. ಪಾರ್ವತಿ, ಡಾ. ಅನುಪಮಾ ನಿರಂಜನ, ಎಂ. ಕೆ. ಇಂದಿರಾ, ವಾಣಿ, ವೈದೇಹಿ, ಗೀತಾ ನಾಗಭೂಷಣ, ಎಂ. ಎಸ್. ವೇದಾ, ವೀಣಾ ಶಾಂತೇಶ್ವರ, ಸಾರಾ ಅಬೂಬಕರ್ ಮುಂತಾದ ಅನೇಕ ಮಹಿಳೆಯರು ಅಕ್ಷರದ ಮೂಲಕ ಕನ್ನಡಮ್ಮನ ಸೇವೆ ಮಾಡಿದ್ದಾರೆ. ಹಾಗೆಯೇ ವಿಜಯಾ ದಬ್ಬೆ, ಕಮಲಾ ಹಂಪನಾ, ಹೆಚ್.ಎಸ್. ಶ್ರೀಮತಿ, ಬಿ.ಎನ್. ಸುಮಿತ್ರಾಬಾಯಿ ಮುಂತಾದವರು ಗಣನೀಯ ಕೊಡುಗೆ ನೀಡಿದ್ದಾರೆ. ಸ್ತ್ರೀವಾದಿ ವಿಮರ್ಶೆಗೆ ಸಂಬಂಧಿಸಿದಂತೆ ಇವರೊಂದಿಗೆ ನೇಮಿಚಂದ್ರ, ಡಾ. ಹೆಚ್.ಎಸ್. ಅನುಪಮಾ, ಬಿ.ಎಂ. ರೋಹಿಣಿ, ಪ್ರೊ. ಸಬಿಹಾ ಭೂಮಿಗೌಡ, ಡಾ. ಮಲ್ಲಿಕಾ ಘಂಟಿ, ಡಾ. ಎಂ.ಎಸ್. ಆಶಾದೇವಿ, ಡಾ. ಗೀತಾ ವಸಂತ, ಡಾ. ದು. ಸರಸ್ವತಿ, ಡಾ. ಎನ್. ಗಾಯತ್ರಿ, ಡಾ. ಸಬಿತಾ ಬನ್ನಾಡಿ, ಡಾ. ಎಂ. ಉಷಾ, ಡಾ. ಎಚ್.ಎಲ್. ಪುಷ್ಪ ಮುಂತಾದವರು ಕನ್ನಡ ವಿಮರ್ಶಾ ಕ್ಷೇತ್ರಕ್ಕೆ ಸ್ವತಂತ್ರ ಕೃತಿ ಮತ್ತು ಅನುವಾದಗಳ ಮೂಲಕ ಕೊಡುಗೆ ನೀಡಿದ್ದಾರೆ.

ಕಳೆದ ನಾಲ್ಕೂವರೆ ದಶಕಗಳಿಂದ 'ವೈದೇಹಿ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿರುವ ಜಾನಕಿ ಶ್ರೀನಿವಾಸಮೂರ್ತಿಯವರು 'ಕುಂದಾಪುರ ಕನ್ನಡ'ವನ್ನು ತಮ್ಮ ಬರಹಗಳಲ್ಲಿ ಬಳಸಿ, ಹಲವು ಕೃತಿಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯದ ವೈಶಿಷ್ಟ್ಯದ ಕುರಿತು ವೈದೇಹಿಯವರ ಸಾಹಿತ್ಯವು ಈಗಾಗಲೇ

ಜನಪ್ರಿಯವಾಗಿರುವ ಸಿದ್ಧಮಾದರಿಗಳನ್ನು ತೊರೆದು, ತನ್ನದೇ ಆದ ಹಾದಿಯನ್ನು ಕಂಡುಕೊಂಡಿದೆ. ಓದುಗರು ಮತ್ತು ವಿಮರ್ಶಕರು ಯಾವುದೇ ಮಾನದಂಡದಿಂದ ನೋಡಿದರೂ ಇಂದು ಅವರ ಸಾಧನೆ ಮಹತ್ವದ್ದಾಗಿ ಕಾಣುತ್ತದೆ ಎಂದು ಕೆ. ವಿ. ಸುಬ್ಬಣ್ಣನವರು ಹೇಳುತ್ತಾರೆ. ಹೆಣ್ಣುಮಕ್ಕಳ ಜೀವನದ ಕುರಿತು ಹೆಚ್ಚು ಚಿಂತಿಸಿರುವ ವೈದೇಹಿಯವರ ಬರಹಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಮಗೆ ಅವರ ಕಥಾವಸ್ತು–ತಂತ್ರ ಮತ್ತು ಶೈಲಿಗಳಲ್ಲಿರುವ ವೈವಿಧ್ಯತೆ ತಿಳಿಯುತ್ತದೆ.

ಸಬಿತಾ ಬನ್ನಾಡಿಯವರು 'ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕತೆ' ಎಂಬ ಲೇಖನದಲ್ಲಿ ವೈದೇಹಿ ಅವರ ಸಾಹಿತ್ಯದ ವಸ್ತುವಿನ ಕುರಿತು "ಮುಖ್ಯವಾಗಿ, ಬಾಹ್ಯ ದುಡಿಮೆಯ ಕಣ್ಣಿಗೆ ಕಾಣುವ ಬವಣೆಗಳ ಹೆಂಗಸರಿಗಿಂತಲೂ, ಮನೆ ಜಗತ್ತಿನ ತಳಿಕಿಂಡಿಗಳ ನೆಳಲು ಬೆಳಕಿನಲ್ಲಿ ಕಂಡೂ ಕಾಣದಂತಿರುವ ಸಂಗತಿಗಳ ಮೂಲಕವೇ ಇಲ್ಲಿನ ಸಂಸ್ಕೃತಿಯ ಹಲವು ಸ್ತರಗಳನ್ನು ವಿಶ್ಲೇಷಿಸುವ ಕ್ರಮ ಅವರಲ್ಲಿ ಕಂಡುಬರುತ್ತದೆ." (ಸಬಿತಾ ಬನ್ನಾಡಿ, 2018, ಪು. 97) ಎಂದಿದ್ದಾರೆ.

'ನಡುಮನೆ ಮತ್ತು ಅಡುಗೆಮನೆಯ ಮಹಿಳಾಲೋಕ' ವೈದೇಹಿಯವರ ಸಾಹಿತ್ಯದ ಆಸಕ್ತಿಯ ಕೇಂದ್ರವಾಗಿದೆ. ಎಲ್ಲರಿಗೂ ಕಾಣುವಂತಿರುವ ಸತ್ಯದ ಹಿಂದೆ ಕಾಣದಿರುವ ಸತ್ಯವೊಂದಿರುತ್ತದೆ. ಅಂತಹಾ 'ಅವಿತಿಟ್ಟ ಸತ್ಯ' ಅಥವಾ 'ಹಿಡನ್ ಟ್ರುತ್' ಅನ್ನು ಹೊರಗೆಳೆಯುವುದೇ ವೈದೇಹಿಯವರ ಕತೆಗಳ ಮುಖ್ಯ ಉದ್ದೇಶ. ಅವರ 'ಅಕ್ಕು' ಕತೆ ಇದಕ್ಕೆ ಉದಾಹರಣೆಯಾಗಿದೆ.

ವೈದೇಹಿಯವರ ಬರವಣಿಗೆಗೆ ಬಾಲ್ಯದಿಂದ ಇಲ್ಲಿಯವರೆಗೂ ಅವರು ಕಂಡ ಹಲವು ಮನುಷ್ಯರು ಮತ್ತು ಅವರ ಜೀವನಕ್ರಮದ ಕುರಿತ ಆಲೋಚನೆ–ಚಿಂತನೆಗಳೇ ಕಾರಣ. ಬದುಕಿನ ಸಂಕೀರ್ಣತೆಯನ್ನು ಈ ಚಿಂತನೆಯ ಬೆಳಕಿನಲ್ಲಿ ಬಿಡಿಸಿನೋಡಿ ಅರಿಯುವುದೇ ಅವರ ಬರವಣಿಗೆಯ ಹಿಂದಿನ ಮುಖ್ಯ ಉದ್ದೇಶ. ತಮ್ಮ ಬರವಣಿಗೆಯ ಮೂಲಪ್ರೇರಣೆಯಾಗಿದ್ದ ತಾಯಿಯ ಬದುಕು ತಮ್ಮ ಮೇಲೆ ಬೀರಿದ ಪ್ರಭಾವವನ್ನು "ನನ್ನ ತಾಯಿಯು ಎಂದಿಗೂ ತಲೆಬಾಗದವಳಾಗಿ, ಅಹಂಕಾರವನ್ನು ತನ್ನ ರಕ್ಷಣೆಗಾಗಿ ಬಳಸಿಕೊಂಡವಳು, ಸ್ವತಂತ್ರ ಮನಸ್ಸನ್ನು ಜೀವನದುದ್ದಕ್ಕೂ ಸಾಧಿಸಿ ಕಾಪಾಡಿಕೊಂಡು ಬಂದ ಅಪ್ಪಟ ವ್ಯಕ್ತಿತ್ವದವಳು ನಾನಾದರೂ ಇವತ್ತು ಏನು ಬರೆದಿದ್ದೇನೆಯೋ ಅದೆಲ್ಲವೂ ಅವಳೇ ಬರೆಯಬಹುದಾಗಿದ್ದ ನೂರರಲ್ಲಿ ಎರಡಂಶ ಅಷ್ಟೇ" (ವೈದೇಹಿ, ಎರ. ಮು. 2017, ಪು. 147) ಎಂದು ವೈದೇಹಿ ತಿಳಿಸುತ್ತಾರೆ.

ಕುಂದಾಪುರದಲ್ಲಿರುವ ವೈದೇಹಿಯವರ ಮನೆಯ ಹಿತ್ತಲು ಅಥವಾ ಒಳ ಅಂಗಳಕ್ಕೆ ಸಮಾಜದ ಎಲ್ಲಾ ಸ್ತರಗಳ ಜನರೂ ಬಂದು, ಅವರಮ್ಮನ ಬಳಿಯಲ್ಲಿ ತಮ್ಮ ಕಷ್ಟ–ಸುಖಗಳನ್ನು ಹೇಳಿಕೊಂಡು, ಸಹಾಯವನ್ನು–ಸಲಹೆಯನ್ನೂ ಕೇಳುತ್ತಿದ್ದರು. ಬಾಲ್ಯದಿಂದ ಇವುಗಳನ್ನು ನೋಡುತ್ತಿದ್ದ ವೈದೇಹಿಯವರ ಕಣ್ಣಿಗೆ ಮನೆಯ ಒಳ ಅಂಗಳ ಅಥವಾ ಹಿತ್ತಲು ಅವರಮ್ಮನ ಸಾಮ್ರಾಜ್ಯವಾಗಿತ್ತು. ಹಾಗೆ ಬಂದವರ

ಮಾತುಕತೆಗಳನ್ನು ಕೇಳುತ್ತಲೇ ಬೆಳೆದ ವೈದೇಹಿಯವರು ಬರವಣಿಗೆ ಆರಂಭಿಸಿದಾಗ, ಅವರಿಗೆ ತಾನು ಕಂಡು–ಕೇಳಿದ ವಾಸ್ತವಿಕ ಕತೆಗಳು ಸಣ್ಣಕಥಾ ಪ್ರಕಾರಕ್ಕೆ ಸರಿಯಾಗಿ ಹೊಂದುತ್ತವೆ ಎನಿಸಿತು.

ಕುಂದಾಪುರದಲ್ಲಿ ಹುಟ್ಟಿದ ವೈದೇಹಿಯವರು ತಮ್ಮ 23ನೇ ವರ್ಷಕ್ಕೆ 1968ರಲ್ಲಿ ಕೆ. ಎಲ್. ಶ್ರೀನಿವಾಸಮೂರ್ತಿಯವರನ್ನು ಮದುವೆಯಾಗಿ ಶಿವಮೊಗ್ಗಕ್ಕೆ ತೆರಳಿದರು. 1968ರಿಂದ 1981ರವರೆಗಿನ ಹದಿಮೂರು ವರ್ಷಗಳನ್ನು ಶಿವಮೊಗ್ಗದಲ್ಲಿ ಕಳೆದು, ಉಡುಪಿಗೆ ಹಿಂತಿರುಗಿದರು. ಶಿವಮೊಗ್ಗ ಅವರನ್ನು ಲೌಕಿಕ ಬದುಕಿನಾಚೆಯ ಸಾಹಿತ್ಯ–ಸಾಂಸ್ಕೃತಿಕ ವಲಯಗಳಿಗೆ ತೆರೆದುಕೊಳ್ಳುವಂತೆ ಮಾಡಿತು. ಅಲ್ಲಿಯ ಅನೇಕ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮ ಪತಿಯೊಂದಿಗೆ ಭಾಗವಹಿಸುತ್ತಿದ್ದ ವೈದೇಹಿಯವರ ಬರವಣಿಗೆ ಶಿವಮೊಗ್ಗದಲ್ಲಿದ್ದಾಗ ಪ್ರಾರಂಭವಾಯಿತು. ಅವರ 'ಮರ ಗಿಡ ಬಳ್ಳಿ' ಎಂಬ ಕಥಾ ಸಂಕಲನ 1979ರಲ್ಲಿ ಹೆಗ್ಗೋಡಿನ ಅಕ್ಷರ ಪ್ರಕಾಶನದಿಂದ ಪ್ರಕಟವಾಯಿತು.

ವೈದೇಹಿಯವರು ಸಮಾಜವನ್ನು ವಾಸ್ತವದ ನೆಲೆಯಲ್ಲಿ ಚಿತ್ರಿಸಿದ್ದಾರೆ. ತಾವು ಎಳವೆಯಲ್ಲಿ ಕಂಡ ಜೀವನದ ಹಲವು ಮಗ್ಗುಲುಗಳನ್ನು ಹೆಣ್ಣುಮಕ್ಕಳಿಗೆ ಪರಿಚಯಿಸಿದ್ದಾರೆ. ತಮ್ಮ ವೈವಿಧ್ಯಮಯ ಸಾಹಿತ್ಯ ಬರೆವಣಿಗೆಯಲ್ಲಿ ಸಂಭಾಷಣೆಗಳಲ್ಲಿ ಅವರು ಬಳಸಿರುವ ಭಾಷೆ ಕುಂದಾಪುರ ಪರಿಸರದ ಆಡುಮಾತಾದರೂ, ಅದನ್ನೂ ಕರ್ನಾಟಕದ ಉಳಿದ ಪ್ರದೇಶದ ಕನ್ನಡಿಗರಿಗೆ ಅರ್ಥವಾಗುವಂತೆ ಸರಳೀಕರಿಸಿದ್ದಾರೆ. ತಮ್ಮ ಸರಳ ಭಾಷೆ, ಚಿಕ್ಕ ವಾಕ್ಯಗಳಲ್ಲಿನ ಕಲಾತ್ಮಕತೆಯ ಮೂಲಕವೇ ವೈದೇಹಿಯವರ ಸಾಹಿತ್ಯ ಓದುಗರನ್ನು ಸೆಳೆಯುತ್ತದೆ. ಭಾಷಾದೃಷ್ಟಿ, ಪ್ರಾದೇಶಿಕ ಸಂಸ್ಕೃತಿ ಹಾಗೂ ಅವರ ಸಾಮಾಜಿಕ ಚಿಂತನೆಯ ಕಾರಣದಿಂದ ಇದರ ಅಧ್ಯಯನವು ಮುಖ್ಯವೆನಿಸುತ್ತದೆ.

1.1. ಅಧ್ಯಯನದ ಉದ್ದೇಶ

ವೈದೇಹಿಯವರ ಸಾಹಿತ್ಯವನ್ನು ಆಧರಿಸಿ ಇದುವರೆಗೆ ಹಲವು ಅಧ್ಯಯನಗಳು ನಡೆದಿವೆ. ಅದರಲ್ಲಿ ಹೆಚ್ಚಿನವು ಅವರ ನಿರ್ದಿಷ್ಟ ಸಾಹಿತ್ಯ ಪ್ರಕಾರಗಳನ್ನು ಆಧರಿಸಿದ ಅಧ್ಯಯನಗಳು ಮತ್ತು ಬೇರೆ ಸಾಹಿತಿಗಳ ಸಾಹಿತ್ಯದೊಂದಿಗೆ ಹೋಲಿಸಿ ಮಾಡಿದ ತೌಲನಿಕ ಅಧ್ಯಯನಗಳಾಗಿವೆ. ವೈದೇಹಿಯವರ ಸಾಹಿತ್ಯದ ಕುರಿತು ಬಂದ ಹೆಚ್ಚಿನ ಸಂಶೋಧನೆಗಳು, ಕಿರುಸಂಶೋಧನೆಗಳು ಹಾಗೂ ಸಂಪ್ರಬಂಧಗಳು **ವೈದೇಹಿಯವರ ಸಾಹಿತ್ಯದ ಯಾವುದೋ ಒಂದು ಅಥವಾ ಎರಡು ಪ್ರಕಾರಗಳನ್ನು**, ಅದರಲ್ಲೂ ಮುಖ್ಯವಾಗಿ **ಅವರ ಸಣ್ಣಕತೆಗಳನ್ನೇ ಆಧರಿಸಿ ನಡೆದ** ಅಧ್ಯಯನಗಳಾಗಿವೆ. ನಾಲ್ಕೂವರೆ ದಶಕಗಳಿಂದ ಬರವಣಿಗೆಯಲ್ಲಿ ತೊಡಗಿರುವ ವೈದೇಹಿ ಅವರ ಸಾಹಿತ್ಯದ ಕುರಿತು ಬಂದಿರುವ ವಿಮರ್ಶೆಗಳು ಕಡಿಮೆ. ಕೆಲವು ವಿಮರ್ಶಕರು ಅವರ ಹೆಸರನ್ನು ಮಾತ್ರ ಉಲ್ಲೇಖಿಸಿದ್ದಾರೆ.

2003ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ **ಸುರೇಖಾ** ಅವರು ಆವರೆಗಿನ ವೈದೇಹಿಯವರ ಸಮಗ್ರ ಸಾಹಿತ್ಯವನ್ನು ಕುರಿತು **'ವೈದೇಹಿಯವರ ಸಾಹಿತ್ಯ: ಒಂದು ಅಧ್ಯಯನ'** ಎಂಬ ಸಂಶೋಧನೆ ನಡೆಸಿದ್ದರು. ಈ ಸಂಶೋಧನೆಯಲ್ಲಿ ಅವರು ಆವರೆಗೆ ಪ್ರಕಟವಾದ ವೈದೇಹಿಯವರ ನಾಲ್ಕು ಕಥಾ ಸಂಕಲನಗಳು, ಎರಡು ಕವನ ಸಂಕಲನಗಳು, ಎರಡು ಪ್ರಬಂಧ ಸಂಕಲನಗಳು, ಸ್ಮೃತಿಕಥನ, ಕಾದಂಬರಿ, ಮಕ್ಕಳ ಕಥಾ ಸಂಕಲನ, ಎಂಟು ಮಕ್ಕಳ ನಾಟಕಗಳು, ಎರಡು ಅನುವಾದ ಕೃತಿಗಳನ್ನು ಸಂಶೋಧನೆಯ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

ವೈದೇಹಿಯವರ ಸಮಗ್ರ ಸಾಹಿತ್ಯವನ್ನು ಇಟ್ಟುಕೊಂಡು **'ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆ'** ಎಂಬ ಯಾವ ಸಂಶೋಧನೆಗಳೂ ಈವರೆಗೆ ಬಂದಿಲ್ಲ. 'ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ' ಎಂಬುದನ್ನು ಅವರ ಕತೆ, ಕಾದಂಬರಿಗಳ ಆಧಾರದಲ್ಲಿ ಹಲವು ಸಂಶೋಧನಾ ಪ್ರಬಂಧಗಳಲ್ಲಿ ಉಪಶೀರ್ಷಿಕೆಯಾಗಿ ಬಳಸಿಕೊಳ್ಳಲಾಗಿದೆ. ಇನ್ನೂ ಕೆಲವು ಸಂಶೋಧನಾ ಮಹಾಪ್ರಬಂಧಗಳಲ್ಲಿ ಒಂದು ಅಧ್ಯಾಯವಾಗಿ ಮಾತ್ರ ಬಳಸಿಕೊಳ್ಳಲಾಗಿದೆ. ಕರಾವಳಿಯಲ್ಲಿ ಹುಟ್ಟಿ ಬೆಳೆದ ವೈದೇಹಿಯವರ ಸಾಹಿತ್ಯದಲ್ಲಿ ಕಂಡುಬರುವ ಪ್ರಾದೇಶಿಕತೆ ಮತ್ತು ಸಾಮಾಜಿಕ ಚಿಂತನೆಗಳ ಪ್ರತಿನಿಧಿತ್ವವನ್ನು ಅರಿಯುವ ಕಾರಣಕ್ಕಾಗಿ ಈ ಅಧ್ಯಯನ ಮುಖ್ಯವಾಗುತ್ತದೆ.

ವೈದೇಹಿಯವರು ಮತ್ತು ಅವರ ಸಾಹಿತ್ಯದ ವಿಶಿಷ್ಟತೆಯ ಕುರಿತು ಹಲವರು ಮಾತನಾಡಿದ್ದಾರೆ. ಅವುಗಳ ಓದು ಈ ಸಂಶೋಧನೆಗೆ ಪ್ರೇರಣೆಯಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ದಾಖಲಿಸುತ್ತೇನೆ–

ವಿಜಯಾ ದಬ್ಬೆಯವರು 'ನಮ್ಮ ವೈದೇಹಿಯ ಉಡಿಗೊಂದು ಅತ್ತಿಮಬ್ಬೆ' ಎಂಬ ಲೇಖನದಲ್ಲಿ ವೈದೇಹಿಯವರ ಸಾಹಿತ್ಯದ ಕುರಿತು "ವೈದೇಹಿ ಅವರು ನಮ್ಮ ನಡುವಿನ ಅತ್ಯಂತ ಪ್ರತಿಭಾವಂತ ಲೇಖಕಿ, ತಮ್ಮ ಕತೆಗಳಲ್ಲಿ ವೈದೇಹಿ ಕಾಣಿಸುವ ಜೀವನದ ಅಂತರಂಗ, ಮಗ್ಗುಲುಗಳಲ್ಲಿ ನಮ್ಮ ಸಾಂಸ್ಕೃತಿಕ ಲೋಕದ ಅನಾವರಣಗೊಂಡಿರದ ಕೆಲವು ಮುಖ್ಯವಾದ, ಕತ್ತಲ ಮೂಲೆಗಳು ಅನಾವರಣಗೊಂಡಿವೆ." (ವಿಜಯಾ ದಬ್ಬೆ, 2018, ಪು. 7) ಎಂದಿದ್ದಾರೆ.

ವೈದೇಹಿಯವರ ಒಟ್ಟು ಸಾಹಿತ್ಯವನ್ನು ಕುರಿತು **ಜೋಗಿಯವರು** ತಮ್ಮ **'ವೈದೇಹಿ: ಆರ್ದ್ರಗರ್ವದ ಹುಡುಗಿ ನಮ್ಮ ಗೌರಿ'** ಎಂಬ ಲೇಖನದಲ್ಲಿ "ಕಾವ್ಯ, ಕತೆ, ಪ್ರಬಂಧ, ಹೀಗೆ ತನ್ನ ಸಹಜ ಅಭಿವ್ಯಕ್ತಿ ಮತ್ತು ಲಹರಿಗಳಲ್ಲಿ ಬರೆಯುತ್ತಾ ಬರೆಯುತ್ತಾ ವೈದೇಹಿ ತನ್ನನ್ನೂ ಮೀರಿ ಬೆಳೆದುಬಿಟ್ಟರು. 'ಬಿಂದು ಬಿಂದಿಗೆ' ಕವನ ಸಂಕಲನದಲ್ಲಿ, 'ಮರ ಗಿಡ ಬಳ್ಳಿ', 'ಗೋಲ' ಮುಂತಾದ ಕತೆಗಳಲ್ಲಿ, 'ಅಂತರಂಗದ ಪುಟಗಳ'ಲ್ಲಿ, 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ'ಗಳಲ್ಲಿ, ಬರೆದ ಒಂದೇ ಒಂದು ಕಾದಂಬರಿಯಲ್ಲಿ, 'ಮಲ್ಲಿನಾಥನ

ಧ್ಯಾನ'ದಲ್ಲಿ, 'ಜಾತ್ರೆ'ಯ ಏಕಾಂತದಲ್ಲಿ, ವೈದೇಹಿ ತಾನೇ ತಾನಾಗಿ ಕಾಣಿಸಿಕೊಂಡರು." (ಜೋಗಿ, 2018, ಪು. 16) ಎನ್ನುತ್ತಾರೆ.

ಜಿ. ಎನ್. ರಂಗನಾಥರಾವ್ ಅವರು "ಪಕ್ವವಾದ ಜೀವನಾನುಭವ ಮಾತಾಗಿ, ಮಾತು ಧ್ವನಿಯಾಗಿ, ಮೌನದ ಚಿಂತನೆಗೆ ಚಾಚಿಕೊಳ್ಳುವ ವೈದೇಹಿಯವರ ಈ ಸೃಜನಶೀಲ ಪ್ರತಿಭಾಪರಿ ಅನನ್ಯವಾದದ್ದು." (ಜಿ. ಎನ್. ರಂಗನಾಥರಾವ್, 2018, ಪು. 51) ಎಂದರೆ "ಅನುಭವ, ಸಂವೇದನೆ ಮತ್ತು ಅಭಿವ್ಯಕ್ತಿಗಳೆಂಬ ಮೂರು ನೆಲೆಗಳಲ್ಲಿಯೂ ವೈದೇಹಿಯವರು ಬಹುಮುಖ್ಯ ಲೇಖಕರು." (ಹೆಚ್. ಎಸ್. ರಾಘವೇಂದ್ರ ರಾವ್, 2018, ಪು. 55) ಎಂದು **ಹೆಚ್. ಎಸ್. ರಾಘವೇಂದ್ರರಾವ್** ಅವರು ಹೇಳುತ್ತಾರೆ.

ಈ ಮೇಲಿನ ಸಾಲುಗಳು ವೈದೇಹಿಯವರ ಸಾಹಿತ್ಯದಲ್ಲಿ ಮೂಡಿರುವ ಅವರ ಆಲೋಚನಾ ವೈಶಿಷ್ಟ್ಯವನ್ನು ತಿಳಿಸುವುದರೊಂದಿಗೆ ಓದುಗರಲ್ಲಿ ಕುತೂಹಲವನ್ನು ಹುಟ್ಟಿಸುವ ಮೂಲಕ ಅವರನ್ನು ಅಧ್ಯಯನಶೀಲರನ್ನಾಗಿಸುತ್ತವೆ. ಇಲ್ಲಿರುವ ಪ್ರಸಿದ್ಧರ ಹೇಳಿಕೆಗಳು ವೈದೇಹಿಯವರ ಬರೆವಣಿಗೆಯಲ್ಲಿರುವ ಸಾಮಾಜಿಕ ಕಾಳಜಿ ಹಾಗೂ ಶ್ರದ್ಧೆಗಳನ್ನು ತಿಳಿಸುತ್ತವೆ.

ಇವರಂತೆಯೇ ಟಿ. ಪಿ. ಅಶೋಕ, ಪ್ರೊ. ಮುರಳಿಧರ ಉಪಾಧ್ಯ ಹಿರಿಯಡ್ಕ, ಜಿ. ರಾಜಶೇಖರ, ಡಾ. ರಾಜೇಂದ್ರ ಚೆನ್ನಿ, ಡಾ. ಶಿವರಾಮ ಪಡಿಕ್ಕಲ್, ಡಾ. ಎಂ. ಎಸ್. ಆಶಾದೇವಿ, ಬಿ. ಎನ್. ಸುಮಿತ್ರಾಬಾಯಿ, ಬಿ. ವಿ. ಕಕ್ಕಿಲ್ಲಾಯ, ಸುಮತೀಂದ್ರ ನಾಡಿಗ, ಎಸ್. ಆರ್. ವಿಜಯಶಂಕರ ಮುಂತಾದ ಹಲವು ವಿಮರ್ಶಕರು ವೈದೇಹಿಯವರು ಬರೆದ ವೈವಿಧ್ಯಮಯ ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಿಸಿ ಲೇಖನಗಳನ್ನು ಬರೆದಿದ್ದಾರೆ. ವೈದೇಹಿಯವರ ಕುರಿತು **'ವೈದೇಹಿ ಜೀವನ ಕೃತಿಗಳ ಸಮೂಹ ಶೋಧ'** ಎಂಬ ಲೇಖನಗಳ ಸಂಕಲನ ಮತ್ತು **'ಇರುವಂತಿಗೆ'** ಎಂಬ ಗೌರವ ಗ್ರಂಥಗಳು ಸಂಪಾದಿಸಲ್ಪಟ್ಟು, ಪ್ರಕಟಗೊಂಡಿವೆ. ಈ ಕೃತಿಗಳಲ್ಲಿನ ವಿಮರ್ಶಕರ ಬರಹಗಳನ್ನು, ಇತರ ವಿಮರ್ಶಾ ಬರಹಗಳಲ್ಲಿನ ವಿಶ್ಲೇಷಣೆಗಳನ್ನು, ಅಭಿಪ್ರಾಯಗಳನ್ನು ಅಧ್ಯಯನ ಮಾಡುವುದರೊಂದಿಗೆ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯಲ್ಲಿ ಕಂಡುಕೊಂಡ ಹೊಸ ಸಂಗತಿಗಳನ್ನು ಇಲ್ಲಿ ತಿಳಿಸುವ ಉದ್ದೇಶವನ್ನು ಈ ಸಂಶೋಧನೆಯು ಹೊಂದಿದೆ.

1.2. ಅಧ್ಯಯನದ ವ್ಯಾಪ್ತಿ

ನನ್ನ ಸಂಶೋಧನೆಗೆ ಆಯ್ಕೆ ಮಾಡಿದ ವಿಷಯದ ವ್ಯಾಪ್ತಿಯನ್ನು ಐದು ಅಧ್ಯಾಯಗಳಲ್ಲಿ ಅಡಕಗೊಳಿಸಿದ್ದೇನೆ ಹಾಗೂ ಆ ಅಧ್ಯಾಯಗಳಲ್ಲಿ ವಿವರಿಸಲಾದ ವಿಷಯಗಳನ್ನು ಈ ಮುಂದಿನಂತೆ ನೋಡಬಹುದು:

ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿ, ವೈದೇಹಿಯವರ ಸಾಹಿತ್ಯದ ಕುರಿತು ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮತ್ತು ಅಧ್ಯಯನದ ವೈಧಾನಿಕತೆಯ ಬಗೆಗೆ ಪ್ರಸ್ತಾವನೆಯಲ್ಲಿ ಚರ್ಚಿಸಲಾಗಿದೆ.

'ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ' ಎಂಬ ಒಂದನೇ ಅಧ್ಯಾಯದಲ್ಲಿ ಪ್ರದೇಶ, ಪ್ರಾದೇಶಿಕತೆ, ಪ್ರಾದೇಶಿಕತೆಯ ಅಧ್ಯಯನ ಹಾಗೂ ಪ್ರಾದೇಶಿಕ ಸಂಸ್ಕೃತಿ ಮತ್ತು ಅದರ ಸ್ವರೂಪಗಳು, ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನದಿಂದ ಓದುಗರಿಗಾಗುವ ಉಪಯೋಗ ಮತ್ತು ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನದ ಮಹತ್ವವನ್ನು ಅವಲೋಕಿಸಲಾಗಿದೆ.

'ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ' ಎಂಬ ಎರಡನೇ ಅಧ್ಯಾಯದಲ್ಲಿ ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯು ಹೇಗೆ ವ್ಯಕ್ತವಾಗಿದೆ ಎಂಬುದನ್ನು ಅವರ ಕತೆ, ಕಾದಂಬರಿ, ಪ್ರಬಂಧಗಳು, ಆತ್ಮಕಥಾ ನಿರೂಪಣೆಗಳನ್ನು ಒಳಗೊಂಡ ಕಥನ ಸಾಹಿತ್ಯ, ಕವನಗಳು ಹಾಗೂ ಮಕ್ಕಳ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ರೀತಿಯನ್ನು ವಿಶ್ಲೇಷಣೆ ಮಾಡಲಾಗಿದೆ.

'ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ' ಎಂಬ ಮೂರನೇ ಅಧ್ಯಾಯದಲ್ಲಿ ಸಮಾಜಶಾಸ್ತ್ರೀಯ ದೃಷ್ಟಿಕೋನಗಳು, ಸಮಾಜಶಾಸ್ತ್ರೀಯ ಚಿಂತಕರ ವ್ಯಾಖ್ಯೆಗಳು ಮತ್ತು ಸಮಾಜಕೇಂದ್ರಿತ ಸಾಹಿತ್ಯ ವಿಮರ್ಶೆಯ ನೆಲೆಯಿಂದ ಚಾರಿತ್ರಿಕ ವಿಮರ್ಶೆ, ಮಾರ್ಕ್ಸ್‌ವಾದಿ ವಿಮರ್ಶೆ ಮತ್ತು ಸ್ತ್ರೀವಾದಿ ವಿಮರ್ಶೆಗಳ ಆಧಾರದಲ್ಲಿ ಸಾಮಾಜಿಕ ಚಿಂತನೆಯ ಅರ್ಥವನ್ನು ವಿವರಿಸಲಾಗಿದೆ. ಸಾಮಾಜಿಕ ಬದಲಾವಣೆ ತರುವುದರಿಂದ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯ ಅಧ್ಯಯನವು ಮಹತ್ವದ್ದಾಗಿದೆ ಎಂದು ತಿಳಿಸಲಾಗಿದೆ.

'ವೈದೇಹಿಯವರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ' ಎಂಬ ನಾಲ್ಕನೇ ಅಧ್ಯಾಯದಲ್ಲಿ ವೈದೇಹಿಯವರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯು ಹೇಗೆ ವ್ಯಕ್ತವಾಗಿದೆ ಎಂಬುದನ್ನು ಅವರ ಕತೆ, ಕಾದಂಬರಿ, ಪ್ರಬಂಧಗಳು, ಆತ್ಮಕಥಾ ನಿರೂಪಣೆಗಳನ್ನು ಒಳಗೊಂಡ ಕಥನ ಸಾಹಿತ್ಯ, ಕವನಗಳು ಹಾಗೂ ಮಕ್ಕಳ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ರೀತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ವೈದೇಹಿಯವರ ಸ್ಥಾನ ಹೇಗೆ ವಿಶಿಷ್ಟವಾಗಿದೆ ಎಂಬುದನ್ನು ಐದನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಉಪಸಂಹಾರದಲ್ಲಿ ವೈದೇಹಿಯವರ ಸಾಹಿತ್ಯದ ಕುರಿತ ಈ ಅಧ್ಯಯನವನ್ನು ಹೇಗೆ ನಡೆಸಲಾಗಿದೆ ಎಂಬುದನ್ನು ವಿವರಿಸಿ, ವೈದೇಹಿಯವರ ಒಟ್ಟು ಸಾಹಿತ್ಯದಲ್ಲಿ ಸಂಶೋಧನೆಯ ಮೂಲಕ ಕಂಡುಕೊಂಡ ಫಲಿತಗಳನ್ನು ಮತ್ತು ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ತಿಳಿಸಲಾಗಿದೆ.

ಅನುಬಂಧದಲ್ಲಿ ಆಕರ ಗ್ರಂಥಗಳು, ಪರಾಮರ್ಶನ ಗ್ರಂಥಗಳು, ಲೇಖನಗಳು ಮತ್ತು ಕೃತಿಕಾರರ ಪಟ್ಟಿಯನ್ನು ನೀಡಲಾಗಿದೆ.

ಅನುವಾದಿತ ಕೃತಿಗಳಲ್ಲಿ ಮೂಲದ ವಿಷಯ-ವಸ್ತುಗಳೇ ಇರುತ್ತವಾದ ಕಾರಣ ನನ್ನ ಈ ಪರಿಕಲ್ಪನಾಧಾರಿತ ಸಂಶೋಧನೆಗೆ 'ಪ್ರಾದೇಶಿಕ ಸಂಸ್ಕೃತಿ' ಮತ್ತು 'ಸಾಮಾಜಿಕ ಚಿಂತನೆ'ಗಳನ್ನು ಹೊಂದಿರುವ ವೈದೇಹಿಯವರ ಸೃಜನಶೀಲ ಕೃತಿಗಳನ್ನು ಮಾತ್ರವೇ ಆಯ್ಕೆಮಾಡಿದ್ದೇನೆ.

'ಮರ ಗಿಡ ಬಳ್ಳಿ' (1979), 'ಅಂತರಂಗದ ಪುಟಗಳು' (1984), 'ಗೋಲ' (1986), 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' (1991), 'ಅಮ್ಮಚ್ಚಿಯೆಂಬ ನೆನಪು' (2000), 'ಕ್ರೌಂಚ ಪಕ್ಷಿಗಳು' (2005), 'ಕತೆ ಕತೆ ಕಾರಣ' (2016), 'ಸಲ್ಮಾ ಮತ್ತು ಸುರಭಿ' (2020) ಎಂಬ ಎಂಟು ಕಥಾ ಸಂಕಲನಗಳನ್ನು, 'ಅಸ್ಪೃಶ್ಯರು' (1982. ಪ್ರ. 1992) ಕಾದಂಬರಿಯನ್ನು ವೈದೇಹಿಯವರು ಬರೆದಿದ್ದಾರೆ. 'ಮಲ್ಲಿನಾಥನ ಧ್ಯಾನ' (1996) ಹಾಗೂ 'ಮೇಜು ಮತ್ತು ಬಡಗಿ' (2007) ಎಂಬ ಎರಡು ಪ್ರಬಂಧ ಸಂಕಲನಗಳು, 'ಜಾತ್ರೆ' (1998) ಎಂಬ ಸ್ಮೃತಿಕಥನ, 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾದ 'ಹರಿವ ನೀರು' (2012) ಎಂಬ ಹೆಸರಿನ ಅಂಕಣ ಬರೆಹಗಳ ಸಂಕಲನವನ್ನು ಅದೇ ಹೆಸರಿನಲ್ಲಿ ಕೃತಿಯಾಗಿ ವೈದೇಹಿಯವರು ಪ್ರಕಟಿಸಿದ್ದಾರೆ.

ಕೋ. ಲ. ಕಾರಂತರ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' (1981), ಸೇಡಿಯಾಪು ಕೃಷ್ಣಭಟ್ಟರ 'ಸೇಡಿಯಾಪು ನೆನಪುಗಳು' (1996), ಬಿ. ವಿ ಕಾರಂತರ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' (2003), ಸರಸ್ವತಿಬಾಯಿ ರಾಜವಾಡೆಯವರ 'ಮುಂತಾದ ಕೆಲಪುಟಗಳು' (2008) ಇತ್ಯಾದಿ ಆತ್ಮಚರಿತ್ರೆಗಳ ನಿರೂಪಣೆಗಳನ್ನೂ ವೈದೇಹಿಯವರು ಮಾಡಿದ್ದಾರೆ. ಗದ್ಯರೂಪದಲ್ಲಿರುವ ಈ ಎಲ್ಲಾ ಕೃತಿಗಳಲ್ಲಿನ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯನ್ನು ಪ್ರತಿನಿಧಿಸುವ ಅಂಶಗಳನ್ನು ಚರ್ಚಿಸಲಾಗಿದೆ.

ವೈದೇಹಿಯವರು 'ಬಿಂದು ಬಿಂದಿಗೆ' (1990), 'ಪಾರಿಜಾತ' (1999), 'ಹೂವ ಕಟ್ಟುವ ಕಾಯಕ' (2011) ಮತ್ತು 'ದೀಪದೊಳಗಿನ ದೀಪ' (2020) ಎಂಬ ನಾಲ್ಕು ಕವನ ಸಂಕಲನಗಳನ್ನು ಪ್ರಕಟಿಸಿದ್ದು, ಈ ಸಂಕಲನಗಳಲ್ಲಿರುವ ಕವನಗಳು, ಹನಿಗವನಗಳು ಮತ್ತು ಚುಟುಕುಗಳು ಪ್ರತಿನಿಧಿಸುವ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯನ್ನು ಅಧ್ಯಯನ ಮಾಡಲಾಗಿದೆ.

‘ಧಾಂ ಧೂಂ ಸುಂಟರಗಾಳಿ’, ‘ಮೂಕನ ಮಕ್ಕಳು’, ‘ಗೊಂಬೆ ಮ್ಯಾಕ್‌ಬೆತ್’, ‘ಢಣಾ ಡಂಗುರ’ ಮತ್ತು ‘ನಾಯಿಮರಿ ನಾಟಕ’ (1992), ‘ಸೂರ್ಯಬಂದ’, ‘ಝುಂ ಝಾಂ ಆನೆ ಮತ್ತು ಪುಟ್ಟ’, ‘ಕೋಟು ಗುಮ್ಮ’ (1997) ‘ಹಕ್ಕಿ ಹಾಡು’, ‘ಅರ್ಧಚಂದ್ರ ಮಿಠಾಯಿ’ (2002), ‘ಸೋಮಾರಿ ಓಳ್ಯಾ’ (2004), ‘ಅಳಿಲು ರಾಮಾಯಣ’, ‘ಸತ್ರು ಅಂದ್ರೆ ಸಾಯ್ತಾರ’ (2009), ಆನೆ ಬಂತೋ ಆನೆ, ರಾಜಾ ಲಿಯರ್ (2015), ‘ಉಂ ಅಂದ ಉಹುಂ ಅಂದ’ ಮತ್ತು ‘ಗೆದ್ದಲು ಪಂಡಿತರು’ ಎಂಬ ಹದಿನೇಳು ಮಕ್ಕಳ ನಾಟಕಗಳನ್ನು ಮತ್ತು 2014ರಲ್ಲಿ ‘ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು’ ಎಂಬ ಮಕ್ಕಳ ಕಥಾ ಸಂಕಲನವನ್ನು ವೈದೇಹಿ ಬರೆದಿದ್ದಾರೆ. ಇವುಗಳಲ್ಲಿನ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಗೆ ಸಂಬಂಧಿಸಿದ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

1.3. ಈ ಕುರಿತು ನಡೆದಿರುವ ಅಧ್ಯಯನಗಳು

ವೈದೇಹಿಯವರ ಸಮಗ್ರ ಸಾಹಿತ್ಯದ ಕುರಿತು ಈವರೆಗೂ ನಡೆದಿರುವ ಅಧ್ಯಯನಗಳು ಕಡಿಮೆ. ಅವರ ಸಾಹಿತ್ಯ ಪ್ರಕಾರಗಳ ಕುರಿತು ಹಲವು ಬಿಡಿ ಲೇಖನಗಳು, ಪ್ರತಿಷ್ಠಿತ ಪ್ರಶಸ್ತಿಗಳು ಬಂದ ಸಮಯದಲ್ಲಿ ಅವರ ಸಾಹಿತ್ಯದ ಕುರಿತು ಹಲವು ವಿಶ್ಲೇಷಣೆಗಳು – ಸಂದರ್ಶನಗಳು ಬಂದಿವೆ. ವೈದೇಹಿಯವರ ಹೆಗ್ಗಳಿಕೆಯೇನೆಂದರೆ ವೈವಿಧ್ಯಮಯ ಪ್ರಕಾರಗಳಲ್ಲಿನ ಅವರ ಬರವಣಿಗೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಲೇಖಕಿಯರೂ ಹೀಗೆ ಹಲವಾರು ಪ್ರಕಾರಗಳಲ್ಲಿ ಬರೆದಿಲ್ಲ.

ಶ್ರೀ ಶಾರದಾ ಕಾಲೇಜು ಬಸ್ರೂರು ಇಲ್ಲಿ ವೈದೇಹಿಯವರ ಸಾಹಿತ್ಯದ ಕುರಿತು 1994ರಲ್ಲಿ ವಿಚಾರಸಂಕಿರಣ ನಡೆಯಿತು. ಆಗ ಮಂಡಿಸಲ್ಪಟ್ಟ ವಿಚಾರಗಳನ್ನು ಹೊಂದಿದ **'ವೈದೇಹಿಯವರ ಕತೆಗಳು'** (1995) ಎಂಬ ಪುಸ್ತಕದಲ್ಲಿ **ಟಿ. ಪಿ. ಅಶೋಕ** ಅವರು “ಒಂದು ದೃಷ್ಟಿಯಿಂದ ವೈದೇಹಿ ತಮ್ಮ ಹತ್ತಿರದ ಸಮಕಾಲೀನರಾದ ವೀಣಾ ಶಾಂತೇಶ್ವರ, ಗೀತಾ ನಾಗಭೂಷಣ, ನೇಮಿಚಂದ್ರ ಇವರಿಗಿಂತ ದೂರದ ಕೊಡಗಿನ ಗೌರಮ್ಮ, ತ್ರಿವೇಣಿಯವರಿಗೇ ಹೆಚ್ಚು ಹತ್ತಿರದವರಾಗಿ ಕಾಣುತ್ತಾರೆ. ವ್ಯಂಗ್ಯ, ಸಿಟ್ಟು, ಸಿನಿಕತೆ, ಪ್ರತಿಭಟನೆಗಳಿಗಿಂತ ಹೆಚ್ಚಾಗಿ ಉತ್ಕಟ ಭಾವಶೀಲತೆಯೇ ವೈದೇಹಿ ಸ್ಪಂದನದ ಮುಖ್ಯಗುಣ ಎನಿಸುತ್ತದೆ.” (ಅಶೋಕ ಟಿ. ಪಿ. 1995, ಪು. 2) ಎಂದಿದ್ದಾರೆ.

ವೈದೇಹಿಯವರ ಸಾಹಿತ್ಯದ ಬಗೆಗೆ 2010ರ ಮಾರ್ಚ್ 5 ಮತ್ತು 6 ರಂದು **ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ** ಮತ್ತು **ಕರ್ನಾಟಕ ಸಾಹಿತ್ಯ ಅಕಾಡೆಮಿಯ** ಸಹಯೋಗದಲ್ಲಿ **‘ವೈದೇಹಿಯವರ ಸಮಗ್ರ ಸಾಹಿತ್ಯ’** ಎಂಬ ವಿಚಾರ ಸಂಕಿರಣ ನಡೆಯಿತು. ಇಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ ಅವರು ಸಂಗ್ರಹಿಸಿ ತಾವು

ಸಂಪಾದಿಸಿದ **'ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ'** (2018) ಕೃತಿಯಲ್ಲಿ ಪ್ರಕಟಿಸಿದ್ದಾರೆ. ಸಂಕಿರಣದಲ್ಲಿ ಉಪಸ್ಥಿತರಿದ್ದ ವೈದೇಹಿಯವರ 'ನನ್ನನ್ನು ಬೆಳೆಸಿದ ಪರಿಸರ ಒಂದು ಸಣ್ಣ ಒಳಸುತ್ತು', ಆಶಯ ಭಾಷಣದಲ್ಲಿ ಬಿ. ಎನ್. ಸುಮಿತ್ರಾಬಾಯಿಯವರು ಮಂಡಿಸಿದ ಪ್ರಬಂಧ 'ಮಹಿಳಾ ಕಥನ ಪರಂಪರೆ ಮತ್ತು ವೈದೇಹಿ', ಸಬಿತಾ ಬನ್ನಾಡಿಯವರ 'ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ', ವಿಜಯಶ್ರೀ ಸಬರದ ಅವರ 'ವೈದೇಹಿಯವರ ಅಸ್ಪೃಶ್ಯರು ಕಾದಂಬರಿಯ ಪ್ರಸ್ತುತತೆ', ಡಾ. ಲತಾ ಜಿ.ಎಸ್. ಅವರ 'ವೈದೇಹಿಯವರ ನೆನಪಿನಂಗಳ', ಆರ್. ನರಸಿಂಹಮೂರ್ತಿಯವರ 'ವೈದೇಹಿಯವರ ಮಕ್ಕಳ ನಾಟಕಗಳು', ಡಾ. ಯು. ಮಹೇಶ್ವರಿ ಅವರ 'ವೈದೇಹಿ ಕಾವ್ಯ' ಮುಂತಾದ ಅಂದು ಮಂಡಿಸಲ್ಪಟ್ಟ ಪ್ರಬಂಧಗಳು ಈ ಸಂಕಲನದಲ್ಲಿವೆ.

ಲತಾ ಜಿ.ಎಸ್. ಅವರ **'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪೌರಾಣಿಕ ಸ್ತ್ರೀಪಾತ್ರಗಳ ಅಧ್ಯಯನ'** (2007) ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧದಲ್ಲಿ ವೈದೇಹಿಯವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಎಂಬ ಕತೆಯನ್ನು ವಿವೇಚಿಸುತ್ತಾ ಇವರ ಶಕುಂತಲೆ ಪ್ರೇಮಕ್ಕಾಗಿ ಹಂಬಲಿಸುವ, ತನ್ನ ಪ್ರೀತಿಯ ಬಲದಿಂದ ದುಷ್ಯಂತನಿಗೆ ದೂರ್ವಾಸರು ನೀಡಬಹುದಾದ ಶಾಪದಿಂದ ಪಾರುಮಾಡಿದವಳು, ಎನ್ನುತ್ತಾ ಉಂಗುರದ ಪ್ರಸಂಗವನ್ನು, ಶಕುಂತಲೆಯ ದಿಟ್ಟತನವನ್ನೂ ಸ್ತ್ರೀಪರ ದೃಷ್ಟಿಕೋನದ ನೆಲೆಯಿಂದ ವಿವೇಚಿಸುತ್ತಾರೆ.

'ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿಭಟನೆಯ ವಿನ್ಯಾಸಗಳು'(2010) ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧದಲ್ಲಿ **ಸುಮಂಗಲಾ .ಡಿ** ಅವರು "ಹೆಣ್ಣಿನ ಅಂತರಾಳದ ಒಳಹೊಕ್ಕು, ಸೂಕ್ಷ್ಮಾತಿಸೂಕ್ಷ್ಮ ಸಂವೇದನೆಗಳನ್ನು ಹೊರತರುವಲ್ಲಿ ವೈದೇಹಿ ಪಡೆದ ಯಶಸ್ಸು ಅತ್ಯಪೂರ್ವ. ಮನೆಯ ಒಳಹೊರಗೆ ದುಡಿಯುವ ಶ್ರಮಜೀವಿ ಅಮಾಯಕ ಹೆಣ್ಮಕ್ಕಳು ಮತ್ತು ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಹೆಣ್ಮಕ್ಕಳ ಮನದ ಸಂವೇದನೆಗಳನ್ನು ಇವರ ಕಥಾನಾಯಕಿಯರಲ್ಲಿ ಗುರುತಿಸಬಹುದು. ಕುಂದಾಪುರ ಪರಿಸರದ ಬ್ರಾಹ್ಮಣ ವರ್ಗದ ಮಹಿಳೆಯರ ದೈನಂದಿನ ಬದುಕು, ಅಲ್ಲಿಯ ಮಹಿಳಾ ಶೋಷಣೆಯ ಒಳಸುಳಿಗಳನ್ನು ಇವರ ಕತೆಗಳು ಬಿಡಿಸಿಡುತ್ತವೆ" ಎಂದಿದ್ದಾರೆ.

ಎಂ. ರಂಗಸ್ವಾಮಿಯವರ 'ಕಂದಮಿಳ ನಾರಿನೋಟ'(2007) ಪ್ರಕಟಿತ ಸಂಶೋಧನಾ ಮಹಾಪ್ರಬಂಧದಲ್ಲಿ ಕನ್ನಡದ ವೀಣಾ ಶಾಂತೇಶ್ವರ, ವೈದೇಹಿ, ಗಂಗಾ ಪಾದೇಕಲ್, ಸಾರಾ ಅಬೂಬಕರ್, ನೇಮಿಚಂದ್ರ ಹಾಗೂ ತಮಿಳಿನ ರಾಜಂ ಕೃಷ್ಣನ್, ಅಂಬೈ, ಆರ್. ಚೂಡಾಮಣಿ, ಜ್ಯೋತಿರ್ಲತಾ ಗಿರಿಜಾ, ತಿಲಕವತಿ ಇವರ ಸಣ್ಣಕತೆಗಳನ್ನು ಪ್ರಾತಿನಿಧಿಕವಾಗಿ ಆಯ್ದು ಅಧ್ಯಯನ ಮಾಡಲಾಗಿದೆ. 'ಸಮಾಜ ಮತ್ತು ಮಹಿಳೆ' ಎಂಬ ಅಧ್ಯಾಯದಲ್ಲಿ 'ಸೌಗಂಧಿಯ ಸ್ವಗತಗಳು', 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ', 'ಒಂದು ಕಳ್ಳ ವೃತ್ತಾಂತ', 'ಒಂದು ಬಾಗಿಲ ಸದ್ದು' ಕತೆಗಳನ್ನು 'ಶಿಕ್ಷಣ ಮತ್ತು ಉದ್ಯೋಗ' ಎಂಬ

ಅಧ್ಯಾಯದಲ್ಲಿ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು', 'ಮರೆಯಾದವರು' ಕತೆಗಳನ್ನು 'ಸಾಮಾಜಿಕ ತಾರತಮ್ಯ' ಎಂಬ ಅಧ್ಯಾಯದಲ್ಲಿ ಅತ್ಯಾಚಾರ ಸಮಸ್ಯೆಯ ಕುರಿತ 'ಅಮ್ಮಚ್ಚಿಯೆಂಬ ನೆನಪು', 'ಬೆದಕಾಟ ಬದುಕೆಲ್ಲ' ಕತೆಗಳನ್ನು 'ಕುಟುಂಬ ಮತ್ತು ಮಹಿಳೆ' ಎಂಬ ಅಧ್ಯಾಯದಲ್ಲಿ 'ವರ್ತುಲ', 'ಅಕ್ಕು', 'ಸುಮ್ಮನಿರಲಾಗದ್ದು', 'ಸೌಗಂಧಿಯ ಸ್ವಗತಗಳು', 'ಶೋಧ', 'ಗೂಡಿನೊಳಗೊಂದು ಹಕ್ಕಿ' ಮುಂತಾದ ವೈದೇಹಿಯವರ ಕತೆಗಳನ್ನು ಇತರ ಲೇಖಕಿಯರ ಸಣ್ಣಕತೆಗಳೊಂದಿಗೆ ತೌಲನಿಕವಾಗಿ ವಿವೇಚಿಸಲಾಗಿದೆ.

'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' (1996) ಎಂಬ **ಎನ್. ಕೆ. ಕೋದಂಡರಾಮ** ಅವರ ಪ್ರಕಟಿತ ಸಂಶೋಧನಾ ಮಹಾಪ್ರಬಂಧದಲ್ಲಿ 'ಮಹಿಳಾ ಸಂವೇದನೆ' ಎಂಬ ಅಧ್ಯಾಯದಲ್ಲಿ ವೈದೇಹಿಯವರ ಸಾಹಿತ್ಯದಲ್ಲಿರುವ ಸ್ತ್ರೀ ಸಂವೇದನೆಯ ಕುರಿತು "ವೈದೇಹಿ ಅವರು ಸಾಂಸ್ಕೃತಿಕ ಇರಾದೆಗಳನ್ನು ವ್ಯಕ್ತಿಯ ಸ್ವಭಾವಕ್ಕೆ ಒತ್ತು ಕೊಡುವ ಮೂಲಕ ಶೋಧಿಸಲು ಪ್ರಯತ್ನಿಸಿದ್ದಾರೆ" (ಪು.440) ಎಂದಿದ್ದಾರೆ. ಈ ಸಂಶೋಧನೆಯು 'ಅಸ್ಪೃಶ್ಯರು' ಕಾದಂಬರಿಯನ್ನು 'ಸಂಪ್ರದಾಯಗಳ ಸ್ಥಿತ್ಯಂತರದ ಕುರುಹಾಗಿ' ಅಧ್ಯಯನ ಮಾಡುತ್ತದೆ.

ಸುಲತಾ ಅವರ **'ಕರಾವಳಿ ಲೇಖಕಿಯರ ಕತೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು'** (2012) ಎಂಬ ಅಪ್ರಕಟಿತ ಸಂಶೋಧನಾ ಪ್ರಬಂಧವು ಗಂಗಾ ಪಾದೇಕಲ್, ವೈದೇಹಿ, ಮಿತ್ರಾ ವೆಂಕಟ್ರಾಜ, ಸಾರಾ ಅಬೂಬಕರ್ ಹಾಗೂ ಪ್ರೇಮಾ ಭಟ್ ಅವರ ಕತೆಗಳನ್ನು ಸ್ತ್ರೀವಾದಿತ್ವ, ಸ್ತ್ರೀಯಾತ್ಮಕತೆ ಮುಂತಾದ ನೆಲೆಗಳಲ್ಲಿ ತಾತ್ವಿಕವಾದ ಕೆಲವು ಅಂಶಗಳನ್ನಿಟ್ಟುಕೊಂಡು ಬರೆದಿರುವುದಾಗಿದೆ. ವೈದೇಹಿಯವರ 'ಅಕ್ಕು', 'ಅಂತರಂಗದ ಪುಟಗಳು', 'ಅವಲಂಬಿತರು', 'ಅಮ್ಮಚ್ಚಿಯೆಂಬ ನೆನಪು', 'ಮರ ಗಿಡ ಬಳ್ಳಿ' ಮುಂತಾದ ಕತೆಗಳನ್ನು ಇಲ್ಲಿ ವಿಶ್ಲೇಷಿಸಿದ್ದಾರೆ

ಆಶಾ ಎನ್. ಜಿ. ಅವರ **'ವೈದೇಹಿ ಮತ್ತು ಹೆಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ'** (2016) ಅಪ್ರಕಟಿತ ಸಂಶೋಧನಾ ಮಹಾಪ್ರಬಂಧವು ವೈದೇಹಿ ಮತ್ತು ಹೆಚ್. ನಾಗವೇಣಿ ಇವರ ಕತೆ, ಕಾದಂಬರಿ, ಪ್ರಬಂಧಗಳನ್ನು ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಕೃತಿಯ ಪರಿಸರ, ಭಾಷೆ, ಶೈಲಿಗಳನ್ನು ತೌಲನಿಕವಾಗಿ ವಿಶ್ಲೇಷಿಸುತ್ತದೆ. ವೈದೇಹಿ ತಮ್ಮ ಕಥನದೊಳಗಿನ ಕುಟುಂಬದ ಹೆಣ್ಣಿನ ಅನನ್ಯತೆಯನ್ನು ಬಿಂಬಿಸುವಾಗ ಅದಕ್ಕೊಂದು ಪ್ರಾದೇಶಿಕ ಹಾಗೂ ಕಾಲದ ಆವರಣ ಕೊಡುತ್ತಾರೆ ಎಂದು ಇವರು ವಿಶ್ಲೇಷಿಸುತ್ತಾರೆ.

ಮಾಲಿನಿ ಅವರ **'ಶಶಿ ದೇಶಪಾಂಡೆ ಮತ್ತು ವೈದೇಹಿಯವರ ಸೃಜನಶೀಲ ಬರಹಗಳಲ್ಲಿನ ಕಲ್ಪನೆಗಳ ಪುನರ್ನಿರ್ಮಾಣದ ಮೇಲೆ ವಿಶೇಷ ಒತ್ತುಕೊಟ್ಟ ಅಧ್ಯಯನ'** (2012) ಎಂಬ ಅಪ್ರಕಟಿತ ಸಂಶೋಧನಾ

ಮಹಾಪ್ರಬಂಧವು ಆಂಗ್ಲಭಾಷೆಯಲ್ಲಿದೆ. ಬಾಬುಲಿ, ಸಿರಿ, ಅಮ್ಮಚ್ಚಿ ಮುಂತಾದ ಪಾತ್ರಗಳನ್ನು ವಿಶ್ಲೇಷಿಸುತ್ತಾ ಸ್ತ್ರೀಯರ ಮೇಲಾಗುವ ಶೋಷಣೆಗಳನ್ನು ತಿಳಿಸುತ್ತಾ, ಸಾಮಾಜಿಕ ಸಮಾನತೆಗಿಂತ ಹೆಚ್ಚಾಗಿ ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸುತ್ತಾರೆ. 'ಸೌಗಂಧಿಯ ಸ್ವಗತಗಳು' ಕತೆಯ ಸೌಗಂಧಿ ಮತ್ತು 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು' ಕತೆಯ ವಾರಿಜ ಪಾತ್ರಗಳ ಮೂಲಕ ಸಮಾಜವು ಸಂಪ್ರದಾಯಗಳ ಹಿನ್ನೆಲೆಯಲ್ಲಿ ಹೆಣ್ಣನ್ನು ನಿರ್ದಿಷ್ಟ ಪಾತ್ರಗಳನ್ನು ಆಯ್ಕೆಗಳಿಲ್ಲದೇ ನಿಭಾಯಿಸಲು ಹೇಗೆ ಒತ್ತಾಯಿಸುತ್ತದೆಂಬುದನ್ನು ವಿವರಿಸಿದ್ದಾರೆ.

'ಅವಳ ಕತೆಗಳು' (1999) ಎಂಬ ಲೇಖಕಿಯರ ಕತೆಗಳ ಸಂಕಲನದ ಪ್ರಸ್ತಾವನೆಯಲ್ಲಿ **ಜಿ. ಎಸ್. ಅಮೂರ**ರು ವೈದೇಹಿಯವರ ಕತೆಗಳ ಕುರಿತು "ವೈದೇಹಿ ಅವರ ನಿಲುವನ್ನು ಸ್ಥೂಲವಾಗಿ ದೇಶೀ ಎನ್ನಬಹುದು. ಮಾನವೀಯ ಸ್ವಭಾವ, ಸಂಬಂಧ ಸಮಸ್ಯೆಗಳೇ ವೈದೇಹಿಯವರ ವಸ್ತುವಾದರೂ ಅವರು ಈ ವಸ್ತುವನ್ನು ಅತ್ಯಂತ ನೈಜ, ಖಚಿತ, ಗತಿಶೀಲ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರದಲ್ಲಿಯೇ ಶೋಧಿಸುತ್ತಾರೆ." (ಪುಟ 22–ಪ್ರಸ್ತಾವನೆ.) ಎನ್ನುತ್ತಾರೆ.

ಟಿ. ಪಿ. ಅಶೋಕ ಅವರು ಬರೆದ **'ಕಥನ ಕಾರಣ'** (2014) ಕೃತಿಯಲ್ಲಿ ವೈದೇಹಿಯವರ 'ಅಲ್ಲಲ್ಲಿಯ ಲೋಕದವರು' ಕತೆಯ ಕುರಿತು ಈ ಕತೆಯು ಮಾನವ ಜೀವನದೊಳಗಿನ ಹಲವು ಲೋಕಗಳನ್ನು ಒಂದು ಸಾಮಾನ್ಯ ಸೂತ್ರದ ನೆರವಿನಿಂದ ಪೋಣಿಸಿದ ಹಾಗೆ ಕಾಣಿಸುತ್ತದೆ ಎಂದು, 'ಹಕ್ಕಿಲ್ಲದವರು' ಕತೆಯ ಕುರಿತು ಒಂದು ದೃಷ್ಟಿಯಿಂದ ಕತೆಯ ಶೀರ್ಷಿಕೆ ನೇರವಾಗಿ ಸಿರಿ, ರಾಧೆ, ಸಿರಿಯ ಮಕ್ಕಳು ಮತ್ತು ದೊಡಕನಿಗೂ ಅನ್ವಯವಾಗುವಂತಿದೆ ಎಂದು ಅವಲೋಕಿಸುತ್ತಾರೆ. 'ಅಮ್ಮಚ್ಚಿಯೆಂಬ ನೆನಪು' ಎಂಬ ಕಥಾ ಸಂಕಲನದ ಕುರಿತಾಗಿ ಅಲ್ಲಿರುವ ವಾಣಿಮಾಯಿ ಮತ್ತು ಇತರ ಕತೆಗಳನ್ನು ಸ್ತ್ರೀಕೇಂದ್ರಿತ, ಪ್ರಾದೇಶಿಕ ಹಿನ್ನೆಲೆಯಿಂದ, ಭಾಷೆಯ ಗಟ್ಟಿತನದ ಹಿನ್ನೆಲೆಯಿಂದ ವಿಶ್ಲೇಷಿಸುತ್ತಾ ಅಮ್ಮಚ್ಚಿಯೆಂಬ ನೆನಪು ಕತೆಯ ಕುರಿತಾಗಿ "ನಿರೂಪಕಿ ತಾನು ಬಾಲ್ಯದಲ್ಲಿ ಒಡನಾಡಿದ್ದ ಅಮ್ಮಚ್ಚಿಯ ಕೆಲವು ಚಿತ್ರಗಳನ್ನಷ್ಟೇ ತನ್ನ ನೆನಪಿನಿಂದ ಹೆಕ್ಕಿ ಕೊಡುತ್ತಾಳೆ" (ಪುಟ 150) ಎಂದು ಕಥಾ ತಂತ್ರದ ಕುರಿತು ಹೇಳಿದ್ದಾರೆ.

ಟಿ. ಪಿ ಅಶೋಕ ಅವರು **'ಕಥನ ಪ್ರೀತಿ'** (2013) ಕೃತಿಯಲ್ಲಿ ವೈದೇಹಿಯವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು', 'ಕ್ರೌಂಚ ಪಕ್ಷಿಗಳು', 'ಸ್ಥಳ ಪುರಾಣ' ಮತ್ತು 'ವ್ಯಕ್ತಿ ಪುರಾಣ' ಎಂಬ ನಾಲ್ಕು ಕತೆಗಳನ್ನು ವಿಮರ್ಶಿಸಿದ್ದಾರೆ. ಸ್ಥಳಿಯ ಜೀವನಕ್ರಮವನ್ನು ಹೊರಗಿನ ವ್ಯಕ್ತಿ, ವಸ್ತು, ಸಂಸ್ಥೆ, ಮೌಲ್ಯಗಳು ಪ್ರವೇಶಿಸಿದಾಗ ಉಂಟಾಗುವ ಪಲ್ಲಟದ ಕಥನಗಳನ್ನು ಆಗಮನದ ಕಥನಗಳೆಂದು ಗುರುತಿಸಬಹುದು ಎನ್ನುತ್ತಾ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು', ದೇವನೂರ ಮಹಾದೇವರ 'ಡಾಂಬರು ಬಂದುದು' ಇವುಗಳಂತೆಯೇ ವೈದೇಹಿಯವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕತೆ ಎಂದು ವಿಶ್ಲೇಷಿಸಿದ್ದಾರೆ.

'ಕಲ್ಪಿತ ವಾಸ್ತವ' (2009) ವಿಮರ್ಶಾ ಕೃತಿಯ 'ಕನ್ನಡ ಸಣ್ಣಕತೆ: 1990' ಎಂಬ ಲೇಖನದಲ್ಲಿ **ಗಿರಡ್ಡಿ ಗೋವಿಂದರಾಜ** ವೈದೇಹಿಯವರ 'ಆಯ್ದ ಕತೆಗಳು' ಕೃತಿಯ ಕುರಿತು "ವೈದೇಹಿ ಅತ್ಯಂತ ಸಂವೇದನಾಶೀಲ ಲೇಖಕಿ. ದಕ್ಷಿಣ ಕನ್ನಡದ ಜೀವನವನ್ನು ಅದರ ದಟ್ಟವಾದ ವಿವರಗಳಲ್ಲಿ ಸೆರೆಹಿಡಿಯುವ ಕತೆಗಾರ್ತಿ. ಅನೇಕ ಸಲ ಕಾವ್ಯಮಯವಾದ ಯೋಚನಾಲಹರಿಯಂತೆ ಹರಿಯುವ ಅವರ ಬರವಣಿಗೆಯಲ್ಲಿ ಸ್ತ್ರೀಸಹಜವಾದ ನಾಜೂಕಿದೆ. ಕತೆಗಳಲ್ಲಿ ಹೆಣ್ಣೇ ಮುಖ್ಯಪಾತ್ರ. ಹೆಣ್ಣಿನ ಜೀವನದ ನವುರಾದ ಭಾವಗಳನ್ನು ಅಷ್ಟೇ ನವುರಾದ ಭಾಷೆಯಲ್ಲಿ ಹಿಡಿಯಬಲ್ಲರು" (ಪು. 316–317) ಎಂದು ವಿವರಿಸುತ್ತಾರೆ.

'ಕನ್ನಡ ಮನಸ್ಸು' (2013) ಎಂಬ ಕೃತಿಯಲ್ಲಿ 'ಆಳ್ವಾಸ್ ನುಡಿಸಿರಿ'ಯ ಅಧ್ಯಕ್ಷರ ಭಾಷಣಗಳಿವೆ. 2010ರಲ್ಲಿ ನುಡಿಸಿರಿಯ ಅಧ್ಯಕ್ಷತೆ ವಹಿಸಿದ್ದ ವೈದೇಹಿಯವರು – ಮನೆಯೊಳಗಿಂದ ಬಂದ ಲೇಖಕಿಯಾಗಿದ್ದ ತನಗೆ ಕನ್ನಡ ಮನಸ್ಸು ಕಂಡದ್ದು ನಮ್ಮನೆಯ ಹಿರಿಯರಲ್ಲಿ, ಮೊದಲಾಗಿ ಒಳಮನೆಯಲ್ಲಿ. ಅಲ್ಲಿನ ಸುಖ ದುಃಖಕ್ಕೆ ಏಳುತ್ತಿದ್ದ ಪ್ರತಿಕ್ರಿಯೆಗಳ ವೈವಿಧ್ಯದಲ್ಲಿ ಎನ್ನುತ್ತಾರೆ. ತುಳುನಾಡಿನ ಬಹುಭಾಷಿಕತೆಯ ಕುರಿತು, ತಮ್ಮ ಮಾತೃಭಾಷೆಯೊಂದಿಗೆ ಸುತ್ತಮುತ್ತಲಿನ ಭಾಷೆಗಳನ್ನೂ ಲೀಲಾಜಾಲವಾಗಿ ಕಲಿತು ಮಾತನಾಡಬಲ್ಲ ಜನತೆಯ ಭಾಷಾಪ್ರೇಮ, ತನ್ನ ನೆನಪಿನಲ್ಲಿ ಉಳಿದಿರುವ ವಿದ್ವಾನ್ ಯಜ್ಞನಾರಾಯಣ ಉಡುಪ ಮತ್ತು ಡಿ. ವಿ. ಹೊಳ್ಳರು, ಕನ್ನಡ ಶಾಲೆಗಳ ಅಳಿವಿಗೆ ಕಾರಣವಾಗುತ್ತಿರುವ ಇಂಗ್ಲೀಷ್ ಎಂಬ ಆಧುನಿಕ ಕಿಂದರಿಜೋಗಿ, ಪರಿಸರದ ಮೇಲಾಗುತ್ತಿರುವ ದೌರ್ಜನ್ಯಗಳು, ಸ್ತ್ರೀಸ್ವಾತಂತ್ರ್ಯದ ಕುರಿತು ಇಂದು ನಾವು ಹಾಡಹಗಲೇ ನಡೆದಾಡೋದು ಕಷ್ಟವಾದ ಸ್ವತಂತ್ರ ಭಾರತವನ್ನು ನಾವು ಸೃಷ್ಟಿಸಿಕೊಂಡಿದ್ದೇವೆ ಎನ್ನುತ್ತಾರೆ.

ವಿವಿಧ ಲೇಖಕಿಯರಿಂದ ರಚಿತವಾದ ಲೇಖನಗಳ ಸಂಕಲನ **'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ'** (1993) ಕೃತಿಯಲ್ಲಿ **ಹೆಚ್. ಎಸ್. ಶ್ರೀಮತಿಯವರ 'ಸಮಕಾಲೀನ ಕನ್ನಡ ಸಾಹಿತ್ಯ: ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ'** ಎಂಬ ಲೇಖನದಲ್ಲಿ "ವೈದೇಹಿಯವರು ದೈನಂದಿನ ಜಗತ್ತನ್ನು ತೋರುವಂತೆ ಕಾಣುವ ವಿವರಗಳನ್ನು ಕತೆಗಳಲ್ಲಿ ನೀಡುತ್ತಾರೆ. ಈ ವಿವರಗಳಲ್ಲಿ ಹಲವು ತಲೆಮಾರುಗಳ ಹೆಂಗಸರನ್ನು ಚಿತ್ರಿಸುತ್ತಲೇ ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸದ ಸೂಕ್ಷ್ಮಗಳನ್ನು ಎದುರಿಗಿಡುತ್ತಾರೆ" (ಪು. 32) ಎಂದು ವಿವರಿಸಿದ್ದಾರೆ.

ಡಾ. ಎಸ್. ವಿ. ಪ್ರಭಾವತಿಯವರು 'ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ' ಎಂಬ ಲೇಖನದಲ್ಲಿ "ಆರ್ಥಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ಸಮಾನತೆಯನ್ನು ಸಾಧಿಸಲಾಗದಿರುವ ಹೆಣ್ಣಿನ ಅಂತರಂಗದ ತುಡಿತ ಪುರುಷರ ಸ್ಪಂದನಕ್ಕಿಂತ ಬೇರೆಯದೇ ಆಗಿರುತ್ತದೆ. ಆದ್ದರಿಂದ ಅದಕ್ಕೆ ರೂಪಕೊಡುವ ವೈದೇಹಿ ಇದು ಸರಿ, ಇದು ತಪ್ಪು ಎಂದು ಬದುಕನ್ನು ಸರಳೀಕರಿಸುವುದಿಲ್ಲ. ಇವರ ಕತೆಗಳ ಹೃದಯವಾಗಿರುವ

ಹೆಣ್ಣು ಛಲಗಾರಿಕೆಯ ಸ್ವಾಭಿಮಾನ, ಗಟ್ಟಿ ವ್ಯಕ್ತಿತ್ವವುಳ್ಳ ವ್ಯಕ್ತಿ. ತನ್ನ ಅಸ್ತಿತ್ವಕ್ಕಾಗಿ ಗಂಡಿನೊಡನೆ, ಸಮಾಜದೊಡನೆ ತೊಳಲಾಡುತ್ತಾ, ಸದಾ ಚಡಪಡಿಸುವುದು, ತನ್ನತನದ ಉಳಿವಿಗಾಗಿ ಎಲ್ಲಾ ಮಾರ್ಗಗಳನ್ನು ಹುಡುಕುವುದು, ಸಂಕೀರ್ಣ ವ್ಯಕ್ತಿತ್ವ ಹೊಂದಿರುವುದು ಇವರ ಎಲ್ಲಾ ಸ್ತ್ರೀ ಪಾತ್ರಗಳ ಲಕ್ಷಣ" ಎನ್ನುತ್ತಾರೆ. (ಪು. 92)

ಟಿ. ಪಿ. ಅಶೋಕ ಅವರ **'ಕಾವ್ಯ ಪ್ರೀತಿ'** (2013) ಕೃತಿಯಲ್ಲಿ ವೈದೇಹಿ ಅವರ 'ಮಗಳಿಗೆ' ಕವಿತೆಯನ್ನು ಹೀಗೆ ವಿಮರ್ಶಿಸಿದ್ದಾರೆ. "ವೈದೇಹಿ ಅವರ ಪದ್ಯದ ಒಂದು ವಿಶೇಷವೆಂದರೆ ಮಗಳನ್ನು ಮದುವೆಮಾಡಿ ಕಳಿಸಿಕೊಡುವುದು ಒಂದು ಸಹಜವಾದ ಕಾರ್ಯ ಎಂಬ ತಿಳುವಳಿಕೆ. ಕವನದ ಸ್ವರೂಪಕ್ಕೆ ಸಂಬಂಧಿಸಿದಂತೆ ಕಂಬಾರರ ಪದ್ಯ ತುಸು ಬೌದ್ಧಿಕ, ಉಷಾ ಅವರ ಪದ್ಯ ತುಸು ಭಾವುಕ, ವೈದೇಹಿ ಪದ್ಯದಲ್ಲಿ ಎರಡೂ ಬೆರೆತಂತಿದೆ." (ಪು. 113)

ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ ಅವರು 'ಪುಸ್ತಕ ಪ್ರತಿಷ್ಠೆ' (2009) ಎಂಬ ಪುಸ್ತಕದ 'ಗುಲಾಬಿ ಟಾಕೀಸು' ಎಂಬ ಲೇಖನದಲ್ಲಿ ವೈದೇಹಿಯವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕತೆಯ ಕುರಿತಾಗಿ ಕರಾವಳಿಯ ಒಂದು ಸಣ್ಣ ಊರಿನಲ್ಲಿ ಮೊದಲ ಬಾರಿ ಸಿನೆಮಾ ಥಿಯೇಟರ್ ಬಂದಾಗ ಹೆಣ್ಮಕ್ಕಳ ದಿನಚರಿಯಲ್ಲಾದ ಬದಲಾವಣೆಗಳನ್ನು ತಿಳಿಸುವ ಕತೆ ಎನ್ನುತ್ತಾ "ಸೂಲಗಿತ್ತಿ ಲಿಲ್ಲೀಬಾಯಿ, ಟಾಕೀಸ್ ಮ್ಯಾನೇಜರ್‌ನ ಬಲೆಗೆ ಬೀಳುವ ಕೊರಾತಿ, ಎಂಟುನೂರು ಮುಡಿಯ ಅಕ್ಕಿ ಹುಟ್ಟುವಳಿಯಿದ್ದರೂ ಸಿನೆಮಾ ಟಿಕೇಟಿಗೆ ದುಡ್ಡಿಲ್ಲದ ಮಂಜುನಾಥಯ್ಯನ ಹೆಂಡತಿ ಇವರೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಅವಲಂಬಿತರು ಅಸಹಾಯಕರು ಎಂದು ವಿಮರ್ಶಿಸುತ್ತಾ ಇಂಥವರ ಅಂತರಂಗದ ಪುಟಗಳು, ಸ್ವಗತಗಳು ವೈದೇಹಿಯವರ ಕತೆಗಳ ಜೀವಾಳ" (ಪುಟ ಸಂ. 55) ಎನ್ನುತ್ತಾರೆ.

ಮೈತ್ರಿ ಭಟ್, ಸಂಶೋಧನಾ ವಿದ್ಯಾರ್ಥಿನಿ, ಮಂಗಳೂರು ವಿಶ್ವವಿದ್ಯಾನಿಲಯ ಇವರು **'ಸಾಹಿತ್ಯ ಹಾಗೂ ಸಾಮಾಜಿಕ ಹೊಣೆಗಾರಿಕೆ'** ಎಂಬ ಪುಸ್ತಕದಲ್ಲಿ 'ಸಾಮಾಜಿಕ ಬದಲಾವಣೆ ಹಾಗೂ ಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ **'ಸಾಮಾಜಿಕ ಸ್ಥಿತ್ಯಂತರವನ್ನು ಚಿತ್ರಿಸುವ ವೈದೇಹಿ ಅವರ ಅಸ್ಪೃಶ್ಯರು'** ಎಂಬ ಸಂಶೋಧನ ಲೇಖನವನ್ನು ಹಾಗೂ 'ಅಚಲ' ಎಂಬ ಮಹಿಳಾ ಅಧ್ಯಯನ ತ್ರೈಮಾಸಿಕದ 27ನೇ ಸಂಪುಟ, 4ನೇ ಸಂಚಿಕೆಯಲ್ಲಿ 'ವೈದೇಹಿಯವರ ಕಥನಸಾಹಿತ್ಯದಲ್ಲಿ ಮಹಿಳೆಯ ಮನಸಿನ ಅಭಿವ್ಯಕ್ತಿ' ಎಂಬ ಸಂಶೋಧನ ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ವೈದೇಹಿಯವರ 'ಮರಗಿಡಬಳ್ಳಿ', 'ಬೀಳು ಬೇರು', 'ಚಿಪ್ಪು', 'ಅಕ್ಕು' ಮುಂತಾದ ಕತೆಗಳನ್ನು, 'ಅಸ್ಪೃಶ್ಯರು' ಕಾದಂಬರಿಯನ್ನು ಕಲವು ಮನಃಶಾಸ್ತ್ರೀಯ ವಿಚಾರಗಳ ಹಿನ್ನೆಲೆಯಲ್ಲಿ ವಿಮರ್ಶಿಸಿದ್ದಾರೆ.

2009ರಲ್ಲಿ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಾದ ವೈದೇಹಿಯವರ ಕುರಿತ **'ವೈದೇಹಿ'** (2009) ಎಂಬ ಪುಟ್ಟ ಪುಸ್ತಕವೊಂದನ್ನು **ಸ. ಉಷಾ** ಅವರಿಂದ ಬರೆಸಿ ನವಕರ್ನಾಟಕ ಪ್ರಕಾಶನವು ಪ್ರಕಟಿಸಿದೆ. ಅದೇ ವರ್ಷದಲ್ಲಿಯೇ ಖ್ಯಾತ ವಿಮರ್ಶಕ **ಟಿ. ಪಿ. ಅಶೋಕ** ಅವರು ವೈದೇಹಿ ಸಾಹಿತ್ಯದ ಮೊದಲ ಓದುಗರಿಗಾಗಿ ತಮ್ಮ ಪ್ರಸ್ತಾವನೆ ಹಾಗೂ ವೈದೇಹಿಯವರ ಸಂದರ್ಶನಗಳನ್ನು ಒಳಗೊಂಡ ವೈದೇಹಿಯವರ ಸಾಹಿತ್ಯದ ಪರಿಚಯವನ್ನು **'ವೈದೇಹಿ ವಾಚಿಕೆ'** (2009)ಯಲ್ಲಿ ಮಾಡಿದ್ದಾರೆ.

1.4 ಅಧ್ಯಯನದ ವೈಧಾನಿಕತೆ:

ಪರಿಕಲ್ಪನಾಧಾರಿತ ಸಂಶೋಧನಾ ಅಧ್ಯಯನಗಳು ಇತ್ತೀಚೆಗೆ ಪ್ರಚಲಿತದಲ್ಲಿವೆ ಹಾಗೂ ಪ್ರಚಾರ ಪಡೆಯುತ್ತಿವೆ. ಪ್ರಸ್ತುತ ಸಂಶೋಧನಾ ಪ್ರಬಂಧವು ಪರಿಕಲ್ಪನಾಧಾರಿತ ಸಂಶೋಧನೆಯಾಗಿದೆ. ವೈದೇಹಿಯವರ ಸಮಗ್ರ ಸಾಹಿತ್ಯದಲ್ಲಿ ಪ್ರತಿನಿಧಿಸಲ್ಪಟ್ಟ 'ಪ್ರಾದೇಶಿಕ ಸಂಸ್ಕೃತಿ' ಮತ್ತು 'ಸಾಮಾಜಿಕ ಚಿಂತನೆ'ಗಳೆಂಬ ಎರಡು ಪರಿಕಲ್ಪನೆಗಳನ್ನು ಈ ಸಂಶೋಧನಾ ಮಹಾಪ್ರಬಂಧದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ' ಎಂಬ ವಿಷಯದ ಬಗೆಗಿನ ಸಂಶೋಧನೆ ಈ ಹಿಂದೆ ನಡೆದಿಲ್ಲ. 'ಪ್ರತಿನಿಧೀಕರಣ' ಎಂಬ ಪರಿಕಲ್ಪನೆಯು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಮಹತ್ವ ಪಡೆದಿದೆ. ವೈದೇಹಿಯವರ ಸಾಹಿತ್ಯದೊಂದಿಗೆ ಅವರ ವ್ಯಕ್ತಿತ್ವದ ಮಾನಸಿಕ ಓದೂ ಇಲ್ಲಿ ನಡೆದಿದೆ. 'ಪ್ರಾದೇಶಿಕ ಸಂಸ್ಕೃತಿ' ಮತ್ತು 'ಸಾಮಾಜಿಕ ಚಿಂತನೆ'ಯನ್ನು ವೈದೇಹಿಯವರ ಸಾಹಿತ್ಯವು ಹೇಗೆ ಪ್ರತಿನಿಧಿಸುತ್ತದೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ವೈದೇಹಿಯವರ ಕತೆಗಳು, ಕವನಗಳು, ಕಾದಂಬರಿ, ಮಕ್ಕಳ ನಾಟಕಗಳು, ಪ್ರಬಂಧಗಳು, ಅಂಕಣ ಬರಹಗಳು, ಆತ್ಮಕಥಾ ನಿರೂಪಣೆಗಳು, ಮಕ್ಕಳ ಕಥಾ ಸಂಕಲನ ಇತ್ಯಾದಿಗಳ ಅಧ್ಯಯನದ ಮೂಲಕ ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆ ರೂಪುಗೊಳ್ಳುವ ವಿಧಾನಗಳನ್ನು ಈ ಮಹಾಪ್ರಬಂಧವು ಸಂಶೋಧನಾತ್ಮಕವಾಗಿ ವಿವರಣಾತ್ಮಕ ನೆಲೆಯಿಂದ ಅಧ್ಯಯನ ಮಾಡುತ್ತದೆ.

ಒಂದು ಪ್ರದೇಶದೊಳಗಿನ ನೆಲ, ನೀರು, ಬೆಳೆ, ಜನರ ಜೀವನಕ್ರಮ, ಆರಾಧನೆ, ಸಂವಹನದ ಭಾಷೆ, ಅಡುಗೆ-ಉಡುಗೆ-ತೊಡುಗೆ ಇತ್ಯಾದಿಗಳನ್ನು ಪ್ರತಿನಿಧಿಸುವ ಪ್ರಾದೇಶಿಕ ಸಂಸ್ಕೃತಿ ಮತ್ತು ಮನುಷ್ಯನ ಬದುಕನ್ನು ಹಲವು ಹಂತಗಳಲ್ಲಿ ಪ್ರಭಾವಿಸುವ ಸಾಮಾಜಿಕ ಚಿಂತನೆಯನ್ನು ವೈದೇಹಿಯವರ ಸಾಹಿತ್ಯವು ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ವೈದೇಹಿಯವರ ಚಿಂತನೆಗಳನ್ನು ಗಮನಿಸಲಾಗಿದೆ.

ಸೃಜನಶೀಲ–ಸೃಜನೇತರ ಸಾಹಿತ್ಯದ ಕೆಲವು ಪ್ರಕಾರಗಳಲ್ಲಿ ಬರೆದವರಲ್ಲಿ ವೈದೇಹಿಯವರು ಪ್ರಮುಖರಾಗಿದ್ದಾರೆ. ಅವರು ಬರೆದ ಯಾವುದೇ ಸಾಹಿತ್ಯ ಪ್ರಕಾರವನ್ನು ತೆಗೆದುಕೊಂಡರೂ, ಒಂದು ಸೀಮಿತ ಪರಿಧಿಯೊಳಗಿನ ವಸ್ತುವನ್ನು ಇಟ್ಟುಕೊಂಡೇ ವಿಶ್ವಾತ್ಮಕತೆಯ ಚಿಂತನೆಯನ್ನು ಅವರು ನಡೆಸುತ್ತಿರುವುದನ್ನು ಗಮನಿಸಬಹುದು. ಅವರ ಸಾಹಿತ್ಯದಲ್ಲಿ ಕಂಡುಬರುವ ಪ್ರತೀ ಅಂಶವೂ ಯಾವುದೋ ಒಂದು ರೀತಿಯಿಂದ ಎಲ್ಲರಿಗೂ ಸಂಬಂಧಿಸಿರುತ್ತದೆ. ತಮ್ಮ ಸಾಹಿತ್ಯದಲ್ಲಿ ಕುಟುಂಬದೊಳಗಿನ ರಂಗವನ್ನಿಟ್ಟುಕೊಂಡು ಹೆಚ್ಚಿನ ಬಾರಿ ವಾಸ್ತವದ ನೆಲೆಯಲ್ಲಿ ವೈದೇಹಿಯವರು ಚಿಂತನೆ ನಡೆಸುತ್ತಾರೆ. ಯಾವುದೇ ವಿಷಯವಸ್ತುವನ್ನು ಆಯ್ದುಕೊಂಡರೂ ಅದಕ್ಕೆ ಹೊಂದುವಂತೆ ತನ್ನ ಬಾಲ್ಯದಲ್ಲಿ ಕಂಡ ಮನೆಯೊಳಗಿನ ಭಾಷೆ ಬಳಸುವುದರ ಮೂಲಕ ಅದನ್ನು ತನ್ನ ಪ್ರದೇಶದ್ದನ್ನಾಗಿಸುತ್ತಾರೆ. ಐವತ್ತು ವರ್ಷಗಳ ಹಿಂದಿನ ಬ್ರಾಹ್ಮಣ ಸಮಾಜದ, ಪಿತೃಪ್ರಧಾನ ಕುಟುಂಬದ ಚಿತ್ರಣವನ್ನು ತಮ್ಮ ಭಾಷೆಯ ಮೂಲಕವೇ ವೈದೇಹಿ ತಿಳಿಸುತ್ತಾರೆ.

ವೈದೇಹಿಯವರ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ಕುಟುಂಬ ಚಿತ್ರಣದ ಮೂಲಕವೇ ಅವರು ತೋರುವ ಸಾಮಾಜಿಕ ಕಾಳಜಿ, ಆರಾಧನಾ ಸಂಪ್ರದಾಯ–ಸಂಸ್ಕೃತಿಗಳು, ಪಾತ್ರಗಳ ಜೀವನದ ಮೂಲಕ ಸಮಾಜಕ್ಕೆ ನೀಡುವ ಎಚ್ಚರಿಕೆಗಳು, ಹೊಸ ಚಿಂತನೆಗಳು, ಎದುರಾಳಿಗಳನ್ನು ತಣ್ಣನೆಯ ಹೋರಾಟದ ಮೂಲಕ ಎದುರಿಸುವಲ್ಲಿ ವಾಸ್ತವದ ಪ್ರೇರಣೆಯಿಂದ ಅವರು ಚಿತ್ರಿಸಿರುವ ಪಾತ್ರಗಳು ತೋರುವ ವಿವೇಚನೆ–ವಿಚಕ್ಷಣತೆ ಮುಂತಾದವುಗಳೆಲ್ಲವನ್ನೂ ಹಿನ್ನೆಲೆಯಾಗಿ ಇಟ್ಟುಕೊಂಡು ಈ ಹಿಂದಿನ ಪ್ರಸಿದ್ಧರ ವಿಮರ್ಶೆಗಳನ್ನೂ, ಸಂಶೋಧನಾ ಮಹಾಪ್ರಬಂಧಗಳಲ್ಲಿ ಬಂದಿರುವ ವಿಚಾರಗಳನ್ನೂ ಗಮನಿಸಿಕೊಂಡು ಈ ಸಂಶೋಧನೆಯನ್ನು ನಡೆಸಲಾಗಿದೆ.

ಅಧ್ಯಾಯ 1: ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಅಭಿವ್ಯಕ್ತಿ

ಮಲಯಾಳಂನ ಪ್ರಸಿದ್ಧ ಲೇಖಕರಾದ ವೈಕಂ ಮೊಹಮ್ಮದ್ ಬಷೀರ್ ಅವರು ತಮ್ಮ ಅನುಭವವನ್ನು 'ದ ರೈಟ್‌ಫುಲ್ ಇನಹೆರಿಟರ್ಸ್ ಆಫ್ ದ ಅರ್ತ್' ಎಂಬ ಕತೆಯ ಮೂಲಕ ತಿಳಿಸಿದ್ದಾರೆ. ಈ ಕತೆಯಲ್ಲಿ ಬರೀ ಮಾನವನಿಗೆ ಮಾತ್ರವಲ್ಲ, ಸಣ್ಣ ಕೀಟದಿಂದ ಹಿಡಿದು ಆನೆಯವರೆಗೂ ಎಲ್ಲಾ ಗಾತ್ರದ ಜೀವಿಗಳಿಗಳಿಗೂ ತಾವು ವಾಸಿಸುವ ಈ ಭೂಮಿಯ ಮೇಲೆ ಹಕ್ಕಿದೆ. ಆದರೆ ಮಾನವ ಇಂದು ತನಗಾಗಿಯೇ ಭೂಮಿ ಇರುವುದು ಎಂದು ಉಳಿದ ಜೀವಿಗಳನ್ನು ದೂರವಿರಿಸಿ, ಕಾಡಾಗಿರುವ ಭೂಮಿಯನ್ನು ಖಾಲಿ ನೆಲವಾಗಿಸಿ ಕಾಡಿನ ಜೀವಿಗಳ ವಾಸಸ್ಥಳವನ್ನು ಹಾಳುಗೆಡವಿ ತನ್ನ ಮನೆಯನ್ನು ಕಟ್ಟಿಕೊಳ್ಳುತ್ತಿದ್ದಾನೆ ಎಂಬ ಸಾರ್ವಕಾಲಿಕ ಸತ್ಯವನ್ನು ಹೇಳುತ್ತಾರೆ.

ನಾವು ಒಂದು ಸ್ಥಳವನ್ನು ಭೌಗೋಳಿಕವಾಗಿ ಗುರುತಿಸಲು ಬಳಸುವ ಪರಿಕಲ್ಪನೆಯನ್ನು 'ಪ್ರದೇಶ' ಎನ್ನುತ್ತೇವೆ. ರಾಜಕೀಯ ಅನುಕೂಲಕ್ಕಾಗಿ ವಿಕೇಂದ್ರೀಕರಣದ ದೃಷ್ಟಿಯಿಂದ 'ದೇಶ' ಮತ್ತು 'ಪ್ರದೇಶ'ಗಳೆಂದು ವಿಂಗಡಿಸಲಾಗಿದೆ. ವಸಾಹತುಶಾಹಿಪೂರ್ವದ ಭಾರತದಲ್ಲಿ ಪ್ರದೇಶವೆಂಬುದು 'ಸ್ಥಳೀಯ ಆಳರಸರ ಅಧೀನದಲ್ಲಿದ್ದ ಭೂಪ್ರದೇಶ'ವನ್ನು ಸಂಕೇತಿಸಿದರೆ, ವಸಾಹತೋತ್ತರ ಕಾಲದ ವಿಭಜಿತ ಭಾರತದಲ್ಲಿ ಪ್ರದೇಶವೆಂಬುದು 'ಗಣತಂತ್ರ' ಎಂಬ ಅರ್ಥ ಪಡೆದಿದೆ. ಸ್ಥೂಲವಾಗಿ ಹೇಳುವುದಾದರೆ ವ್ಯಕ್ತಿ ಅಥವಾ ಸಮುದಾಯಗಳು ವಾಸಿಸುವ ಸ್ಥಳವೇ ಪ್ರದೇಶ.

ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಸಿದ ಜನತೆ ತಮ್ಮ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳಿಗಾಗಿ ಅವಲಂಬಿಸುವ ಭೂಭಾಗವನ್ನು ಪ್ರದೇಶವೆಂದು ಕರೆಯಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಪ್ರದೇಶವೆಂಬುದು ನಾಡು, ಸ್ಥಳ, ಜಾಗವೆಂಬುದಾಗಿಯೂ ಗುರುತಿಸಲ್ಪಡುತ್ತದೆ. ಮನುಷ್ಯರು ಬದುಕುವ ರೀತಿ–ನೀತಿಗಳಿಗೆ ಸಂಬಂಧಿಸಿದಂತೆ ದೇಶವೆಂಬ ಪರಿಕಲ್ಪನೆಯೊಂದಿಗೆ ಪ್ರದೇಶದ ಪರಿಕಲ್ಪನೆಯು ಹುಟ್ಟಿಕೊಂಡಿದೆ. ಜನಸಮುದಾಯವು ಒಂದು ಸ್ಥಳದಲ್ಲಿಯೇ ತಲೆಮಾರುಗಳವರೆಗೆ ನೆಲೆಸುತ್ತಾರೆ ಅಥವಾ ತಮಗೆ ಹೊಂದಿಕೆಯಾಗುವ ಸ್ಥಳವನ್ನು ಹುಡುಕೊಂಡು ವಲಸೆ ಹೋಗುತ್ತಾರೆ. ತಲೆತಲಾಂತರದಿಂದ ಅವರು ವಾಸಿಸುತ್ತಿರುವ ಮೂಲಸ್ಥಳ ಅಥವಾ ವಲಸೆ ಹೋಗಿ ನೆಲೆಸಿದ ಪ್ರದೇಶದಲ್ಲಿ ತಮ್ಮ ಸಂಸ್ಕೃತಿಯನ್ನು ಬೆಳೆಸುತ್ತಾರೆ. ನಿರ್ದಿಷ್ಟ ಪ್ರದೇಶವೊಂದರ ಸಂಸ್ಕೃತಿ ನಿಂತ ನೀರಿನಂತೆ ಜಡವೆನಿಸಿದರೂ ಅದರಲ್ಲಿಯೂ ಕಾಲದಿಂದ ಕಾಲಕ್ಕೆ ಬದಲಾವಣೆಗಳಾಗುತ್ತಿರುತ್ತವೆ.

1.1. ಪ್ರದೇಶ ಮತ್ತು ಪ್ರಾದೇಶಿಕತೆಯ ನಿರ್ವಚನ

ಪೀಠಿಕೆಯಾಗಿ 'ಪ್ರದೇಶ' ಎಂಬ ಪದದ ನಿಷ್ಪತ್ತಿಯ ಹಿನ್ನೆಲೆಯನ್ನು ಈ ಪದವು ನವವಸಾಹತೀಕರಣದ ಸಂದರ್ಭದಲ್ಲಿ ಪರಿಚಯಿಸಲ್ಪಟ್ಟು ಬಳಕೆಯಾಗುತ್ತಿದೆ ಎಂದು ವಿವರಿಸಲಾಗಿದೆ. 'ಪ್ರದೇಶ' ಪದದ ಭಾಷಿಕ ರಚನೆ ಹಾಗೂ ಆಕ್ಷರಿಕ ರಚನೆಯನ್ನು ಅಭ್ಯಾಸ ಮಾಡಲಾಗಿದೆ.

1.1.1. ಪ್ರದೇಶ

1990ರ ದಶಕದ ಜಾಗತೀಕರಣದಿಂದಾಗಿ 'ಪ್ರದೇಶ' ಪರಿಕಲ್ಪನೆಯು ಹುಟ್ಟಿತು. ವಸಾಹತುಶಾಹಿ ಕಾಲಘಟ್ಟದ ಆಧುನಿಕ ಚಿಂತನೆಯ ಎಳೆಗಳಾಗಿ ರಾಷ್ಟ್ರ, ಕೇಂದ್ರ, ಅಧಿಕೃತ ಇತ್ಯಾದಿ ಪರಿಕಲ್ಪನೆಗಳು ಹುಟ್ಟಿದವು. ನಿರ್ವಸಾಹತೀಕರಣ ಮತ್ತು ಆಧುನಿಕೋತ್ತರ ಚಿಂತನೆಯ ಭಾಗವಾಗಿ ಪ್ರದೇಶ, ಸ್ಥಳೀಯ, ಮೌಖಿಕ ಮೊದಲಾದ ಪರಿಕಲ್ಪನೆಗಳು ರೂಪುಗೊಂಡವು ಎಂಬುದಾಗಿ ಪರಿಕಲ್ಪನೆಗಳ ಉಗಮದ ಹಿನ್ನೆಲೆಯ ಪ್ರೇರಣೆ–ಪ್ರಭಾವಗಳನ್ನು ಗುರುತಿಸಲಾಗಿದೆ. 'ವಿಶ್ವವನ್ನು ಒಂದು ಗ್ರಾಮ'ವೆಂದ ಜಾಗತಿಕರಣವು ನಿಜವಾದ ಹಳ್ಳಿ ಮತ್ತು ಗ್ರಾಮಗಳನ್ನು ಮರೆಯಲಾರಂಭಿಸಿದಾಗ, ಅವುಗಳೊಳಗಿನ ಸಂಸ್ಕೃತಿ ಮತ್ತು ಬಹುತ್ವವನ್ನು ಮರೆಸಲು ಯತ್ನಿಸಿದಾಗ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳುವ ಯತ್ನವಾಗಿ ಪ್ರದೇಶ ಪರಿಕಲ್ಪನೆಯು ಮುನ್ನೆಲೆಗೆ ಬಂತು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಪ್ರದೇಶಕ್ಕೆ ಎನ್ಸೈಕ್ಲೋಪೀಡಿಯ ಬ್ರಿಟಾನಿಕ ವಿಶ್ವಕೋಶ, ಆಕ್ಸ್ಫರ್ಡ್ ಅಡ್ವಾನ್ಸ್ಡ್ ಅಮೇರಿಕನ್ ಶಬ್ದಕೋಶ, ಕೇಂಬ್ರಿಡ್ಜ್ ಶಬ್ದಕೋಶ, ಮರಿಯಮ್ ವೆಬ್ಸ್ಟರ್ ಶಬ್ದಕೋಶ, ಆಕ್ಸ್ಫರ್ಡ್ ಇಂಗ್ಲೀಷ್ ಶಬ್ದಕೋಶ ಇತ್ಯಾದಿ ಪ್ರಸಿದ್ಧ ಶಬ್ದಕೋಶಗಳು ನೀಡಿರುವ ವ್ಯಾಖ್ಯೆಗಳನ್ನು ಉಲ್ಲೇಖಿಸಲಾಗಿದೆ.

1.1.2. ಪ್ರಾದೇಶಿಕತೆ

'ಪ್ರಾದೇಶಿಕತೆ' ಎಂಬ ಪದವು ಇಂಗ್ಲೀಷ್‌ನ 'ರೀಜನಲಿಸಮ್' ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಮನುಷ್ಯ ಹುಟ್ಟಿ–ಬೆಳೆದು, ನೆಲೆನಿಂತ ನೆಲ ಅಥವಾ ಭೂಮಿಯಲ್ಲಿ ಆತನ ಚಟುವಟಿಕೆಗಳನ್ನು ರೂಪಿಸುವ ಸಂಗತಿಗಳೆಲ್ಲದರ ಒಟ್ಟುಮೊತ್ತ ಅಥವಾ ಪ್ರದೇಶವೊಂದು ಹೊಂದಿರುವ ಅನನ್ಯತೆಯನ್ನೇ ಪ್ರಾದೇಶಿಕತೆ ಎನ್ನಲಾಗುತ್ತದೆ. ಪ್ರಾದೇಶಿಕತೆ ಎಂಬುದು ಬರಿಯ ಭೌಗೋಳಿಕ ವಿಸ್ತಾರವನ್ನು ಮಾತ್ರ ಸಂಕೇತಿಸುವುದಿಲ್ಲ. ಭೂ ಪ್ರದೇಶದಲ್ಲಿ ಕಾಲಕ್ಕೆ ತಕ್ಕಂತೆ ನಡೆಯುವ ವಿದ್ಯಮಾನಗಳು, ಅವುಗಳಿಗೆ ಅಲ್ಲಿ ವಾಸಿಸುವ ಜನತೆ ಮತ್ತು ಅಲ್ಲಿಯ ಪರಿಸರದಲ್ಲಿನ ಜೀವವೈವಿಧ್ಯವು ನೀಡುವ ಪ್ರತಿಕ್ರಿಯೆ, ಮನುಷ್ಯ ಮತ್ತು ಅಲ್ಲಿಯ ಜೀವ ಸಮುದಾಯದ ನಡುವಿನ ಹೊಂದಾಣಿಕೆಯ ಬದುಕು, ಪ್ರಾಕೃತಿಕ ಅಥವಾ ಇನ್ಯಾವುದೇ ವೈಪರೀತ್ಯಗಳನ್ನು ಎದುರಿಸುತ್ತಾ ಬದುಕಲು ಹೋರಾಟ ನಡೆಸುವ ಸಂಗತಿಗಳು ಇತ್ಯಾದಿಗಳನ್ನು ಪ್ರಾದೇಶಿಕತೆಯು ಒಳಗೊಂಡಿರುತ್ತದೆ ಎಂಬುದನ್ನು ತಿಳಿಸಲಾಗಿದೆ.

ಪ್ರಾದೇಶಿಕತೆಯ ಕುರಿತು ಆಕ್ಸ್‌ಫರ್ಡ್ ಅಡ್ವಾನ್ಸ್‌ಡ್ ಲರ್ನರ್ಸ್ ಶಬ್ದಕೋಶ, ಕೇಂಬ್ರಿಡ್ಜ್ ಶಬ್ದಕೋಶ, ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ ವಿಶ್ವಕೋಶ ಮುಂತಾದ ಪ್ರಸಿದ್ಧ ವಿಶ್ವಕೋಶಗಳು ಹಾಗೂ ಶಬ್ದಕೋಶಗಳು ಹೇಳಿರುವ ವ್ಯಾಖ್ಯೆಗಳನ್ನು ತಿಳಿಸಲಾಗಿದೆ.

1.1.3. ಪ್ರಾದೇಶಿಕ ಅಧ್ಯಯನ

ಮನುಷ್ಯ ಹುಟ್ಟಿ-ಬೆಳೆದು, ನೆಲೆನಿಂತ ಭೂಮಿ, ಅವನ ಚಟುವಟಿಕೆಗಳನ್ನು, ಜೀವನಕ್ರಮವನ್ನು ರೂಪಿಸುವ ಆ ಪರಿಸರದ ಸಮಸ್ತ ಸಂಗತಿಗಳು ಸಾಹಿತ್ಯದ ಪರಿಭಾಷೆಯಲ್ಲಿ 'ಪ್ರಾದೇಶಿಕತೆ' ಎಂದು ಕರೆಯಲ್ಪಡುತ್ತದೆ. ಈ ಎಲ್ಲಾ ಅಂಶಗಳನ್ನು ಹಿರಿದು-ಕಿರಿದು ಎಂಬ ಭೇದ-ಭಾವ ತೋರದೇ ಸೂಕ್ಷ್ಮವಾಗಿ, ಸಮಗ್ರವಾಗಿ ಗ್ರಹಿಸುವುದೇ 'ಪ್ರಾದೇಶಿಕ ಅಧ್ಯಯನ' ಎಂಬುದನ್ನು ವಿವರಿಸಲಾಗಿದೆ.

1.2. ಪ್ರಾದೇಶಿಕ ಸಂಸ್ಕೃತಿ

ಪ್ರಾದೇಶಿಕ ಸಂಸ್ಕೃತಿಯು ಮಾನವನಿಗೆ ವಿಶಿಷ್ಟವಾದುದು. ಜನಸಮುದಾಯವಿಲ್ಲದೇ ಪ್ರಾದೇಶಿಕ ಸಂಸ್ಕೃತಿ ಇರಲು ಸಾಧ್ಯವಿಲ್ಲ. ಒಂದು ಪ್ರದೇಶದಲ್ಲಿ ನೆಲೆಸಿದ ಮಾನವನು ನಿರ್ಮಿಸುವ ಸಂಸ್ಕೃತಿಯೇ ಪ್ರಾದೇಶಿಕ ಸಂಸ್ಕೃತಿ. ಪ್ರಕೃತಿಯನ್ನು ತನ್ನ ಉಪಯೋಗಕ್ಕೆ ಬಳಸಿಕೊಂಡ ಮಾನವ ಅದರೊಂದಿಗೆ ತನ್ನ ಆಲೋಚನಾ ಶಕ್ತಿಯನ್ನೂ ಬಳಸಿಕೊಂಡು ಪ್ರಾದೇಶಿಕ ಸಂಸ್ಕೃತಿಯನ್ನು ರೂಪಿಸಿದ. ಪ್ರಾದೇಶಿಕ ಸಂಸ್ಕೃತಿಯು ನಿಂತ ನೀರಲ್ಲ, ಅದು ನಿರಂತರವಾಗಿ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ತಲೆಮಾರಿನಿಂದ ತಲೆಮಾರಿಗೆ ಸಾಗುತ್ತದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬದುಕುವ ಜನಸಮುದಾಯವು ಆಚರಿಸುವ ಸಂಪ್ರದಾಯ, ಹೊಂದಿರುವ ನಂಬಿಕೆ, ತಿಳಿವಳಿಕೆ, ಅವರ ವರ್ತನೆ, ರೀತಿ-ನೀತಿ-ನಡವಳಿಕೆಗಳು, ಜೀವನಮೌಲ್ಯಗಳು ಮತ್ತು ಬದುಕಿನ ಕುರಿತ ಅವರ ದೃಷ್ಟಿಕೋನ, ಮಾನವ ನಿರ್ಮಿತ ವಸ್ತುಗಳು, ಆಲೋಚನೆಗಳು ಎಲ್ಲವೂ ಸೇರಿ ಒಂದು ಪ್ರದೇಶದ ಸಂಸ್ಕೃತಿ ಉಂಟಾಗುತ್ತದೆ. ಪ್ರಾದೇಶಿಕ ಸಂಸ್ಕೃತಿಯ ಹುಟ್ಟು ಬೆಳವಣಿಗೆಗಳನ್ನು ಮಾನವನ ಉಗಮ ವಿಕಾಸದ ಸಂಬಂಧದೊಂದಿಗೆ ವಿವರಿಸಲಾಗಿದೆ.

ಪ್ರದೇಶವೊಂದರ ಸಂಸ್ಕೃತಿಯನ್ನು ಅಲ್ಲಿಯ ಭೌಗೋಳಿಕತೆ, ಸಾಮಾಜಿಕ ಸಂಬಂಧಗಳು, ಸಾಂಸ್ಕೃತಿಕ ಆಚರಣೆಗಳು, ಆರ್ಥಿಕ ಜಾಲಗಳು, ರಾಜಕೀಯ ವಿಚಾರಗಳು, ಧಾರ್ಮಿಕ ನಂಬಿಕೆಗಳು ಇತ್ಯಾದಿಗಳು ಸೇರಿ ರೂಪಿಸಿರುತ್ತವೆ. ಪ್ರಾದೇಶಿಕತೆಯ ಪರಿಕಲ್ಪನೆಯನ್ನು ನಿರ್ವಚಿಸುತ್ತಲೇ ಅದರ ಮೂಲದ ಗ್ರಹಿಕೆಗೆ ಪ್ರಾದೇಶಿಕ ಅಧ್ಯಯನ ತಳಪಾಯ ಹಾಕುತ್ತದೆ ಎಂದು ಪ್ರಾದೇಶಿಕ ಸಂಸ್ಕೃತಿಯು ಮುಖ್ಯವಾಗಿ ಒಳಗೊಳ್ಳುವ ಅಂಶಗಳನ್ನು ತಿಳಿಸಲಾಗಿದೆ.

1.3. ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ

ಪ್ರಾದೇಶಿಕ ಸಂಸ್ಕೃತಿಯು ಆಧುನೀಕರಣ, ಸಂಸ್ಕೃತೀಕರಣ ಮತ್ತು ಜಾಗತೀಕರಣಗಳ ಮಿಶ್ರಣವಾಗಿದೆ. ಸ್ಥಳೀಯ ಸಂಸ್ಕೃತಿ ಅಥವಾ ಪ್ರಾದೇಶಿಕ ಸಂಸ್ಕೃತಿಯು ಹಲವಾರು ಜಾತಿ ಜನಾಂಗಗಳ ಸಂಸ್ಕೃತಿಗಳ ಕೂಡಿಕೆ.

ಆಧುನಿಕ ಯುಗದಲ್ಲಿ ಹಂತ ಹಂತವಾಗಿ ಪರಿಚಿತವಾದ ಸಂಪರ್ಕ ಸಾಧನಗಳು ಮತ್ತು ಸಮೂಹ ಮಾಧ್ಯಮಗಳು ಸಾಂಸ್ಕೃತಿಕ ವರ್ಗಾವಣೆಗೆ ಕಾರಣವಾಗಿ ಸಂಸ್ಕೃತಿಯನ್ನು ಮಿಶ್ರಗೊಳಿಸಿದವು. ಹೀಗೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದ, ಔದ್ಯೋಗೀಕರಣದಿಂದ ಮಿಶ್ರಣವಾಗುತ್ತಾ ಬಂದ ಸಂಸ್ಕೃತಿಯ ವಿವರಗಳೊಳಗೆ ಪ್ರಾದೇಶಿಕತೆಯನ್ನೂ, ಒಂದು ನಿರ್ದಿಷ್ಟ ಪ್ರದೇಶದ ಸಂಸ್ಕೃತಿಯನ್ನೂ ಗುರುತಿಸುವುದು ಕಷ್ಟಸಾಧ್ಯವಾದ ಸಂಗತಿಯಾಗಿದೆ. ಹಾಗೆಯೇ ಮೌಖಿಕ ಆಕರಗಳ ಮೂಲಕ ಪ್ರಾದೇಶಿಕ ಸಂಸ್ಕೃತಿಯನ್ನು, ಪ್ರದೇಶದ ಚರಿತ್ರೆಯನ್ನು ನಿರ್ಮಿಸುವಾಗ ಜನರು / ವಕ್ತೃಗಳು ಹೇಳುವ ಹಲವು ಪಾಠಾಂತರಗಳು ಅಥವಾ ವಿವರಗಳಲ್ಲಿ ಯಾವುದನ್ನು ನಂಬಬೇಕು, ಯಾವುದನ್ನು ಬಿಡಬೇಕು ಎಂಬುದು ತಿಳಿಯುವುದಿಲ್ಲ ಎಂದು ಪ್ರಾದೇಶಿಕ ಸಂಸ್ಕೃತಿಯ ಸ್ವರೂಪ ಹಾಗೂ ಒಂದು ಪ್ರದೇಶದ ಸಂಸ್ಕೃತಿ ನಿರ್ಮಿತಿಯಲ್ಲಿ ಎದುರಾಗಬಹುದಾದ ಅಡೆತಡೆಗಳನ್ನು ತಿಳಿಸಲಾಗಿದೆ.

1.4. ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಅಧ್ಯಯನದ ಅಗತ್ಯ

ಬರಹದ ಮೂಲಕ ಪ್ರಾದೇಶಿಕತೆಯ ಸೊಗಸನ್ನು, ವಿಭಿನ್ನ ಸಮುದಾಯ ಪರಿಸರದ ಅರಿವನ್ನು ಸಾಹಿತ್ಯದಲ್ಲಿ ಚಿತ್ರಿಸಿ ಓದುಗರಿಗೆ ಪರಿಚಯಿಸುವ ಕೆಲಸವನ್ನು ಸಾಹಿತಿಯು ಮಾಡುತ್ತಾನೆ. ಹಲವು ಪ್ರದೇಶಗಳಲ್ಲಿನ ವೈವಿಧ್ಯಗಳ ಕುರಿತು ತಿಳಿಸುತ್ತಾ ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತಾನೆ. ಪ್ರತಿಯೊಬ್ಬ ಲೇಖಕನೂ ಒಂದಿಲ್ಲೊಂದು ಕೃತಿಯಲ್ಲಿ ತಾನು ಹುಟ್ಟಿದ ಪ್ರದೇಶಕ್ಕೆ ಬದ್ಧನಾಗಿರುತ್ತಾನೆ. ಈ ಬದ್ಧತೆಯು ಆ ಕೃತಿಕಾರನ ಬರವಣಿಗೆಯಲ್ಲಿ ಕಂಡುಬಂದರೆ ಸೃಜನಶೀಲತೆ ಮತ್ತು ಕೃತಿಯ ವಸ್ತುನಿಷ್ಠತೆಗೆ ಸಹಕಾರಿಯಾಗುತ್ತದೆ. ಲೇಖಕ ಕೃತಿಯೊಳಗೆ ತನ್ನ ಪ್ರದೇಶದೊಂದಿಗೆ ಕಾಲವನ್ನು ಪ್ರಜ್ಞಾಪೂರ್ವಕವಾಗಿ ಚಿತ್ರಿಸುತ್ತಾನೆ ಎಂದು ಸಾಹಿತಿ ಮತ್ತು ಅವನ ಪ್ರದೇಶದ ಸಂಬಂಧವನ್ನು ತಿಳಿಸಲಾಗಿದೆ.

ಸಾಹಿತ್ಯ ಮತ್ತು ಪ್ರಾದೇಶಿಕ ಸಂಸ್ಕೃತಿಗೆ ಬಹಳ ಹಿಂದಿನ ಸಂಬಂಧ. ದೇಶದೊಳಗಿನ ಎಲ್ಲಾ ಪ್ರದೇಶಗಳನ್ನು ಎಲ್ಲರೂ ನೋಡಿರುವುದಿಲ್ಲ. ಪ್ರವಾಸ ಹೋದವರೂ ಸ್ವಲ್ಪವೇ ಸಮಯದಲ್ಲಿ ಅಲ್ಲಿಯ ಸಂಸ್ಕೃತಿಯನ್ನು ತಿಳಿದು 'ಇದು ಹೀಗೆಯೇ' ಎಂದು ನಿರ್ಣಯಿಸಲು ಸಾಧ್ಯವಿಲ್ಲ. ಹೀಗಾಗಿ ವಿವಿಧ ಪ್ರದೇಶಗಳ ಸಂಸ್ಕೃತಿಗಳನ್ನು, ಆಚರಣೆಗಳನ್ನು, ಅಲ್ಲಿಯ ಜಾನಪದ ಸಿರಿಯನ್ನು ಅರಿಯಬೇಕೆಂಬ ಆಸೆ ಹೊಂದಿದವರು ಆಯಾ ಪ್ರದೇಶಗಳ ಕುರಿತು ಬಂದಿರುವ ಸಾಹಿತ್ಯವನ್ನು ಓದುವ ಮೂಲಕವೇ ಅಲ್ಲಿರುವ ಭಾಷಾವೈವಿಧ್ಯ, ಸಾಂಸ್ಕೃತಿಕ ವಿಭಿನ್ನತೆ, ಆಹಾರ ಪದ್ಧತಿ, ಜೀವನಕ್ರಮ, ಇತ್ಯಾದಿಗಳನ್ನು ಅರಿಯಬಹುದು. ಓದುಗರು ತಾವು ನೋಡಿದ ಹಾಗೂ ಓದಿ ತಿಳಿದ ಪ್ರದೇಶಗಳ ಸಂಸ್ಕೃತಿ ಹಾಗೂ ಪ್ರಾದೇಶಿಕ ಭಿನ್ನತೆಗಳನ್ನು ತಿಳಿಯುವ ಮೂಲಕ ಇನ್ನುಳಿದ ಪ್ರದೇಶಗಳ ಸಂಸ್ಕೃತಿಗಳ ಕುರಿತು ತಿಳಿಯಲು ಉತ್ಸುಕರಾಗುತ್ತಾರೆ.

ಪ್ರಾದೇಶಿಕ ಸಂಸ್ಕೃತಿಯನ್ನು ಸಾಹಿತ್ಯದಲ್ಲಿ ತರುವುದರಿಂದ ಅದನ್ನು ಓದುವ ಸಹೃದಯನಿಗೆ ದೊರೆಯುವ ತಿಳಿವಳಿಕೆಯ ಕುರಿತು ತಿಳಿಸುತ್ತ ಮಲೆನಾಡು, ಬಯಲುಸೀಮೆ, ಅರೆ ಬಯಲುಸೀಮೆ, ಕರಾವಳಿ

ಭಾಗದ ಚಿತ್ರಣಗಳನ್ನು ಒಳಗೊಂಡ ಕನ್ನಡ ಲೇಖಕರ ಕೃತಿಗಳನ್ನು ಉದಾಹರಣೆಯಾಗಿ ಹೆಸರಿಸಲಾಗಿದೆ. ಈ ಮೂಲಕ ಕೃತಿಕಾರನಿಗೂ ಸಹೃದಯನಿಗೂ ಪ್ರಾದೇಶಿಕ ಸಂಸ್ಕೃತಿಯನ್ನು ತಿಳಿಯುವ ಮತ್ತು ತಿಳಿಸುವ ಅಗತ್ಯವಿರುವುದರಿಂದ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಓದು ಮತ್ತು ಅದರ ಅಧ್ಯಯನದ ಅಗತ್ಯವಿರುತ್ತದೆ ಎಂದು ವಿವರಿಸಲಾಗಿದೆ.

ಕನ್ನಡದ ಉಪಭಾಷೆಯಾದ 'ಕುಂದಾಪ್ರ ಕನ್ನಡ' ಅಥವಾ 'ಕುಂದಗನ್ನಡ'ವನ್ನು ತಮ್ಮ ಸಾಹಿತ್ಯದಲ್ಲಿ ವ್ಯಾಪಕವಾಗಿ ಬಳಸಿದವರು 'ವೈದೇಹಿ'. ಮೊದಮೊದಲಿಗೆ ಬರೆದ ಬರಹಗಳಲ್ಲಿ ವೈದೇಹಿಯವರು ಹಳೇಮೈಸೂರು ಪ್ರದೇಶದ ಕನ್ನಡವನ್ನು ಬಳಸಿದರೂ ಕ್ರಮೇಣ ಅಂತರಂಗದ ಪುಟಗಳು ಎಂಬ ಎರಡನೇ ಕಥಾ ಸಂಕಲನದ 'ಅಕ್ಕು' ಕತೆಯಿಂದಾರಂಭಿಸಿ ತಮ್ಮ ಕತೆಗಳನ್ನು ಕುಂದಗನ್ನಡದಲ್ಲಿ ಬರೆಯಲಾರಂಭಿಸಿದರು.

ತಮ್ಮ ಬರವಣಿಗೆಯಲ್ಲಿ ಕುಂದಾಪುರದ ಬ್ರಾಹ್ಮಣರ ಮನೆಯ ಕನ್ನಡವನ್ನು ಬಳಸುವ ವೈದೇಹಿ ಅದರೊಂದಿಗೆ 'ಅಮ್ಮಚ್ಚಿಯೆಂಬ ನೆನಪು', 'ವಾಣಿಮಾಯಿ' ಮುಂತಾದ ಕತೆಗಳಲ್ಲಿ ಕುಂದಾಪುರದಿಂದ ಮಂಗಳೂರು ಪರಿಸರಕ್ಕೆ ಹೋಗಿ ನೆಲೆಸಿದ ಬ್ರಾಹ್ಮಣರು ಆಡುವ ಅಲ್ಪ ಪ್ರಮಾಣದ ತುಳುಮಿಶ್ರಿತ ಕುಂದಾಪುರ ಕನ್ನಡವನ್ನು ಸಂಭಾಷಣೆಗಳಲ್ಲಿ ಬಳಸಿದ್ದಾರೆ. ಕುಂದಾಪುರ ಪರಿಸರದ ಬ್ರಾಹ್ಮಣೇತರರರು ಮಾತನಾಡುವ ಕುಂದಾಪುರ ಕನ್ನಡವನ್ನೂ ವೈದೇಹಿ ಅಲ್ಲಲ್ಲಿ ತಮ್ಮ ಕತೆ, ಕಾದಂಬರಿ, ಪ್ರಬಂಧಗಳಲ್ಲಿ ಬಳಸಿದ್ದಾರೆ. ಇದರೊಂದಿಗೆ ಕುಂದಾಪುರ ಪರಿಸರದ ಜಾತ್ರೆಗಳನ್ನು, ಇನ್ನು ಕೆಲವು ಆಚರಣೆಗಳನ್ನು ವಿವರಿಸಿದ್ದಾರೆ.

ಇವರ ಸಾಹಿತ್ಯದಲ್ಲಿನ ಭಾಷೆಯ ಮೂಲಕ ಕುಂದಾಪ್ರ ಕನ್ನಡ ಮತ್ತು ಮಲೆನಾಡಿನ ಕನ್ನಡದಲ್ಲಿರುವ ಸಾಮ್ಯತೆ–ಭಿನ್ನತೆಗಳು, ಕುಂದಗನ್ನಡ ಮತ್ತು ತುಳು ಭಾಷೆಯ ಸಂಬಂಧ, ಕನ್ನಡ ಮತ್ತು ಕುಂದಗನ್ನಡಗಳ ಸಂಬಂಧವನ್ನು ತಿಳಿಯಬೇಕೆಂಬ ಕುತೂಹಲ ಮೂಡುತ್ತದೆ. ಐವತ್ತು ವರ್ಷಗಳ ಹಿಂದಿನ ಕತೆಯನ್ನು ಬರೆಯುವಾಗ ಆ ಕಾಲದ ಭಾಷೆಯನ್ನೇ ಬಳಸಿದರೂ ಅದನ್ನು ಎಲ್ಲಾ ಪ್ರದೇಶದ ಕನ್ನಡ ಓದುಗರಿಗೂ ಅರ್ಥವಾಗುವಂತೆ ಬರೆದಿರುವುದೇ ವೈದೇಹಿಯವರ ಹೆಗ್ಗಳಿಕೆಯಾಗಿದೆ ಎಂಬುದನ್ನು ವಿವರಿಸಿ, ಈ ಮೇಲಿನ ಅಂಶಗಳನ್ನು ಅರಿಯುವ ಕಾರಣಕ್ಕಾಗಿ ಕುಂದಾಪುರ ಪ್ರದೇಶದ ಆಚರಣೆಗಳನ್ನು, ಸಂಸ್ಕೃತಿಯನ್ನು, ಭಾಷೆಯನ್ನು ತಿಳಿಯುವ ಕಾರಣಕ್ಕಾಗಿ ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಅಗತ್ಯವಿದೆ ಎಂಬುದನ್ನು ತಿಳಿಸಲಾಗಿದೆ.

ಅಧ್ಯಾಯ 2: ವೈದೇಹಿಯವರ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿಯ ಪ್ರತಿನಿಧೀಕರಣ

ವೈದೇಹಿಯವರು ತಮ್ಮ ಬರವಣಿಗೆಯಲ್ಲಿ ಬಳಸಿದ ಮೂರು ವಿಧದ ಕುಂದಗನ್ನಡವನ್ನು ಗುರುತಿಸಿ, ಇಲ್ಲಿ ಅಧ್ಯಯನ ಮಾಡಲಾಗಿದೆ. ಭಾಷೆಯಂತೆಯೇ ವೈದೇಹಿಯವರು ತಿಳಿಸಿದ ಕುಂದಾಪುರ ಪ್ರದೇಶದ ಜಾತ್ರೆಗಳನ್ನು, ಕೆಲವು ದಶಕಗಳ ಹಿಂದೆ ಇಲ್ಲಿಯ ಸಮಾಜದಲ್ಲಿ ಆಚರಣೆಯಲ್ಲಿದ್ದ ಅನಿಷ್ಟ ಪದ್ಧತಿಗಳನ್ನು

ತಿಳಿಸಲಾಗಿದೆ. ಕುಂದಾಪುರ ಪರಿಸರದ ಕೃಷಿ ಸಂಬಂಧಿ ವಾರ್ಷಿಕಾವರ್ತನ ಮತ್ತು ಜೀವನಾವರ್ತನ ಆಚರಣೆಗಳನ್ನು ಉಲ್ಲೇಖಿಸಿ, ವಿವರಿಸಲಾಗಿದೆ.

ಅಧ್ಯಾಯ 2.1: ವೈದೇಹಿಯವರ ಕಥನ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ವೈದೇಹಿಯವರು ಬರೆದ ಏಳು ಕಥಾ ಸಂಕಲನಗಳಲ್ಲಿನ ತೊಂಭತ್ತಕ್ಕೂ ಹೆಚ್ಚು ಸಣ್ಣಕತೆಗಳಲ್ಲಿ 'ಅಕ್ಕು', 'ಅಮ್ಮಚ್ಚಿಯೆಂಬ ನೆನಪು', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಮಂಜಮ್ಮಜ್ಜಿ ಹೋಯ್ತಂತೆ', 'ವಾಣಿಮಾಯಿ', 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು', 'ಆರತಿ ತಟ್ಟೆ', 'ಅಳಿವು ಉಳಿವುಗಳ ನಡುವೆ', 'ಮನೆಯವರೆಗಿನ ಹಾದಿ', 'ಹಕ್ಕಿಲ್ಲದವರು', 'ಕತೆ ಕತೆ ಕಾರಣ' ಇತ್ಯಾದಿ ಕತೆಗಳೊಂದಿಗೆ ಅಸ್ಪೃಶ್ಯರು ಕಾದಂಬರಿಯನ್ನು, 'ಮಲ್ಲಿನಾಥನ ಧ್ಯಾನ', 'ಮೇಜು ಮತ್ತು ಬಡಗಿ', ಕುಂದಾಪುರ ಪರಿಸರದ ಪ್ರಸಿದ್ಧ ಜಾತ್ರೆಗಳೊಂದಿಗೆ ವೈದೇಹಿಯವರ ಬಾಲ್ಯದ ನೆನಪುಗಳನ್ನು ಓದುಗರಿಗೆ ತಿಳಿಸುವ 'ಜಾತ್ರೆ', ಅಂಕಣ ಬರಹಗಳ ಸಂಗ್ರಹವಾದ 'ಹರಿವ ನೀರು' ಕೃತಿ, ಕೋ.ಲ. ಕಾರಂತರ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು' ಆತ್ಮಚರಿತ್ರೆಯ ನಿರೂಪಣೆಗಳ ಮೂಲಕ ಈ ಕಥನಸಾಹಿತ್ಯದಲ್ಲಿರುವ ಪ್ರಾದೇಶಿಕ ಸಂಸ್ಕೃತಿಯನ್ನು ಜನತೆಯು ಸೇವಿಸುವ ಆಹಾರದ ವೈವಿಧ್ಯತೆಯನ್ನು, ಆರಾಧನಾ ಪದ್ಧತಿಯಲ್ಲಿ ಜನಪದೀಯ ಮತ್ತು ಶಿಷ್ಟ ಆರಾಧನಾ ಪದ್ಧತಿಗಳನ್ನು, ಜೀವನ ನಿರ್ವಹಣೆಗಾಗಿ ಆಧರಿಸಿದ ವೃತ್ತಿಗಳನ್ನು, ನಿತ್ಯಜೀವನದಲ್ಲಿ ಬಳಸುವ ಗಾದೆಮಾತುಗಳನ್ನು, ನೀತಿವಾಕ್ಯಗಳು, ನಂಬಿಕೆಗಳನ್ನು ಜಾನಪದೀಯ ಅಂಶಗಳಾಗಿ, ಪ್ರಾದೇಶಿಕ ಭಾಷೆಯನ್ನು ಸಂಭಾಷಣೆಗಳಲ್ಲಿ ಹೇಗೆ ಬಳಸಲಾಗಿದೆ ಎಂಬುದನ್ನು ಅಧ್ಯಯನ ಮಾಡಿ, ಅವುಗಳಲ್ಲಿ ಕಂಡುಬಂದ ಪ್ರಾದೇಶಿಕ ಸಂಸ್ಕೃತಿಯ ಅಂಶಗಳನ್ನು ತಿಳಿಸಲಾಗಿದೆ.

ಅಧ್ಯಾಯ 2.2: ವೈದೇಹಿಯವರ ಕವನಗಳಲ್ಲಿ ಪ್ರಾದೇಶಿಕ ಸಂಸ್ಕೃತಿ

ವೈದೇಹಿಯವರ 'ಮಾಡು ಹೊದೆಸುವ ಹಾಡು', 'ಹೂವ ಕಟ್ಟುವ ಕಾಯಕ', 'ನನ್ನ ಗಂಡನ ಊರು ತೋರಿಸುವೆ ಬಾರೇ', 'ಕುಂದೇಶ್ವರ', 'ಆನಿಗುಡ್ಡಿ ಗಣ್ಪತಿಯೇ ಕಣ್ತೆರೆ', 'ಅಮ್ಮಚ್ಚಿ ಹಾಡು', 'ಶಿವನ ಮೀಸುವ ಹಾಡು', 'ನನ್ನ ಹಾಡಿನ ಗಿಣಿಯೆ' ಇತ್ಯಾದಿ ಕವನಗಳಲ್ಲಿರುವ ಪ್ರಾದೇಶಿಕ ಸಂಸ್ಕೃತಿ ಬಿಂಬಿಸುವ ಅಂಶಗಳನ್ನು ತಿಳಿಸಲಾಗಿದೆ.

ಅಧ್ಯಾಯ 2.3: ವೈದೇಹಿಯವರ ಮಕ್ಕಳ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಸ್ಕೃತಿ

ವೈದೇಹಿಯವರು ಆಂಗ್ಲ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕದ ರೂಪಾಂತರ 'ಧಾಂ ಧೂಂ ಸುಂಟರಗಾಳಿ' ನಾಟಕದಲ್ಲಿ ಉಂಡಾಡಿ ಮತ್ತು ಗುಂಡಾಡಿ ಎಂಬ ಕುಂದಗನ್ನಡ ಮಾತನಾಡುವ ಪಾತ್ರಗಳನ್ನು ತಂದಿದ್ದಾರೆ. ಹಾಗೂ ಅವನದೇ ಮತ್ತೊಂದು ನಾಟಕ 'ಮ್ಯಾಕ್‌ಬೆತ್'ನ ರೂಪಾಂತರವಾದ 'ಗೊಂಬೆ ಮ್ಯಾಕ್‌ಬೆತ್' ನಾಟಕದಲ್ಲಿ ಸೂತ್ರಧಾರರು ಗೊಂಬೆಯಾಟ ಆಡಿಸುವಂತಹಾ ತಂತ್ರವಿದೆ. ಎರಡೂ ನಾಟಕಗಳಲ್ಲಿ ಅಲ್ಲಲ್ಲಿ ಕರಾವಳಿಯ ರಂಗಕಲೆ ಯಕ್ಷಗಾನದ ಶೈಲಿಯ ಸಂಭಾಷಣೆಗಳು

ನಡೆಯುವುದನ್ನು ಗಮನಿಸಲಾಗಿದೆ. ವೈದೇಹಿಯವರು ಬರೆದ 'ಕೋಟು ಗುಮ್ಮ', 'ಆನೆ ಬಂತೋ ಆನೆ' ಇತ್ಯಾದಿ ನಾಟಕಗಳಲ್ಲೂ ಅಲ್ಲಲ್ಲಿ ಕುಂದಗನ್ನಡದ ಸಂಭಾಷಣೆಗಳಿವೆ. ಇವುಗಳನ್ನೂ ಅಧ್ಯಯನ ಮಾಡಲಾಗಿದೆ.

ಅಧ್ಯಾಯ 3: ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯ ಅಭಿವ್ಯಕ್ತಿ

ಜಿ. ಎಸ್. ಶಿವರುದ್ರಪ್ಪನವರು 'ಸಾಹಿತ್ಯ ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬ' ಎಂದಿದ್ದಾರೆ. ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿದ್ದು ಸಮಾಜ ಸಾಗಬೇಕಾದ ಹಾದಿಯನ್ನು ತೋರುತ್ತಿರುತ್ತದೆ ಎಂಬ ದಿಸೆಯಲ್ಲಿ ಈ ಮಾತು ಬಹಳ ಅರ್ಥಪೂರ್ಣವಾಗಿದೆ. ಸಾಹಿತಿಗೂ, ಅವನಿರುವ ಪರಿಸರ ಮತ್ತು ಅವನನ್ನು ಒಳಗೊಂಡ ಸಮಾಜಕ್ಕೂ ಅನ್ಯೋನ್ಯ ಸಂಬಂಧವಿದೆ. ಅದನ್ನು ಅವನ ಬರಹಗಳಲ್ಲಿ ಮತ್ತು ಮಾತಿನಲ್ಲಿ ಗಮನಿಸುತ್ತೇವೆ.

ಮಾನವ ಹುಟ್ಟಿದಂದಿನಿಂದ ತಾನು ವಾಸಿಸುವ ಪ್ರಕೃತಿಯಲ್ಲಿ ಉಂಟಾಗುವ ಮಳೆ, ಮೋಡ, ಮಿಂಚು, ಗುಡುಗು, ಸಿಡಿಲು, ಚಳಿ, ಬಿಸಿಲು ಹಾಗೆಯೇ ಪ್ರಾಕೃತಿಕ ವಿಕೋಪಗಳಾದ ಬಿರುಗಾಳಿ, ಚಂಡಮಾರುತ, ಅಗ್ನಿಪರ್ವತ ಸ್ಫೋಟ, ತ್ಸುನಾಮಿ ಇತ್ಯಾದಿ ತನ್ನ ಊಹೆಗೆ ನಿಲುಕದ ವಿಚಾರಗಳ ಕುರಿತು ಚಿಂತಿಸುತ್ತಿರುತ್ತಾನೆ. ಹಾಗೆಯೇ ತನ್ನ ಸುತ್ತಲಿನ ಜನ ಸಮುದಾಯ, ಅವರನ್ನು ಒಳಗೊಂಡ ಸಮಾಜ, ತನ್ನ ಜೀವನದ ಅವಿಭಾಜ್ಯ ಅಂಗಗಳೆನಿಸಿದ ವಿವಾಹ, ಕುಟುಂಬ ಬಂಧುತ್ವ, ಶಿಕ್ಷಣ ಮುಂತಾದ ಸಂಸ್ಥೆಗಳು, ಇತರ ವ್ಯಕ್ತಿಗಳೊಂದಿಗಿನ ತನ್ನ ಸಂಬಂಧ ಇತ್ಯಾದಿಗಳ ಬಗೆಗೂ ತನ್ನೊಳಗೆ ಚಿಂತಿಸುತ್ತಾ ಸಿಗದ ಉತ್ತರವನ್ನು ಇತರರೊಂದಿಗಿನ ಚರ್ಚೆಗಳಲ್ಲಿ ಹುಡುಕುತ್ತಾ ಜೀವನ ಸಾಗಿಸುತ್ತಾನೆ.

3.1. ಸಾಮಾಜಿಕ ಚಿಂತನೆಯ ನಿರ್ವಚನ

ಮಾನವ ತಾನು ಬದುಕುತ್ತಿರುವ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ. ಅಲ್ಲಿರುವ ಸಾಮಾಜಿಕ ಸಮಸ್ಯೆಗಳನ್ನು, ಕೌಟುಂಬಿಕ ಸಮಸ್ಯೆಗಳನ್ನು ಅರಿಯುತ್ತಾನೆ. ಅವುಗಳಿಗೆ ಪರಿಹಾರವನ್ನು ತನ್ನದೇ ನೆಲೆಯಲ್ಲಿ ಚಿಂತಿಸುತ್ತಾನೆ. ಇತರರೊಂದಿಗೆ ಪರಿಹಾರದ ದಾರಿಗಳನ್ನು ಚರ್ಚಿಸುತ್ತಾನೆ. ಸಮಸ್ಯೆಯ ಪರಿಹಾರಕ್ಕಾಗಿ ಯತ್ನಿಸುತ್ತಿರುತ್ತಾನೆ. ಈ ಚಿಂತನೆಯನ್ನೇ ಸಾಮಾಜಿಕ ಚಿಂತನೆ ಎನ್ನುತ್ತಾರೆ ಎಂದು ತಿಳಿಸಿ, ಸಾಮಾಜಿಕ ಚಿಂತನೆಯ ಅರ್ಥದೊಂದಿಗೆ ಸಾಮಾಜಿಕ ಚಿಂತನೆಯ ಕುರಿತ ಬೊಗಾರ್ಡಸ್, ಹೆಚ್.ಜಿ. ಜೆನ್ನಿಸ್, ರೊಲಿನ್ ಚಾಂಬ್ಲಿಸ್, ಜೆ. ಬಿ. ಜಿಟ್ಲರ್ ಮುಂತಾದ ಸಮಾಜಶಾಸ್ತ್ರೀಯ ಚಿಂತಕರ ವ್ಯಾಖ್ಯೆಗಳನ್ನು ತಿಳಿಸಲಾಗಿದೆ.

3.2. ಸಮಾಜಶಾಸ್ತ್ರೀಯ ನೆಲೆಯಲ್ಲಿ ಸಾಮಾಜಿಕ ಚಿಂತನೆಯ ಅರ್ಥ

ಸಮಾಜದ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಹುಡುಕುವುದನ್ನು ಮುಖ್ಯ ಆಶಯವಾಗಿಸಿಕೊಂಡಿರುವ ಸಾಮಾಜಿಕ ಚಿಂತನೆಯ ಪ್ರಮುಖ ಅಂಶಗಳೆಂದು ಈ ಕೆಳಗಿನವುಗಳನ್ನು ಗುರುತಿಸಲಾಗಿದೆ:

- ಸಾಮಾಜಿಕ ಚಿಂತನೆ ಸಮಾಜಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚಿಂತನೆ ನಡೆಸುತ್ತದೆ.

- ಜನಸಮೂಹವು ಒಗ್ಗಟ್ಟಿನಿಂದ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವುದಕ್ಕೆ ಸಂಬಂಧಿಸಿದೆ.
- ಸಮಾಜದಲ್ಲಿ ನಡೆಯುವ ವಿವಿಧ ಪ್ರಕ್ರಿಯೆಗಳು ಮತ್ತು ಸಮಾಜದಲ್ಲಿರುವ ವ್ಯಕ್ತಿಗಳ ನಡುವಿನ ಒಡನಾಟಕ್ಕೆ ಸಂಬಂಧಿಸಿದೆ.
- ಸಾಮಾಜಿಕ ಚಿಂತನೆಯೆಂಬುದು ಹಲವು ವಿಚಾರವಂತ ವಿದ್ವಾಂಸರು ನಡೆಸಿರುವ ವಿಮರ್ಶಾತ್ಮಕ ಆಲೋಚನೆಗಳ ಫಲವಾಗಿ ಬೆಳೆದಿದೆ.
- ಸಾಮಾಜಿಕ ಚಿಂತನೆಯು ಕಾಲ–ದೇಶಗಳ ಪರಿಸ್ಥಿತಿಗಳಿಗೆ ಅನುಗುಣವಾಗಿ, ಮಾನವರ ಅನುಭವಗಳಿಂದ ಪ್ರೇರಿತವಾಗಿ ಬೆಳೆದಿದೆ.
- ಮಾನವರು ತಮ್ಮ ಸಹಜೀವಿಗಳೊಂದಿಗೆ ಸಮಾಜದ ಕುರಿತು ಚಿಂತಿಸುವಾಗ ಸಾಮಾಜಿಕ ಚಿಂತನೆ ಬೆಳೆಯುತ್ತದೆ.
- ಪ್ರತಿಭಾನ್ವಿತ ಚಿಂತಕರ ಚಿಂತನೆಯ ಫಲವಾಗಿ ಸಾಮಾಜಿಕ ಚಿಂತನೆ ಬೆಳೆಯುತ್ತದೆ.

3.3. ಸಮಾಜಕೇಂದ್ರಿತ ವಿಮರ್ಶೆಯ ನೆಲೆಯಲ್ಲಿ ಸಾಮಾಜಿಕ ಚಿಂತನೆಯ ಅರ್ಥ

ಸಮಾಜಶಾಸ್ತ್ರದೊಂದಿಗೆ ಪಾಶ್ಚಾತ್ಯ ಸಾಹಿತ್ಯವಾದಗಳಿಂದ ನಮಗೆ ದೊರೆತಿರುವ ಸಮಾಜಕೇಂದ್ರಿತ ವಿಮರ್ಶಾ ಪಂಥಗಳ ಹಿನ್ನೆಲೆಯಲ್ಲಿ ಸಾಮಾಜಿಕ ಚಿಂತನೆಯು ಈ ಕೆಳಗಿನಂತಿದೆ:

1. **ಚಾರಿತ್ರಿಕವಾದ**
2. **ಮಾರ್ಕ್ಸ್‌ವಾದ**
3. **ಸ್ತ್ರೀವಾದ**

3.3.1. ಚಾರಿತ್ರಿಕವಾದ

ಚಾರಿತ್ರಿಕವಾದ ಅಥವಾ ಚಾರಿತ್ರಿಕ ವಿಮರ್ಶೆಯ ಮಾನದಂಡಗಳು ಒಬ್ಬ ವಿಮರ್ಶಕನಿಂದ ವಿಮರ್ಶಕನಿಂದ ಮತ್ತೊಬ್ಬ ವಿಮರ್ಶಕನಿಗೆ ಬದಲಾಗುತ್ತಿರುತ್ತವೆ. ಚಾರಿತ್ರಿಕ ವಿಮರ್ಶೆಯ ಲಕ್ಷಣಗಳನ್ನು ಈ ರೀತಿಯಾಗಿ ಗಮನಿಸಬಹುದು:

1) ಲೇಖಕನೊಬ್ಬನ ಸಮಕಾಲೀನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಅಪಾರ ಪಾಂಡಿತ್ಯ ಹಾಗೂ ಶ್ರಮದ ಮೂಲಕ ಪುನರ್ನಿರ್ಮಿಸುವುದು.
2) ಕೃತಿ ನಿರ್ಮಾಣ ಕಾಲದಲ್ಲಿ ಪ್ರಭಾವಶಾಲಿಯಾಗಿದ್ದ ವೈಚಾರಿಕತೆಯನ್ನು ಗುರುತಿಸುವುದು.
3) ಒಂದು ಕೃತಿಯ ಸಾಹಿತ್ಯಕ ಆಕರಗಳು ಮತ್ತು ಒಂದು ಕೃತಿಯ ಮೇಲೆ ಪ್ರಭಾವ

ಬೀರಿರಬಹುದಾದ ಇತರ ಕೃತಿಗಳು – ಇವನ್ನು ಸಂಶೋಧಿಸುವುದು

4) ಪ್ರಾಚೀನ ಕಾಲದ ಕೃತಿಯ ಅನೇಕ ಪಾಠಾಂತರಗಳನ್ನು ಪರಿಶೀಲಿಸಿ ಯೋಗ್ಯ 'ಪಠ್ಯ'ವನ್ನು ಸಿದ್ಧಪಡಿಸುವುದು

5) ಒಂದು ಕೃತಿಯ ಕಾಲ – ನಿರ್ದೇಶನ ಮಾಡುವುದು

6) ಕೃತಿಕಾರನ ವೈಚಾರಿಕ ಮೌಲ್ಯಗಳನ್ನು ಗುರುತಿಸುವುದು;

7) ಕೃತಿಕಾರನ ಜೀವನ ಚರಿತ್ರೆಯನ್ನು ಸಿದ್ಧಪಡಿಸುವುದು – ಇವೆಲ್ಲವೂ ಚಾರಿತ್ರಿಕ ವಿಮರ್ಶೆಯ ವ್ಯಾಪ್ತಿಯೊಳಗೇ ಬರುತ್ತವೆ.

19ನೆಯ ಶತಮಾನದ ಫ್ರೆಂಚ್ ವಿಮರ್ಶಕ–ಇತಿಹಾಸಕಾರ ಹಿಪೋಲಿಟ್ ಟೇನ್ (Hippolyte Taine) ಚಾರಿತ್ರಿಕ ವಿಮರ್ಶೆಯ ಜನಕ. ತನ್ನ ಸುಪ್ರಸಿದ್ಧ 'ಇಂಗ್ಲಿಷ್ ಸಾಹಿತ್ಯದ ಇತಿಹಾಸ' (1863) ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಟೇನ್ ಚಾರಿತ್ರಿಕ ವಿಮರ್ಶೆಗೆ ಸಂಬಂಧಿಸಿದ ಮೂಲ ಸಿದ್ಧಾಂತಗಳನ್ನು ವಿವರಿಸುತ್ತಾನೆ. ಅದೇ ಕಾಲದ ಕ್ರಾಂತಿಕಾರಕ ಇತಿಹಾಸಕಾರ ಲೆಪಲ್ಡ್ ರಾಂಕ್‌ನ ವಿಚಾರಗಳಿಂದ ಪ್ರಭಾವಿತನಾದ ಟೇನ್ ಸಾಹಿತ್ಯ ವಿಮರ್ಶೆಯಲ್ಲಿ ಅನುಸರಿಸಬೇಕಾದ ಮೂರು ನಿರ್ಣಾಯಕ ಪ್ರಮಾಣಗಳನ್ನು 'ಜನಾಂಗ–ಕಾಲಘಟ್ಟ–ಯುಗ' ಎಂದು ಉಲ್ಲೇಖಿಸಿ ವಿವರಿಸಿದ್ದನ್ನು ತಿಳಿಸಲಾಗಿದೆ.

ಮುಂದೆ ಅಮೆರಿಕನ್ ನವ್ಯ ವಿಮರ್ಶಕರಾದ ಎಲಿಯಟ್, ರಾನ್ಸಮ್, ಕ್ಲಿಯಂತ್ ಬ್ರೂಕ್ಸ್ ಈ ವಿಮರ್ಶಾ ಮಾರ್ಗವನ್ನು ಬಲವಾಗಿ ಖಂಡಿಸಿದ್ದನ್ನು, ಅದಕ್ಕೆ ಅವರು ನೀಡಿದ ಕಾರಣಗಳನ್ನೂ ವಿವರಿಸಲಾಗಿದೆ.

ಕನ್ನಡದಲ್ಲಿ ಆರ್. ನರಸಿಂಹಾಚಾರ್ ಅವರ 'ಕವಿಚರಿತೆ', ರಂ. ಶ್ರೀ. ಮುಗಳಿಯವ 'ಕನ್ನಡ ಸಾಹಿತ್ಯ ಚರಿತ್ರೆ', ಪಂಪನ ಕಾಲ–ದೇಶ–ವೈಚಾರಿಕತೆಗಳನ್ನು ಗುರುತಿಸುವ ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ', ಇತಿಹಾಸ–ಸಾಹಿತ್ಯಗಳನ್ನು ಕುರಿತ ಮಂಜೇಶ್ವರ ಗೋವಿಂದ ಪೈಯವರ ಸಂಶೋಧನಾತ್ಮಕ ಲೇಖನಗಳು, ಸೇಡಿಯಾಪು ಕೃಷ್ಣಭಟ್ಟರ 'ವಿಚಾರ ಪ್ರಪಂಚ', ಸಿ. ವೀರಣ್ಣನವರ 'ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ' – ಇವುಗಳನ್ನು ಚಾರಿತ್ರಿಕ ವಿಮರ್ಶೆಯ ಮಾರ್ಗವನ್ನು ಅನುಸರಿಸಿರುವ ಕೃತಿಗಳಿಗೆ ಕೆಲವು ಮುಖ್ಯ ಉದಾಹರಣೆಗಳಾಗಿ ಉಲ್ಲೇಖಿಸಲಾಗಿದೆ.

ಕಳೆದೆರಡು ದಶಕಗಳಿಂದ ಚಾರಿತ್ರಿಕ ವಿಮರ್ಶೆ 'ನವಚಾರಿತ್ರಿಕ ವಾದ' (New Historicism) ಎಂಬ ಹೆಸರಿನಲ್ಲಿ ಮರುಹುಟ್ಟು ಪಡೆದಿದ್ದನ್ನು ಸ್ಟೀಫನ್ ಗ್ರೀನ್‌ಬ್ಲಾಟ್, ಲೂಯಿ ಮಾನ್ಟ್ರೋಸ್, ಕ್ಲಿಫರ್ಡ್ ಜಿರ್ಟ್ಸ್ ಇವರು ಅದರ ಪುನರುತ್ಥಾನಕ್ಕೆ ಕಾರಣರೆಂಬುದನ್ನು ಗುರುತಿಸಲಾಗಿದೆ. ಗ್ರೀನ್ಬ್ಲಾಟ್ ಮತ್ತು ಇತರ ನವಚಾರಿತ್ರಿಕವಾದಿಗಳ ಅಧ್ಯಯನದ ನಾಲ್ಕು ಮುಖ್ಯ ಅಂಶಗಳನ್ನು ಸಂಗ್ರಹಿಸಿ, ದಾಖಲಿಸಲಾಗಿದೆ.

3.3.2. ಮಾರ್ಕ್ಸ್‌ವಾದಿ ವಿಮರ್ಶೆ

ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ಇವರ ಆರ್ಥಿಕ – ಸಾಮಾಜಿಕ ಸಿದ್ಧಾಂತಗಳನ್ನು ಆಧರಿಸಿದ ಬರವಣಿಗೆಗಳು ಮಾರ್ಕ್ಸ್‌ವಾದದ ಹುಟ್ಟಿಗೆ ಪ್ರಮುಖ ಕಾರಣ. ಅದರ ಆಧಾರದಲ್ಲೇ ಮಾರ್ಕ್ಸ್‌ವಾದಿ ವಿಮರ್ಶಕರು ಸಮಾಜ ರಚನೆಯನ್ನು ಅಧ್ಯಯನ ಮಾಡುತ್ತಾರೆ. ಮಾರ್ಕ್ಸ್‌ವಾದಿ ವಿಮರ್ಶಕರ ದೃಷ್ಟಿಯಲ್ಲಿ ಇತರ ವಿಮರ್ಶಾ ಮಾರ್ಗಗಳಂತೆ 'ಮಾರ್ಕ್ಸ್‌ವಾದಿ ವಿಮರ್ಶೆ'ಯೂ ಒಂದು ಮಾರ್ಗವಲ್ಲ. ಮಾರ್ಕ್ಸ್‌ವಾದವು ಮಾನವ ಸಮಾಜಗಳನ್ನು ಮತ್ತು ಅವುಗಳ ಪರಿವರ್ತನೆಯನ್ನು ಕುರಿತ ವೈಜ್ಞಾನಿಕ ಸಿದ್ಧಾಂತವೆಂದು ಮಾರ್ಕ್ಸ್‌ವಾದಿಗಳು ನಂಬುತ್ತಾರೆ. ಕಾರ್ಲ್‌ಮಾರ್ಕ್ಸ್‌ನ ಎರಡು ಮುಖ್ಯ ಹೇಳಿಕೆಗಳು ಈ ವಿಮರ್ಶಾಕ್ರಮದ ಉಗಮದ ಹಿನ್ನೆಲೆಯನ್ನು ತಿಳಿಸುತ್ತವೆ. ಅವುಗಳ ಉಲ್ಲೇಖದೊಂದಿಗೆ ಮಾರ್ಕ್ಸ್‌ವಾದಿ ವಿಮರ್ಶೆಯ ಮುಖ್ಯ ವೈಚಾರಿಕ ನಿಲುವನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ. ಕಾರ್ಲ್‌ಮಾರ್ಕ್ಸ್‌ನ ವಿಚಾರಗಳೊಂದಿಗೆ ಮಾರ್ಕ್ಸ್‌ವಾದಿಗಳು ಗಮನಿಸುವ ಮುಖ್ಯ ವಿಚಾರಗಳನ್ನೂ ತಿಳಿಸಲಾಗಿದೆ.

ಮಾರ್ಕ್ಸ್‌ವಾದದ ಕೆಲವು ಮುಖ್ಯ ಪರಿಕಲ್ಪನೆಗಳಾದ 'ಸಾಂಸ್ಕೃತಿಕ ಯಾಜಮಾನ್ಯ' ಮತ್ತು ಅದರ ರೀತಿನೀತಿಗಳು, ನಿಯಮಗಳು, 'ಕೃತಿ ಸುಪ್ತಪ್ರಜ್ಞೆ ಮತ್ತು ರಾಜಕೀಯ ಸುಪ್ತಪ್ರಜ್ಞೆ', 'ಮಾರ್ಕ್ಸ್‌ವಾದ ಮತ್ತು ಜನಪ್ರಿಯ ಕಲೆಗಳು' ಇವುಗಳನ್ನು ಉಲ್ಲೇಖಿಸಿ ವಿವರಿಸಲಾಗಿದೆ.

3.3.3. ಸ್ತ್ರೀವಾದಿ ವಿಮರ್ಶೆ

20ನೇ ಶತಮಾನದ ಉತ್ತರದಲ್ಲಿ ಹೆಚ್ಚಾಗಿ ಅಮೆರಿಕಾ ಮತ್ತು ಫ್ರಾನ್ಸ್ ದೇಶಗಳಲ್ಲಿ ಬೆಳೆದು ಬಂದ 'ಸ್ತ್ರೀ ಸ್ವಾತಂತ್ರ್ಯ ಚಳುವಳಿ'ಯ ಕವಲು 'ಸ್ತ್ರೀವಾದಿ ವಿಮರ್ಶೆ'. ಇಂತಹ ವಿಮರ್ಶೆ ಸಮಾಜಕೇಂದ್ರಿತ ವಿಮರ್ಶೆಯ ಒಂದು ಮುಖ್ಯ ಕವಲಾಗಿದ್ದು ಮನೋವೈಜ್ಞಾನಿಕ ವಿಮರ್ಶೆ ಮತ್ತು ಮಾರ್ಕ್ಸ್‌ವಾದಿ ವಿಮರ್ಶೆ ಇವೆರಡಕ್ಕೂ ಹತ್ತಿರವಾಗಿದೆ ಎಂಬುದನ್ನು, ಸ್ತ್ರೀವಾದಿ ವಿಮರ್ಶೆಯ ಉಗಮ ವಿಕಾಸ ಮತ್ತು ಉಳಿದ ಸಮಾಜಕೇಂದ್ರಿತ ವಿಮರ್ಶಾ ಪಂಥಗಳೊಂದಿಗಿನ ಅದರ ಸಂಬಂಧಗಳನ್ನು ತಿಳಿಸಲಾಗಿದೆ.

ಹದಿನೆಂಟನೆಯ ಶತಮಾನದ **ಲೇಡಿ ಮೇರಿ ವರ್ಟ್ಲೀ ಮಾಂಟೆಗೊ,** ('ಸ್ತ್ರೀಯರ ಹಕ್ಕುಗಳ ಸಮರ್ಥನೆ' – 1792 – ಎಲ್ಲಾ ಸ್ತ್ರೀಯರಿಗೂ ಸಮಾನ ಹಕ್ಕುಗಳ ಪ್ರತಿಪಾದನೆ, ಸಹಶಿಕ್ಷಣ ಮತ್ತು ಸಮಾನ ಶಿಕ್ಷಣಾವಕಾಶ ಮತ್ತು 'ಪುರುಷನ ಆಧಾರವನ್ನು ಸದಾ ಬಯಸುವ ಸ್ತ್ರೀ ಮಾದರಿ'ಯ ತಿರಸ್ಕಾರ) ಮತ್ತು **ಮೇರಿ ವುಲ್‌ಸ್ಟನ್ ಕ್ರಾಫ್ಟ್** (ಮಗಳ/ಹೆಣ್ಣುಮಕ್ಕಳ ಶಿಕ್ಷಣದ ಕುರಿತ ಚಿಂತನೆಗಳು–1787, ಮಹಿಳಾ ಹಕ್ಕುಗಳ ಸಮರ್ಥನೆ–1792 ಮಹಿಳಾ ಶಿಕ್ಷಣ ಪ್ರತಿಪಾದನೆ) ಇವರಿಂದ ಆರಂಭವಾದ ಈ ಸ್ತ್ರೀವಾದಿ ಚಿಂತನೆಯು ಸ್ತ್ರೀ ಚಳುವಳಿಯ ಮುಖ್ಯ ವಕ್ತಾರರಾದ **ಸಿಮೋನ್ ದ ಬೋವಾ** (ದ್ವಿತೀಯ ಲಿಂಗ – ಮನಃಶಾಸ್ತ್ರ, ಮತ–ಧರ್ಮಗಳು, ಚರಿತ್ರೆ, ಸಾಹಿತ್ಯ ಇವೆಲ್ಲವುಗಳ ನೆಲೆಯಲ್ಲಿ ಪ್ರಾಚೀನ ಕಾಲದಿಂದಲೂ ಎಲ್ಲಾ ಸಮಾಜಗಳಲ್ಲಿ ಸ್ತ್ರೀ **'ಎರಡನೆಯ ದರ್ಜೆಯ ಪ್ರಜೆ'**ಯಾಗಿದ್ದಾಳೆ. ಇದು ಸಮಾಜಕ್ಕೆ ಹಾನಿಕಾರಕ, ಪುರುಷರು ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿಯಂತಲ್ಲದೆ,

ಪುರುಷತ್ವಕ್ಕೆ ಪೂರಕವಾಗುವ ಪಾತ್ರಗಳಲ್ಲಿ ಕಂಡಿದ್ದಾರೆ. ಸ್ತ್ರೀಯ ಪಾಲನೆ, ಅವಳಿಗೆ ನೀಡುವ ಶಿಕ್ಷಣ, ಅವಳ ಸಾಮಾಜಿಕ ಪರಿಸ್ಥಿತಿ ಇವೆಲ್ಲವೂ ಹೇಗೆ ಸ್ತ್ರೀಯನ್ನು ಒಂದು ಪೂರ್ವನಿರ್ಧಾರಿತ ಪ್ರಕಾರದಲ್ಲಿ ನಿಯಂತ್ರಿಸಿ ಸ್ವತಃ ಅವಳೇ ತನ್ನ ಪರಾಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ. ತನ್ನ ಪರಾಧೀನ ಪರಿಸ್ಥಿತಿಯಿಂದ ಸ್ತ್ರೀ ಹೊರಬರಬೇಕಾದರೆ ಆಗಬೇಕಾದ ಸಾಮಾಜಿಕ–ವೈಚಾರಿಕ ಪರಿವರ್ತನೆಗಳ ಅಗತ್ಯವಿದೆ. 'ಅನ್ಯವಾಗಿಸುವಿಕೆ' (Othering), 'ಲಿಂಗಭೇದ' ಮತ್ತು 'ಲಿಂಗಾಧಾರಿತ ಅಸಮಾನತೆ',), **ಜೂಲಿಯ ಕ್ರಿಸ್ಟೇವ** ಮತ್ತು **ಕೇಟ್ ಮಿಲೆಟ್** ('ಲೈಂಗಿಕ ರಾಜಕೀಯ'–1970, ಸ್ತ್ರೀಯರ ಪಾರತಂತ್ರಕ್ಕೆ ಕಾರಣ 'ಪಿತೃಪ್ರಧಾನ ವ್ಯವಸ್ಥೆ','ಸ್ತ್ರೀಯರು ಪುರುಷರ 'ಲೈಂಗಿಕ ರಾಜಕೀಯ'ದ ಬಲಿಪಶುಗಳು. ಪುರುಷರಿಂದ 'ಸಿದ್ಧ ಪಡಿಯಚ್ಚುಗಳ ಒಳಗಿನ ಸ್ತ್ರೀ ಬದುಕು ನಿರ್ಧರಿಸಲ್ಪಟ್ಟಿದೆ', ಲಿಂಗಭೇದವು ಜೈವಿಕವಾಗಿ ನಿರ್ಧರಿಸಲ್ಪಟ್ಟಿದ್ದರೆ ಲಿಂಗಪ್ರಜ್ಞೆಯನ್ನು ಶಿಕ್ಷಣ,ಸಂಸ್ಕೃತಿ,ಮತ–ಧರ್ಮಾಚರಣೆಗಳು ಮತ್ತು ನಂಬಿಕೆಗಳು ರೂಪಿಸುತ್ತವೆ.) **ವರ್ಜೀನಿಯಾ ವುಲ್ಫ್** ('ತನ್ನದೇ ಆದ ಸ್ವತಂತ್ರ ಕೊಠಡಿ' –1929, ಸಾಹಿತ್ಯ ರಚನೆಗೆ 'ಸ್ವಂತ ಕೊಠಡಿ' ಮತ್ತು 'ಸ್ವಂತ ಆದಾಯ' ಅಗತ್ಯ), **ಶಾರನ್ ಸ್ಪೆನ್ಸರ್** ಗುರುತಿಸಿದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನು ಹೊಂದಿದ ಸ್ತ್ರೀವಾದಿ ಚಿಂತನೆಯ ಸಾಹಿತ್ಯಕ ದಿಕ್ಕುಗಳನ್ನು ಅವುಗಳನ್ನು ಸಹಮತಿಸಿದ **ಎಲೆನ್ ಶೋವಾಲ್ಟರ್** ('ಸ್ತ್ರೀವಾದಿ ಕಾವ್ಯಮೀಮಾಂಸೆಯ ಬಗ್ಗೆ' –1979, ಆಧುನಿಕ ಸ್ತ್ರೀವಾದವನ್ನು 'ಸ್ತ್ರೀಯನ್ನು ಓದುಗಳಾಗಿ' ಮತ್ತು 'ಸ್ತ್ರೀಯನ್ನು ಲೇಖಕಿ'ಯಂತೆ ಪರಿಗಣಿಸುವ ಎರಡು ವರ್ಗಗಳಿವೆ. ಇವುಗಳೇ ಅನುಕ್ರಮವಾಗಿ 'ಸ್ತ್ರೀವಾದಿ' ಮತ್ತು 'ಸ್ತ್ರೀನಿಷ್ಠ' ವಿಮರ್ಶೆಗಳು) ಇವರ ಅಭಿಪ್ರಾಯಗಳನ್ನು ಉಲ್ಲೇಖಿಸಿ ವಿವರಿಸಲಾಗಿದೆ.

ಮುಖ್ಯವಾಗಿ ಸ್ತ್ರೀವಾದದಲ್ಲಿ ಎರಡು ಕವಲುಗಳಿವೆ. ಮೊದಲಿನದು ಜೇನ್ ಗ್ಯಾಲಪ್, ಕೇಟ್ ಮಿಲೆಟ್ ಪ್ರತಿಪಾದಿಸುವಂತೆ ಸ್ತ್ರೀ–ಪುರುಷ ಸಮಾನತೆಗೆ ಒತ್ತುನೀಡುತ್ತದೆ. ಎರಡನೆಯದು ಮಿಶೆಲ್ ಬ್ಯಾರಟ್, ಜೂಲಿಯ ಕ್ರಿಸ್ಟೇವ ಮುಂತಾದವರು ಪ್ರತಿಪಾದಿಸುವಂತೆ ಪುರುಷರಿಗಿಂತ ಪ್ರಜ್ಞೆಯಲ್ಲಿ, ಪ್ರತಿಸ್ಪಂದನೆಯಲ್ಲಿ ಸ್ತ್ರೀ ಭಿನ್ನಳು, ಮತ್ತು ಈ ಭಿನ್ನತೆಯೇ ಸ್ತ್ರೀಯ ವಿಶಿಷ್ಟ ಶಕ್ತಿ ಎನ್ನುತ್ತದೆ.

ಭಾರತ ಮತ್ತು ಕರ್ನಾಟಕಗಳಲ್ಲಿ ಪಾಶ್ಚಾತ್ಯರ ಪ್ರಭಾವದಿಂದ ಬಂದ ಸ್ತ್ರೀವಾದವನ್ನು ಸ್ವೀಕರಿಸಿ ಅದನ್ನು ಒಪ್ಪಿಕೊಳ್ಳುವ ಮತ್ತು ಅದಕ್ಕೆ ಬೇರೆ ಬೇರೆ ಅಭಿಪ್ರಾಯಗಳನ್ನು ಮಂಡಿಸುವ ಕೆಲಸ ನಡೆಯುತ್ತಿದೆ. ಆದರೆ ಭಾರತ ಇಂಗ್ಲೆಂಡ್ – ಫ್ರಾನ್ಸ್‌ಗಳಂತಲ್ಲದೆ ಬಹುಧರ್ಮೀಯ, ಬಹುಜಾತೀಯ, ಬಹುಭಾಷಿಕ ರಾಷ್ಟ್ರವಾಗಿದೆ. ಆದ್ದರಿಂದ ಭಾರತೀಯ ಸ್ತ್ರೀವಾದಿಗಳು ಪಾಶ್ಚಿಮಾತ್ಯ ಸ್ತ್ರೀವಾದಿಗಳಿಗಿಂತ ಬೇರೆಯಾದ ಕೆಲವು ವೈಚಾರಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಕುರಿತು ಡಿ. ಆರ್. ನಾಗರಾಜ್ ಮತ್ತು ಮನುಚಕ್ರವರ್ತಿ ವಾದಿಸುವಂತೆ, ಭಾರತೀಯ ಸ್ತ್ರೀವಾದ ಪಾಶ್ಚಿಮಾತ್ಯ ಸ್ತ್ರೀವಾದದ ಸಾರಾಸಗಟು ಆಮದು ಆಗಬಾರದು; ಮತ್ತು

ಬಹುಆಕೃತಿಯ ಭಾರತೀಯ ಸಮಾಜ–ಸಂಸ್ಕೃತಿಗಳಿಗೆ ತಕ್ಕದಾಗುವಂತೆ ನಮ್ಮದೇ ಆದ ಸ್ತ್ರೀವಾದವನ್ನು ಬೆಳೆಸಬೇಕು ಎಂಬ ಹೇಳಿಕೆಯನ್ನು ಗಮನಿಸಲಾಗಿದೆ.

ಪಾಶ್ಚಾತ್ಯ ಸಮಾಜಕ್ಕಿಂತ ಭಿನ್ನವಾದ ಸಾಮಾಜಿಕ ವ್ಯವಸ್ಥೆ ಹೊಂದಿದ ಭಾರತದಲ್ಲಿ ಮತ–ಧರ್ಮಗಳು ಸ್ತ್ರೀಯರಿಗೆ ವಿಧಿಸಿದ ವಿಭಿನ್ನ ಕಟ್ಟುಪಾಡುಗಳು ಭಿನ್ನವಾಗಿವೆ. ಹೀಗಾಗಿ ಭಾರತೀಯ ಸ್ತ್ರೀವಾದವು ಬೆಳೆಯಬೇಕಾದರೆ, ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಾದರೆ, ಭಾರತೀಯ ಸಮಾಜದ ಮತ–ಧರ್ಮ–ಜಾತಿಗಳ ರಚನಾ ವಿಧಾನ ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಪರಿಹಾರ ಪಡೆಯಲು ಪ್ರಯತ್ನಿಸಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಕಳೆದೆರಡು ದಶಕಗಳಲ್ಲಿ ಕನ್ನಡದಲ್ಲಿ, ಸಾಕಷ್ಟು ಸ್ತ್ರೀವಾದಿ ಚಿಂತನೆ ಬೆಳೆದಿದೆ, ಇಲ್ಲಿ ಗುರುತಿಸಬಹುದಾದ ಪ್ರಮುಖ ಸ್ತ್ರೀವಾದಿ ವಿಮರ್ಶಕಿಯರೆಂದರೆ ತೇಜಸ್ವಿನಿ ನಿರಂಜನ, ವಿಜಯಾ ದಬ್ಬೆ, ಬಿ. ಎನ್. ಸುಮಿತ್ರಾಬಾಯಿ, ನೇಮಿಚಂದ್ರ, ಎನ್. ಗಾಯತ್ರಿ, ಬಿ. ಎಂ. ರೋಹಿಣಿ, ಮುಂತಾದವರು. ಈ ಸಾಲಿನಲ್ಲಿ ವೈದೇಹಿಯವರೂ ಇದ್ದಾರೆ. ಪಾಶ್ಚಾತ್ಯ ಸ್ತ್ರೀವಾದದ ಕವಲುಗಳಿಗಿಂತ ವೈದೇಹಿಯವರ ಸ್ತ್ರೀವಾದ ಹೇಗೆ ಭಿನ್ನ ಎಂಬುದನ್ನು ಅವರ 'ಮಲ್ಲಿನಾಥನ ಧ್ಯಾನ' ಪ್ರಬಂಧ ಸಂಕಲನದ 'ನಮ್ಮ ಲೋಕದ ಗೀತೆ' ಪ್ರಬಂಧದಲ್ಲಿ ಅವರೇ ಹೇಳಿರುವ ಮಾತುಗಳನ್ನು ಉಲ್ಲೇಖಿಸಿ, ವಿವರಿಸಲಾಗಿದೆ.

ವೈದೇಹಿಯವರ ಸ್ತ್ರೀವಾದವು ಸಮಾನತೆಗಾಗಿ ಹೆಣ್ಣನ್ನು ಗಂಡಿನಂತಾಗಬೇಕೆಂದು ಅಥವಾ ಗಂಡನ್ನು ಅನುಸರಿಸಬೇಕೆಂದು ಹೇಳುವುದಿಲ್ಲ. ಬದಲಾಗಿ ಹೆಣ್ಣಿನಲ್ಲಿರುವ 'ತಾಯ್ತನ ಎಂಬ ಜೈವಿಕ ವೈಶಿಷ್ಟ್ಯ'ದಿಂದಲೇ ಅವಳು ಗಂಡಿಗಿಂತಲೂ ಭಿನ್ನ ಮತ್ತು ಅನನ್ಯಳು ಎನ್ನುತ್ತದೆ. ಜಾಗತಿಕವಾಗಿ ಜೂಲಿಯ ಕ್ರಿಸ್ಟೇವ ಮುಂತಾದವರ ಸ್ತ್ರೀವಾದಕ್ಕೆ ವೈದೇಹಿಯವರ ಸ್ತ್ರೀವಾದವು ಹತ್ತಿರವಿದೆ.

3.4. ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯ ಅಧ್ಯಯನದ ಅಗತ್ಯ

ಸಾಮಾನ್ಯವಾಗಿ ಹಲವು ವ್ಯಕ್ತಿಗಳು ಸಮಾಜದ ಸಮಸ್ಯೆಗಳ ಕುರಿತು ಚಿಂತಿಸುತ್ತಾರಾದರೂ ಎಲ್ಲರಿಗೂ ಅವುಗಳನ್ನು ಉಳಿದವರಿಗೆ ತಲುಪಿಸಲು ಸಾಧ್ಯವಿಲ್ಲ. ಬರಹಗಾರನಾದವನು ಸಮಾಜವನ್ನು, ಅಲ್ಲಿಯ ಜನ ಸಮುದಾಯವನ್ನೂ ಸದಾಕಾಲ ಹತ್ತಿರದಿಂದ ನೋಡಿ, ಅಲ್ಲಿಯ ಸಮಸ್ಯೆಗಳನ್ನು ತನ್ನ ಸಾಹಿತ್ಯದಲ್ಲಿ ಕತೆ, ಕಾದಂಬರಿ ಅಥವಾ ಲೇಖನದ ಮೂಲಕವೋ ಜನರಿಗೆ ತಲುಪಿಸಿ ಜನರೇ ಸಾಮಾಜಿಕ ಬದಲಾವಣೆ ಪ್ರಯತ್ನಿಸುವಂತೆ ಮಾಡುತ್ತಾನೆ. ಆ ಸಾಹಿತ್ಯವನ್ನು ನೂರು ಜನ ಓದಿದರೆ ಅದರಲ್ಲಿ ಮೂವತ್ತು ಜನರು ಸ್ಪಂದಿಸುತ್ತಾರೆ. ಅದರಲ್ಲಿ ಐದು ಜನರಾದರೂ ಎಚ್ಚೆತ್ತು ಸಮಸ್ಯೆಯ ಪರಿಹಾರಕ್ಕೆ ಯತ್ನಿಸಿದರೆ ಲೇಖಕನ ಕಾಳಜಿಯು ಬೆಲೆ ಪಡೆಯುತ್ತದೆ.

ಬರಹಗಾರನ ಸಾಮಾಜಿಕ ಕಾಳಜಿ ವಹಿಸುವ ಬರಹಗಳಿಗೆ ಉದಾಹರಣೆಯಾಗಿ ನವೋದಯ ಕಾಲಘಟ್ಟದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ', ಬೋಳಾರ ಬಾಬುರಾಯರ 'ವಾಗ್ದೇವಿ', ಎಂ.ಎಸ್.

ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹರಾಯ', ಕೋಟ ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ', 'ಮೈಮನಗಳ ಸುಳಿಯಲ್ಲಿ', 'ಕುಡಿಯರ ಕೂಸು', 'ಚೋಮನ ದುಡಿ', 'ಮರಳಿ ಮಣ್ಣಿಗೆ', ಕುವೆಂಪು ಅವರ 'ಕಾನೂರು ಹೆಗ್ಗಡತಿ', ಕೊರಡ್ಕಲ್ಲು ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ' ಇತ್ಯಾದಿಗಳನ್ನು, ಪ್ರಗತಿಶೀಲ ಕಾಲಘಟ್ಟದ ಅನಕೃ ಅವರ ಅನ್ನದಾತ, ಕಲಾವಿದ, ನಗ್ನಸತ್ಯ, ತ.ರಾಸು. ಅವರ ಚಂದವಳ್ಳಿಯ ತೋಟ, ಮರುಳು ಸೇತುವೆ, ಬೆಂಕಿಯ ಬಲೆ, ನಿರಂಜನರ ಚಿರಸ್ಮರಣೆ, ಮೃತ್ಯುಂಜಯ, ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು', 'ಜ್ವಾಲಾಮುಖಿಯ ಮೇಲೆ', 'ಜನಿವಾರ ಮತ್ತು ಶಿವದಾರ', 'ಅಜ್ಞಾತವಾಸಿ' ನವ್ಯ ಕಾಲಘಟ್ಟದ ಯು. ಆರ್. ಅನಂತಮೂರ್ತಿಯವರ ಭಾರತೀಪುರ, ಸಂಸ್ಕಾರ, ಅವಸ್ಥೆ, ಯಶವಂತ ಚಿತ್ತಾಲರ ಶಿಕಾರಿ, ಛೇದ, ಪುರುಷೋತ್ತಮ, ದಿಗಂಬರ, ಶಾಂತಿನಾಥ ದೇಸಾಯಿಯವರ ಮುಕ್ತಿ, ವಿಕ್ಷೇಪ, ಸಂಬಂಧ, ಬೀಜ, ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕಾಡು ಮತ್ತು ಕ್ರೌರ್ಯ', 'ಚಿದಂಬರ ರಹಸ್ಯ', 'ಜುಗಾರಿ ಕ್ರಾಸ್', 'ಪರಿಸರದ ಕತೆ', ದಲಿತ ಬಂಡಾಯ ಕಾಲಘಟ್ಟದ 'ಬುಗುರಿ', 'ಭೂಮಿ', 'ದೇವರ ದಾರಿ', ಅಮರೇಶ ನುಗಡೋಣಿಯವರ 'ಮಣ್ಣು ಸೇರಿತು ಬೀಜ', 'ತಮಂಧದ ಕೇಡು', ದೇವನೂರ ಮಹಾದೇವ ಅವರ 'ಕುಸುಮಬಾಲೆ', 'ಒಡಲಾಳ', 'ದ್ಯಾವನೂರು', ಡಾ. ಸಿದ್ಧಲಿಂಗಯ್ಯನವರ 'ಏಕಲವ್ಯ', 'ಪಂಚಮ', 'ನೆಲಸಮ' ನಾಟಕಗಳು, 'ಹೊಲೆಮಾದಿಗರ ಹಾಡು', 'ಮೆರವಣಿಗೆ', 'ಸಾವಿರಾರು ನದಿಗಳು', 'ನನ್ನ ಜನಗಳು' ಕವನ ಸಂಕಲನಗಳು, ಕೆ. ಬಿ. ಸಿದ್ದಯ್ಯನವರ 'ಬಕಾಲ', ಮಹಿಳಾ ಸಾಹಿತ್ಯ ಬರೆದ ಎಂ. ಕೆ. ಇಂದಿರಾ ಅವರ 'ಗೆಜ್ಜೆಪೂಜೆ', 'ತುಂಗಭದ್ರ', ತ್ರಿವೇಣಿಯವರ 'ಬೆಕ್ಕಿನ ಕಣ್ಣು', 'ಮುಚ್ಚಿದ ಬಾಗಿಲು', 'ದೂರದ ಬೆಟ್ಟ', ವೀಣಾ ಶಾಂತೇಶ್ವರ ಅವರ 'ಮುಳ್ಳುಗಳು', 'ಹಸಿವು', 'ಬಿಡುಗಡೆ', ಸಾರಾ ಅಬೂಬಕರ್ ಅವರ 'ಸಹನಾ', 'ವಜ್ರಗಳು' 'ಚಂದ್ರಗಿರಿ ತೀರದಲ್ಲಿ', ಫಕೀರ್ ಮಹಮದ್ ಕಟ್ಪಾಡಿಯವರ 'ಪಚ್ಚ ಕುದುರೆ', 'ಸರಕುಗಳು', ಬಾನು ಮುಷ್ತಾಕ್ ಅವರ 'ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ', ಇತ್ಯಾದಿ ಕತೆ–ಕೃತಿಗಳನ್ನು ಗಮನಿಸಬಹುದು.

ಸಾಮಾಜಿಕ ಸಮಸ್ಯೆಗಳಿಗೆ ಲೇಖಕ ಅಥವಾ ಸಾಹಿತಿಯಾದವನು ಹತ್ತಿರದಿಂದ ಸ್ಪಂದಿಸಿದಾಗ ಓದುವ ಸಹೃದಯನಿಗೆ ಹಿಂದೆ ಇಂತಹಾ ಸಮಸ್ಯೆ ಒಂದಿತ್ತು, ಇನ್ನೊಮ್ಮೆ ಇಂತಹಾ ಸಮಸ್ಯೆಯನ್ನು ಬರಲು ಬಿಡಬಾರದು ಎನ್ನುವ ಅರಿವು ಮೂಡಲು ಸಾಧ್ಯ.

ವೈದೇಹಿಯವರ ಸಾಹಿತ್ಯವು ಮಾನವ ಬದುಕಿನ ವಾಸ್ತವಿಕ ಚಿತ್ರಣವನ್ನು ನೀಡುತ್ತದೆ. ಅವರ ಕೆಲವು ಕತೆಗಳು ನಿಗೂಢ ಅರ್ಥವನ್ನು ಹೊಂದಿದ್ದರೂ ಹಲವು ಕತೆಗಳು ಸರಳವಾಗಿ ಬರೆದವುಗಳಾಗಿವೆ. ಅಲ್ಲದೇ ಅವರು ಬರೆದ ಬಹುತೇಕ ಕತೆಗಳು ಸತ್ಯಘಟನೆಗಳೇ. ಅವರೇ ಇತ್ತೀಚೆಗೆ ಪ್ರಸಾರವಾದ ಒಂದು ರೇಡಿಯೋ ಸಂದರ್ಶನದಲ್ಲಿ ಹೇಳಿದಂತೆ ತಮ್ಮ ಬಾಲ್ಯಕಾಲದಲ್ಲಿ ಅಕ್ಕು ಮುಂತಾದ ಪಾತ್ರಗಳನ್ನು ಕಂಡು ಒಡನಾಡಿಗಳು

ಹಾಸ್ಯಮಾಡಿ ನಗುತ್ತಿರುತ್ತಾರೆ. ಆಗ ಏನೂ ಅನಿಸದಿದ್ದುದು ಬೆಳೆಯುತ್ತಾ ಸಾಗಿದಂತೆ ಅವರೇಕೆ ಹಾಗಾದರು? ಅದಕ್ಕಾರು ಕಾರಣ? ಎಂಬ ಆಲೋಚನೆ ಮೂಡಿತು ಎನ್ನುತ್ತಾರೆ.

ಐವತ್ತು ವರ್ಷಗಳ ಹಿಂದೆ ತಾನು ನೋಡಿ, ಕೇಳಿ ತಿಳಿದ ಜೀವನ ಚಿತ್ರಗಳನ್ನು, ಪಿತೃಪ್ರಧಾನ ಸಂಸ್ಕೃತಿಯ ದಬ್ಬಾಳಿಕೆಯನ್ನೂ ವೈದೇಹಿಯವರು ಇಂದಿನ ಪೀಳಿಗೆಯವರಿಗೆ ಪರಿಚಯಿಸುತ್ತಾರೆ. ಅವರ 'ಅಕ್ಕು', 'ಅಮ್ಮಚ್ಚಿಯೆಂಬ ನೆನಪು' ಮತ್ತು 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಮೂರೂ ಸಣ್ಣಕತೆಗಳು ಸೇರಿ **'ಅಕ್ಕು' ಎಂಬ ನಾಟಕ** ಹಾಗೂ ಅದೇ ಕತೆಗಳು **'ಅಮ್ಮಚ್ಚಿಯೆಂಬ ನೆನಪು' ಎಂಬ ಸಿನಮಾ** ಆಗಿ 2018ರ ನವೆಂಬರ್ 1 ರಂದು ಕುಂದಾಪುರ ಕನ್ನಡದಲ್ಲಿಯೇ ಬಿಡುಗಡೆಯಾಗಿದೆ. ಅದನ್ನು ನೋಡಿದ ಯುವಜನತೆಯಲ್ಲಿ ಒಂದಿಷ್ಟು ಸಾಮಾಜಿಕ ಕಾಳಜಿಯನ್ನು ಮೂಡಿಸುವಲ್ಲಿ ಸಫಲವಾಗಿವೆ.

ವೈದೇಹಿಯವರು ಬರೆದಿರುವ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿಯೂ ನಾವು ಸಾಮಾಜಿಕ ಚಿಂತನೆಯನ್ನು ಗಮನಿಸಬಹುದು. ವೈದೇಹಿಯವರ ಮೇಲೆ ಪಾಶ್ಚಾತ್ಯ ಸಿದ್ಧಾಂತಗಳಾದ ಚಾರಿತ್ರಿಕವಾದ, ಮಾರ್ಕ್ಸ್‌ವಾದ ಮತ್ತು ಸ್ತ್ರೀವಾದಗಳ ಪ್ರಭಾವವಿರುವುದನ್ನು ಅವರ ಸಾಹಿತ್ಯ ಅಧ್ಯಯನ ಮಾಡಿದಾಗ ತಿಳಿಯುತ್ತದೆ. ವೈದೇಹಿಯವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ', 'ಬರೀ ಒಂದು ಪೆಟ್ಟಿಗೆ', 'ತೆರೆಯದ ಪುಟಗಳು', 'ಕ್ರೌಂಚ ಪಕ್ಷಿಗಳು', 'ಅಮುದ ಹೇಳಿದ ಕತೆ', 'ಸ್ಥಳ ಪುರಾಣ', 'ವ್ಯಕ್ತಿ ಪುರಾಣ', 'ಬಾಕಿ ಇತಿಹಾಸ', 'ಧರ್ಮಸೂಕ್ಷ್ಮ ಪುರಾಣ', 'ಆಖ್ಯಾನ ಪ್ರತ್ಯಾಖ್ಯಾನ', 'ಶ್ರಾವಣದ ಅಂಗಳದಲ್ಲಿ ಬಂದಿಳಿದವಳು', 'ಸನಾತನದ ಈ ಮರ' ಇತ್ಯಾದಿಗಳನ್ನು ಚಾರಿತ್ರಿಕ ವಿಮರ್ಶೆಯ ಹಿನ್ನೆಲೆಯಲ್ಲಿ ಗಮನಿಸಬಹುದು. ವೈದೇಹಿಯವರ 'ಓ ಜಗತ್ತೇ', 'ಚಿಕ್ಕನ ಸತ್ಯಾಗ್ರಹ', 'ಹಕ್ಕಿಲ್ಲದವರು', 'ಅಲ್ಲಲ್ಲಿನ ಲೋಕದವರು', 'ಅವಲಂಬಿತರು' ಇತ್ಯಾದಿ ಕತೆಗಳಲ್ಲಿ ಮಾರ್ಕ್ಸ್‌ವಾದದ ಛಾಯೆಗಳನ್ನು ಗಮನಿಸಬಹುದು.

ವೈದೇಹಿಯವರ ಬಹುತೇಕ ಬರಹಗಳು ಸ್ತ್ರೀಪರ ಚಿಂತನೆಗಳನ್ನೇ ಕೇಂದ್ರವಾಗಿ ಹೊಂದಿವೆ. ಕತೆಗಳ ವಸ್ತು–ಪಾತ್ರಗಳನ್ನು ಗಮನಿಸಿದರೆ ವಿಷಯದಲ್ಲಿರುವ ವೈವಿಧ್ಯತೆ ತಿಳಿಯುತ್ತದೆ. ವೈದೇಹಿಯವರ ಸಾಹಿತ್ಯದ ಕೇಂದ್ರದಲ್ಲಿ ಹಲವಾರು ವಯಸ್ಸು ಮತ್ತು ಮನಸ್ಥಿತಿಗಳ ಮಹಿಳೆಯರಿದ್ದಾರೆ. ಪ್ರತಿಯೊಬ್ಬರ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಹಿನ್ನೆಲೆಗಳು ಬೇರೆಯಾಗಿದ್ದರೂ ಅವರುಗಳು ಎದುರಿಸುವ ಮಹಿಳಾ ದೌರ್ಜನ್ಯ, ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಪುರುಷ ಪ್ರಧಾನತೆಯ ದಬ್ಬಾಳಿಕೆ ಇತ್ಯಾದಿ ಸಮಾನ ಸಮಸ್ಯೆಗಳು ಇಲ್ಲಿ ಕಂಡುಬರುತ್ತವೆ.

ಅಧ್ಯಾಯ 4: ವೈದೇಹಿಯವರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಯ ಪ್ರತಿನಿಧೀಕರಣ

ವೈದೇಹಿಯವರು ಶತಮಾನಗಳಿಂದ ಸ್ತ್ರೀಯರಿಗೆ ಆಗುತ್ತಿರುವ ಅನ್ಯಾಯಗಳನ್ನು ಬರಹದ ಮೂಲಕ ಪ್ರತಿಭಟಿಸುತ್ತಾ ಬಂದವರು, ಬಾಲಕಾರ್ಮಿಕತೆ, ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಮಹಿಳೆಗೆ ಅಕ್ಷರದ

ನಿರಾಕರಣೆ, ಅವಳ ಆಸೆಗಳ ದಮನ, ಪುರುಷರ ಕ್ರೌರ್ಯ ಮುಂತಾದ ಸಾಮಾಜಿಕ ಅನಿಷ್ಟಗಳ ಕುರಿತು ತಮ್ಮ ಸಾಹಿತ್ಯದಲ್ಲಿ ಪಾತ್ರಗಳ ಮೂಲಕ ಪ್ರತಿಭಟನೆ ಮಾಡಿದ್ದಾರೆ. ಅವರ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಸಾಮಾಜಿಕ ಚಿಂತನೆಯ ಅಂಶಗಳನ್ನು ಹೀಗೆ ವಿವರಿಸಲಾಗಿದೆ.

ಅಧ್ಯಾಯ 4.1: ವೈದೇಹಿಯವರ ಕಥನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ವೈದೇಹಿಯವರ ಕತೆಗಳಲ್ಲಿ ಅವರು ಸಾಮಾಜಿಕ ಕಾಳಜಿಯನ್ನು ತೋರಿದ್ದಾರೆ. ಸುಮಾರು ನೂರರಷ್ಟಿರುವ ಅವರ ಕತೆಗಳಲ್ಲಿ ಸಾಮಾಜಿಕ ಚಿಂತನೆಯನ್ನು ಪ್ರತಿನಿಧಿಸುವ ಕೆಲವು ಕತೆಗಳನ್ನು ಮಾತ್ರವೇ ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. 'ಮರ ಗಿಡ ಬಳ್ಳಿ', 'ಒಂದು ಅಪರಾಧ ತನಿಖೆ', 'ಒಂದು ಕಳ್ಳ ವೃತ್ತಾಂತ', 'ಬೀಳು–ಬೇರು', 'ಅವಲಂಬಿತರು', 'ಅಂತರಂಗದ ಪುಟಗಳು', 'ಪಯಣ', 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ', 'ಶೋಧ', 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು', 'ಹಗಲು ಗೀಚಿದ ನೆಂಟ', 'ಹಕ್ಕಿಲ್ಲದವರು', 'ಅಲ್ಲಲ್ಲಿನ ಲೋಕದವರು', 'ಸುಮ್ಮನಿರಲಾಗದ್ದು', 'ಬಾಬುಲಿ ತಾಯಿ ಮತ್ತು ನಸೀಬು', 'ಕತ್ತಲೆಯ ಮಾತು', 'ಖಾಲಿಗೋಡೆ', 'ಒಂದು ಬಾಗಿಲ ಸದ್ದು', 'ವಿಲಕ್ಷಣ', 'ಚಿಕ್ಕನ ಸತ್ಯಾಗ್ರಹ', 'ಬರೀ ಒಂದು ಪೆಟ್ಟಿಗೆ', 'ಕಾಣೆಯಾದವರು', 'ಮರೆವು', 'ನಟಿ', 'ಸಬಿತಾ', 'ಕ್ರೌಂಚ ಪಕ್ಷಿಗಳು', 'ಪ್ರಶ್ನೆ', 'ಅವರವರ ಭಾವಕ್ಕೆ', 'ತೆರೆಯದ ಪುಟಗಳು', 'ಸ್ಥಳ ಪುರಾಣ', 'ಅಮುದ ಹೇಳಿದ ಕತೆ', 'ಮಂಜಮ್ಮಜ್ಜಿ ಹೋಯ್ತಂತೆ', 'ವ್ಯಕ್ತಿಪುರಾಣ', 'ಬಾಕಿ ಇತಿಹಾಸ', 'ಆ ರಾತ್ರಿ', 'ಧರ್ಮಸೂಕ್ಷ್ಮ ಪುರಾಣ', 'ಆಖ್ಯಾನ ಪ್ರತ್ಯಾಖ್ಯಾನ' ಮುಂತಾದ ಕತೆಗಳನ್ನು, ವೈದೇಹಿಯವರು ಬರೆದ ಕಾದಂಬರಿ 'ಅಸ್ಪೃಶ್ಯರು', ವೈದೇಹಿಯವರು ಬರೆದ ಪ್ರಬಂಧ ಸಂಕಲನ 'ಮಲ್ಲಿನಾಥನ ಧ್ಯಾನ'. ಅದರೊಂದಿಗೆ ಹೊನ್ನಾರುಮಾಲೆಗಾಗಿ ಪ್ರಕಟಿಸಿದ 'ಮೇಜು ಮತ್ತು ಬಡಗಿ' ಎಂಬ ಪ್ರಬಂಧಗಳ ಸಂಗ್ರಹ, ಬಾಲ್ಯದ ತನ್ನೂರಿನ ಜಾತ್ರೆಗಳ ಸುತ್ತ ಓಡಾಡಿದ ನೆನಪನ್ನು ಹೊತ್ತ 'ಜಾತ್ರೆ' ಎಂಬ ಬಿಡಿ ನೆನಪುಗಳ ಸ್ಮೃತಿಕಥನ, ಮತ್ತು ಪ್ರಜಾವಾಣಿಯಲ್ಲಿ ಎರಡು ವರ್ಷಗಳ ಕಾಲ ಅವರು ಬರೆದ ಅಂಕಣ ಬರಹಗಳ ಸಂಕಲನ 'ಹರಿವ ನೀರು' ಈ ನಾಲ್ಕೂ ಕೃತಿಗಳನ್ನು, ಆತ್ಮಚರಿತ್ರೆ ನಿರೂಪಣೆಗಳಾದ ಕೋ. ಲ. ಕಾರಂತರ 'ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು', ಸೇಡಿಯಾಪು ಕೃಷ್ಣಭಟ್ಟರ 'ಸೇಡಿಯಾಪು ನೆನಪುಗಳು', ಬಿ. ವಿ. ಕಾರಂತರ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ', ಸರಸ್ವತಿಬಾಯಿ ರಾಜವಾಡೆಯವರ 'ಮುಂತಾದ ಕೆಲಪುಟಗಳು' ಗದ್ಯ ಕೃತಿಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ 4.2: ವೈದೇಹಿಯವರ ಕವನಗಳಲ್ಲಿ ಸಾಮಾಜಿಕ ಚಿಂತನೆ

ವೈದೇಹಿಯವರು 'ಬಿಂದುಬಿಂದಿಗೆ'(1990), 'ಪಾರಿಜಾತ'(1999), 'ಹೂವ ಕಟ್ಟುವ ಕಾಯಕ'(2011) ಮತ್ತು 'ದೀಪದೊಳಗಿನ ದೀಪ' (2020) ಎಂಬ ನಾಲ್ಕು ಕವನಸಂಕಲನಗಳನ್ನು ಬರೆದಿದ್ದು, ಇದರಲ್ಲಿ 'ಬೆರಣಿ ತಟ್ಟುವ ಹುಡುಗಿ ಮತ್ತು ಚಂದ್ರಾಮ ದೇವರು', 'ಅಡುಗೆ ಮನೆಯ ಹುಡುಗಿ', 'ಶಿವನ ಮೀಸುವ ಹಾಡು', 'ಮಾಡು ಹೊದೆಸುವ ಹಾಡು', 'ಮಗು ಮತ್ತು ಈಶ್ವರ ಲಿಂಗ', 'ಕೊರಗಿದಳು ಕೊಡಗೂಸು', 'ಮಗಳಿಗೆ', 'ಹೂವ

ಕಟ್ಟುವ ಕಾಯಕ', 'ಮೊಮ್ಮಗುವಿಗೆ', 'ನವಿಲು', 'ಬಯಲ ಬೆಡಗು', 'ತಂಗಿ ಪದಗಳು', 'ಮಿಂಚು ಓಡಿದ ಸುದ್ದಿ', 'ಸಂಸಾರಿ ಪದ', 'ಬುದ್ಧನ ಕಿವಿ ಎಷ್ಟು ಉದ್ದ?', 'ಯಾರೇ ಈ ಪ್ರಬುದ್ಧ ದೇವ?' ಇತ್ಯಾದಿ ಕವನಗಳ ಮೂಲಕ ಪ್ರಕಟವಾದ ಸಾಮಾಜಿಕ ಚಿಂತನೆಗಳ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ 4.3: ವೈದೇಹಿಯವರ ಮಕ್ಕಳ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ವೈದೇಹಿಯವರು ಮಕ್ಕಳಿಗಾಗಿ ಆಂಗ್ಲ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕವನ್ನು ರೂಪಾಂತರಿಸಿ 'ಧಾಂ ಧೂಂ ಸುಂಟರಗಾಳಿ' ಎಂದೂ, ಮ್ಯಾಕ್ ಬೆತ್ ನಾಟಕವನ್ನು 'ಗೊಂಬೆ ಮ್ಯಾಕ್‌ಬೆತ್' ಎಂದು ರೂಪಾಂತರಿಸಿದ್ದಾರೆ. ಇದರೊಂದಿಗೆ 'ಮೂಕನ ಮಕ್ಕಳು', 'ಢಣಾ ಡಂಗುರ', 'ನಾಯಿಮರಿ ನಾಟಕ', 'ಸೂರ್ಯ ಬಂದ', 'ಜುಂ ಜಾಂ ಆನೆ ಮತ್ತು ಪುಟ್ಟ', 'ಕೋಟು ಗುಮ್ಮ', 'ಹಕ್ಕಿ ಹಾಡು'. 'ಅರ್ಧಚಂದ್ರ ಮಿಠಾಯಿ', 'ಅಳಿಲು ರಾಮಾಯಣ', 'ಸತ್ರು ಅಂದ್ರೆ ಸಾಯ್ತಾರ?', 'ಸೋಮಾರಿ ಓಳ್ಯಾ' ಇತ್ಯಾದಿ ಹದಿನೇಳು ನಾಟಕಗಳನ್ನು ರಚಿಸಿದ್ದಾರೆ. ಹಾಗೂ 'ಅಬ್ಬಾಲಕ್ಕ ಅಜ್ಜಿಮನೆಗೆ ಹೋಗಿದ್ದು' ಎಂಬ ಕಥಾ ಸಂಕಲನವನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಇವುಗಳಲ್ಲಿ ಸಾಮಾಜಿಕ ಚಿಂತನೆಯನ್ನು ಹೇಳುವ ಮೂಲಕ ನಾಳಿನ ಪ್ರಜೆಗಳಾದ ಮಕ್ಕಳ ಮನಸ್ಸನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ವೈದೇಹಿ ಮಾಡಿದ್ದಾರೆ.

ಸಮಾಜಶಾಸ್ತ್ರೀಯ ಚಿಂತನೆ ಮತ್ತು ಆಧುನಿಕ ಪಾಶ್ಚಾತ್ಯ ವಿಮರ್ಶಾ ಪ್ರಸ್ಥಾನಗಳ ಹಿನ್ನೆಲೆಯಲ್ಲಿ ಈ ಎಲ್ಲಾ ಕೃತಿಗಳಲ್ಲಿನ ಸಾಮಾಜಿಕ ಚಿಂತನೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ 5: ವೈದೇಹಿಯವರ ಸಾಹಿತ್ಯದ ವೈಶಿಷ್ಟ್ಯತೆ

ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ ವೈದೇಹಿಯವರ ಬರಹವು ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

- ವೈದೇಹಿಯವರ ಸಾಹಿತ್ಯದಲ್ಲಿ ಗದ್ಯವಿರಲಿ ಪದ್ಯವಿರಲಿ ಬರಹದಲ್ಲಿ **ಕಾವ್ಯಾತ್ಮಕ ಶೈಲಿ**ಯಿರುತ್ತದೆ ಎಂಬುದನ್ನು ಅವರ ಬರಹದ ಸಾಲುಗಳ ಉದಾಹರಣೆಯೊಂದಿಗೆ ವಿವರಿಸಲಾಗಿದೆ.
- ವೈದೇಹಿಯವರ ಬರಹಗಳ **ಭಾಷೆ** ಗ್ರಾಂಥಿಕ ಕನ್ನಡವಾದರೂ ಅನೇಕ ವಾಸ್ತವಿಕ ಕತೆಗಳನ್ನು ಅವರು ಮೂರು ಬಗೆಯ ಕುಂದಾಪುರ ಕನ್ನಡ ಪ್ರಭೇದಗಳ **ಸಂಭಾಷಣೆಗಳನ್ನು** ಬಳಸಿ ಬರೆದಿರುವುದನ್ನು ಗುರುತಿಸಿ, ಉದಾಹರಣೆಗಳೊಂದಿಗೆ ವಿವರಿಸಲಾಗಿದೆ.
- ಕತೆಗಳಲ್ಲಿ ಪ್ರಸಿದ್ಧರಾದರೂ ವೈದೇಹಿಯವರು ಅದೊಂದೇ ಪ್ರಕಾರಕ್ಕೆ ಸೀಮಿತರಾಗಲಿಲ್ಲ. ಕತೆ, ಕಾದಂಬರಿ, ಕವನ, ಸ್ಮೃತಿ ಕಥನ, ಅಂಕಣ ಬರಹ, ಪ್ರಬಂಧ, ಮಕ್ಕಳ ನಾಟಕಗಳು, ಮಕ್ಕಳ ಕಥಾ ಸಂಕಲನ, ವೈಚಾರಿಕ ಬರಹ, ಅನುವಾದಗಳು, ಆತ್ಮಕಥಾ ನಿರೂಪಣೆಗಳು ಇತ್ಯಾದಿ ಹಲವು

ವೈವಿಧ್ಯಮಯ ಪ್ರಕಾರಗಳಲ್ಲಿ ಸಾಹಿತ್ಯ ಬರೆದವರು ವೈದೇಹಿ ಎಂಬುದನ್ನು ತಿಳಿಸುತ್ತಾ ಪ್ರತೀ ಪ್ರಕಾರದಲ್ಲೂ ತಮ್ಮದೇ ಆದ ವಿಶಿಷ್ಟ ಛಾಪನ್ನು ಅವರು ಹೇಗೆ ಮೂಡಿಸಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

- ವೈದೇಹಿಯವರು ಪಾಶ್ಚಾತ್ಯ ಸ್ತ್ರೀವಾದ ಮತ್ತು ಅದರ ಆಧಾರದ ಮೇಲೆ ನಿರೂಪಿತವಾದ ಭಾರತೀಯ ಸ್ತ್ರೀವಾದಗಳಿಗಿಂತ ಭಿನ್ನವಾದ **ತಮ್ಮದೇ ಸ್ತ್ರೀವಾದಿ ಪರಿಕಲ್ಪನೆ**ಯನ್ನು ಹೊಂದಿರುವುದನ್ನು ಗಮನಿಸಿ, ಅವರ ಸ್ತ್ರೀವಾದಿ ಕಲ್ಪನೆಯ ವಿವರವನ್ನು ಅವರೇ ಬರೆದ 'ನಮ್ಮ ಲೋಕದ ಗೀತೆ' ಪ್ರಬಂಧದಿಂದ ನೀಡಲಾಗಿದೆ.
- ಸಮಾಜವನ್ನು ಹಲವು ಕೋಣೆಗಳ ಮನೆಯಂತೆ ನೋಡುವ ವೈದೇಹಿಯವರ **ಸಾಮಾಜಿಕ ಕಾಳಜಿ**ಯು ಅವರ ಕೃತಿಗಳ ಉದ್ದಕ್ಕೂ ಕಂಡುಬರುತ್ತದೆ. ಕತೆಯಿರಲಿ, ಕವನವಿರಲಿ, ಎಲ್ಲಾ ಪ್ರಕಾರಗಳಲ್ಲೂ ಅವರು ಹೆಣ್ಣುಮಕ್ಕಳ ಕುರಿತೇ ಚಿಂತಿಸುತ್ತಾರೆ. ಹೆಣ್ಣುಮಕ್ಕಳ ಜೀವನದಲ್ಲಿ ಇಷ್ಟೆಲ್ಲ ತೊಂದರೆಗಲನ್ನು ಉಂಟುಮಾಡುವವರು ಯಾರು ಮತ್ತು ಅದರಿಂದಾಗುವ ಪರಿಣಾಮಗಳೇನು? ಹೆಣ್ಣುಮಕ್ಕಳು ಪ್ರತಿಭಟನೆಯನ್ನು ಹೇಗೆ ತೋರುತ್ತಾರೆ, ಬಾಲ ಕಾರ್ಮಿಕತೆ, ಬಡತನ, ನಿರುದ್ಯೋಗ ಇತ್ಯಾದಿ ಸಮಸ್ಯೆಗಳ ಕುರಿತೂ ವೈದೇಹಿಯವರ ಬರಹಗಳು ತಿಳಿಸುತ್ತವೆ ಎಂಬುದನ್ನು ವಿವರಿಸಲಾಗಿದೆ.
- ಜಾನಪದ ಕಲಾವಿದರು, ರಂಗನಟರು, ನಿರ್ದೇಶಕರು, ಸಾಹಿತಿಗಳ ಪತ್ನಿಯರು, ಶಿಕ್ಷಕರು, ಶಿಕ್ಷಣ ತಜ್ಞರು ಸ್ವಾತಂತ್ರ್ಯ ಹೋರಾಟಗಾರರ ಸಂದರ್ಶನಗಳನ್ನು ಮತ್ತು ಲೇಖನಗಳನ್ನು ಬರೆದಿರುವ ವೈದೇಹಿ, ಸಮಾಜದ ಸ್ಥಿತಿಗತಿ, ಕನ್ನಡದ ಉಳಿವು ಅಳಿವು, ಕನ್ನಡದ ಮೇಲೆ ಇಂಗ್ಲೀಷ್ ಭಾಷೆ ಅಧಿಪತ್ಯ ಸಾಧಿಸುತ್ತಿರುವುದು, ಕವಿಗಳು, ಸಾಹಿತಿಗಳು, ಕೃಷಿಕರ ಕಷ್ಟಗಳು, ವಿಶೇಷ ಆರ್ಥಿಕ ವಲಯದಿಂದ ಜನಸಾಮಾನ್ಯರಿಗಾಗುತ್ತಿರುವ ತೊಂದರೆಗಳು ಇವುಗಳನ್ನು ಕುರಿತ **ವೈಚಾರಿಕ ಬರಹಗಳನ್ನು** ಬರೆದಿದ್ದಾರೆ.
- ವೈದೇಹಿಯವರು ಆಂಗ್ಲ ಭಾಷೆಯಿಂದ ಕೆಲವು ನಾಟಕಗಳನ್ನು ಮತ್ತು ಕೃತಿಗಳನ್ನು **ಅನುವಾದ** ಮಾಡಿರುವುದನ್ನು ಗಮನಿಸಲಾಗಿದೆ. ಭಾಸ್ಕರ ಚಂದಾವರ್ಕರ್ ಅವರು ಹಿಂದಿಯಲ್ಲಿ ಮಾಡಿದ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ರೀತಿಯ ಪ್ರಯತ್ನವನ್ನು ಭಾರತದಲ್ಲಿ ಇವರೇ ಮೊದಲು ಮಾಡಿದ್ದು ಎಂಬುದನ್ನು ಜೋಗಿಯವರು ಗುರುತಿಸುತ್ತಾರೆ. ಅಲ್ಲದೆ ಕನ್ನಡ ಸಾಹಿತ್ಯದ ಪ್ರೇರಣೆಯಿಂದಲೂ ಕಥನ ಕವನಗಳನ್ನು, ಕತೆಗಳನ್ನು ಮಕ್ಕಳ ನಾಟಕಗಳಾಗಿ ದೇಸೀ ನೆಲೆಯಲ್ಲಿ ವೈದೇಹಿ ಅವರು **ರೂಪಾಂತರಿಸಿ**ರುವುದನ್ನು ಗುರುತಿಸಲಾಗಿದೆ.

- ಆಧುನಿಕ ಕನ್ನಡದ ಸಾಹಿತಿಯಾದ ಸರಸ್ವತಿಬಾಯಿ ರಾಜವಾಡೆ, ಜನಪ್ರಿಯ ವಿಜ್ಞಾನ ಶಿಕ್ಷಕರಾದ ಪರಿಸರಪ್ರೇಮಿ ಕೋ. ಲ. ಕಾರಂತರು, ರಂಗ ನಿರ್ದೇಶಕ ಮತ್ತು ನಟರಾದ ಬಿ. ವಿ. ಕಾರಂತರು ಹಾಗೂ ವ್ಯಾಕರಣ, ಛಂದಸ್ಸುಗಳ ತಜ್ಞರು, ಸಾಹಿತಿಯೂ ಆದ ಸೇಡಿಯಾಪು ಕೃಷ್ಣಭಟ್ಟರು ಈ ನಾಲ್ವರು ತೆರೆಮರೆಯ ಸಾಧಕರನ್ನು ಸಂದರ್ಶಿಸಿ ವೈದೇಹಿಯವರು ಅವರ **ಆತ್ಮಕತೆಗಳನ್ನು ನಿರೂಪಿಸಿದ್ದಾರೆ**. ಅಪಾರ ಸಮಯವನ್ನು ವ್ಯಯಿಸಿ, ಪರಿಶ್ರಮದಿಂದ ಬರೆದ ಈ ಕೃತಿಗಳಲ್ಲಿ ಸಮಾಜಕ್ಕೆ ತಿಳಿಯಲೇಬೇಕಾದ ಹಲವು ಹೊಸ ವಿಷಯಗಳಿವೆ.
- ವೈದೇಹಿಯವರ ಕೆಲವು ಕತೆಗಳಲ್ಲಿ ಹೆಣ್ಣಿಗೆ ಹೆಣ್ಣೇ ಆಸರೆಯಾಗುವ **ಸಹೋದರತ್ವದ ಗುಣ** ಕಂಡುಬರುತ್ತದೆ. ಇದನ್ನೇ ತೆಲುಗಿನ ಖ್ಯಾತ ಲೇಖಕರಾದ ಓಲ್ಗಾ ಅವರ ಕತೆಗಳಲ್ಲೂ ಗಮನಿಸಬಹುದು.
- ವೈದೇಹಿಯವರ ಹಲವು ಬರಹಗಳು ಎಂದೋ ಬರೆದಿದ್ದಾದರೂ ಇಂದಿನ ಕಾಲಕ್ಕೂ ಅವು **ಪ್ರಸ್ತುತವಾಗುತ್ತವೆ.** ಮುಖ್ಯವಾಗಿ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಂತೆ ಕಾಣುವ, ಪುರುಷನು ಅವಳ ಮೇಲೆ ಅಧಿಕಾರ ಸ್ಥಾಪಿಸಲು ಯತ್ನಿಸುವುದನ್ನು, ಮಕ್ಕಳೆಲ್ಲ ಓದಿ, ಉದ್ಯೋಗಕ್ಕಾಗಿ ಪಟ್ಟಣ ಸೇರಿ, ಹಳ್ಳಿಗಳಲ್ಲಿ ಹೊಲ ನೋಡಿಕೊಳ್ಳುವವರು ಇಲ್ಲವೆಂದು ಅಥವಾ ಮಕ್ಕಳೊಂದಿಗೆ ಬದುಕಬೇಕು ಎಂಬ ಆಸೆಯಿಂದ ಹೊಲ-ಗದ್ದೆ-ತೋಟಗಳನ್ನು ಮಾರಿ, ಪಟ್ಟಣ ಸೇರುವ ರೈತರನ್ನು ನಾವು ಇಂದಿಗೂ ಗಮನಿಸುತ್ತೇವೆ.
- ವೈದೇಹಿಯವರ ಬರಹಗಳ ಇನ್ನೊಂದು ಬಹುಮುಖ್ಯ ಅಂಶ **ಹಾಸ್ಯ.** ಪಾತ್ರಕ್ಕೆ, ಸನ್ನಿವೇಶಕ್ಕೆ ತಕ್ಕಂತೆ ಹಾಸ್ಯಮಯ ಸಂಭಾಷಣೆಗಳನ್ನೋ, ಘಟನೆಗಳನ್ನೋ ವೈದೇಹಿಯವರು ತರುತ್ತಾರೆ. ಇದಕ್ಕೆ ಉದಾಹರಣೆಯಾಗಿ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಮಕ್ಕಳು ರಾಮಾಯಣದ ಪ್ರಸಂಗವೊಂದನ್ನು ನಾಟಕವಾಡುವ ಸನ್ನಿವೇಶ, 'ಶ್ರಾವಣದ ಅಂಗಳದಲ್ಲಿ ಬಂದಿಳಿದವಳು', 'ಸನಾತನದ ಈ ಮರ', 'ಜಾತ್ರೆ' ಸಂಕಲನದ ಕೆಲವು ಅಧ್ಯಾಯಗಳು, 'ಅಮ್ಮಚ್ಚಿಯೆಂಬ ನೆನಪು', 'ವಾಣಿಮಾಯಿ', ಇತ್ಯಾದಿ ಕತೆಗಳಲ್ಲಿನ ಹಾಸ್ಯಮಯ ಘಟನೆಗಳನ್ನು ಗಮನಿಸಬಹುದು.

ಉಪಸಂಹಾರದಲ್ಲಿ ಈ ಮಹಾಪ್ರಬಂಧದ ಅಧ್ಯಯನ ಕ್ರಮವನ್ನು, ಅಧ್ಯಯಗಳ ವಿಂಗಡನೆಯನ್ನು ತಿಳಿಸಲಾಗಿದೆ. ಪ್ರಸ್ತುತ ಸಂಶೋಧನಾ ಮಹಾಪ್ರಬಂಧವನ್ನು ಮುಖ್ಯನೆಲೆಯಲ್ಲಿ ವೈದೇಹಿಯವರ ಸಾಹಿತ್ಯವನ್ನು ಪ್ರಾದೇಶಿಕ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಗಳೆಂಬ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದಾಗ ಕಂಡುಕೊಂಡ **ಫಲಿತಗಳು** ಹೀಗಿವೆ:

- ಸ್ತ್ರೀಪಾತ್ರಗಳು ವೈದೇಹಿಯವರ ಬರಹದ ಕೇಂದ್ರಗಳು.

- ಅವರ ಬರಹಗಳಲ್ಲಿ ಕಾವ್ಯಾತ್ಮಕ ಗುಣವಿದೆ.
- ವಾಸ್ತವ ಕತೆಗಳನ್ನು ಮೂರು ಬಗೆಯ ಕುಂದಾಪುರ ಕನ್ನಡ ಶೈಲಿಗಳನ್ನು ಸಂಭಾಷಣೆಯಲ್ಲಿ ಬಳಸಿ ವೈದೇಹಿ ಬರೆದಿದ್ದಾರೆ.
- ಅವರ ಸಾಹಿತ್ಯದಲ್ಲಿ ಕೆಲವು ಸ್ಥಳೀಯ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳ ವಿವರಗಳಿವೆ.
- ವೈದೇಹಿಯವರ ಸಾಹಿತ್ಯದಲ್ಲಿ ಬ್ರಾಹ್ಮಣ ಸಮುದಾಯದ ಕೌಟುಂಬಿಕ ಚಿತ್ರಣ ಹೆಚ್ಚಾಗಿದೆ. ಅರ್ಧ-ಕಾಲು ಶತಮಾನದ ಹಿಂದಿನ ಬ್ರಾಹ್ಮಣ ಕುಟುಂಬದ ಮಹಿಳೆಯರ ಸ್ಥಿತಿಗತಿಗಳು, ಪಿತೃಪ್ರಧಾನತೆಯ ದರ್ಪದ ವಸ್ತುವನ್ನೊಳಗೊಂಡ ಅವರ ಕತೆಗಳು ವಾಸ್ತವ ಸತ್ಯಗಳಾಗಿವೆ.
- ಬ್ರಾಹ್ಮಣ ವಿಧವೆಯರ ಜೀವನದ ಕಷ್ಟಗಳನ್ನು ವೈದೇಹಿಯವರು ತಿಳಿಸುವ ಯತ್ನ ಮಾಡಿದ್ದಾರೆ.
- ಬ್ರಾಹ್ಮಣರ ಮನೆಯಲ್ಲಿ ಗಂಡಿಗಿರುವಷ್ಟು ಸ್ವಾತಂತ್ರ್ಯ ಹೆಣ್ಣಿಗಿಲ್ಲದ್ದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ ವೈದೇಹಿ.
- ತಾವು ಬರೆದ ಏಕೈಕ ಕಾದಂಬರಿಯಲ್ಲಿ ಬ್ರಾಹ್ಮಣ ಕುಟುಂಬವೊಂದರಲ್ಲಾಗುವ ಸ್ಥಿತ್ಯಂತರಗಳನ್ನು ಚರ್ಚಿಸಿದ್ದಾರೆ. ರೂಢಿಗತ ಸಂಪ್ರದಾಯಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿದ್ದನ್ನೂ ತಿಳಿಸಿದ್ದಾರೆ.
- ಜಾತಿಗಳ ವರ್ಗೀಕರಣವನ್ನು ಮೇಲು-ಕೀಳೆಂದು ವಿಂಗಡಿಸಿರುವುದನ್ನು ತಮ್ಮ ಸಾಹಿತ್ಯದಲ್ಲಿ ತೋರಿ, ಅದನ್ನು ವಿರೋಧಿಸಬೇಕೆನ್ನುತ್ತಾರೆ.
- ಕೆಲವು ಅನಿಷ್ಟ ಸಾಮಾಜಿಕ ಪದ್ಧತಿಗಳ ಮೂಲಕ ಕೆಳವರ್ಗದವರ ಶೋಷಣೆ ನಡೆಯುತ್ತಿದ್ದುದನ್ನು ಇವರ ಸಾಹಿತ್ಯ ಗುರುತಿಸುತ್ತದೆ. (ಉದಾ: ನರಪಟೆ, ತೋಟಿ, ಅತಿಮಡಿ.)
- ಸಾಮಾಜಿಕ ಸಮಸ್ಯೆಗಳು ಮತ್ತು ಮಹಿಳೆಯರ ಮೇಲೆ ಅವುಗಳಿಂದಾಗುವ ಪರಿಣಾಮವನ್ನು ವೈದೇಹಿಯವರ ಸಾಹಿತ್ಯ ತಿಳಿಸುತ್ತದೆ. ಸ್ತ್ರೀಯರ ಆಸೆ-ಹಕ್ಕುಗಳನ್ನು ಪುರುಷಪ್ರಧಾನತೆಯು ಹತ್ತಿಕ್ಕುವ ಬಗೆಗಳನ್ನು ಇವರ ಸಾಹಿತ್ಯ ತಿಳಿಸುತ್ತದೆ.
- ವೈದೇಹಿಯವರು ಸಾಹಿತ್ಯ ವಿಮರ್ಶೆಯ ಯಾವುದೇ ವರ್ಗಕ್ಕೆ ಸೇರುವ ಸಮಸ್ಯೆಗಳನ್ನು ಸ್ತ್ರೀಪರ ದೃಷ್ಟಿಕೋನದಲ್ಲೇ ನೋಡುತ್ತಾರೆ.
- ವೈದೇಹಿಯವರು ಅನೇಕ ನೀತಿಯುತ ಸ್ವತಂತ್ರ ಮತ್ತು ರೂಪಾಂತರಗಳ ಮೂಲಕ ಮಕ್ಕಳ ನಾಟಕಗಳನ್ನು ಹಾಗೂ ರಮ್ಯಾದ್ಭುತ ಕಲ್ಪನೆಗಳನ್ನು ಹೊಂದಿದ ಮಕ್ಕಳ ಕತೆಗಳನ್ನು ಬರೆದಿರುತ್ತಾರೆ.
- ವಿಭಿನ್ನ ರಂಗಗಳಲ್ಲಿ ತೆರೆಮರೆಯಲ್ಲಿ ಕೆಲಸ ಮಾಡಿದ ನಾಲ್ವರು ಸಾಧಕರ ಆತ್ಮಕಥೆಗಳನ್ನು ವೈದೇಹಿ

ನಿರೂಪಣೆ ಮಾಡಿದ್ದಾರೆ.

- ಆಧುನಿಕ ಕಾಲದ ಸ್ತ್ರೀಪರ ಕಾಳಜಿಯ ಮೂಲಕ ಪೌರಾಣಿಕ ಸ್ತ್ರೀಪಾತ್ರಗಳನ್ನು ವೈದೇಹಿ ಗಮನಿಸುತ್ತಾರೆ.
- ಚಿಕ್ಕ ವಾಕ್ಯಗಳು, ಸರಳ ಭಾಷೆ ವೈದೇಹಿಯವರ ಬರಹದ ಶೈಲಿಯಾಗಿದೆ.

ಮುಂದಿನ ಅಧ್ಯಯನದ ಸಾಧ್ಯತೆಗಳು:

- 'ವೈದೇಹಿಯವರ ಸಾಹಿತ್ಯದಲ್ಲಿ ಸಂಸ್ಕೃತಿ' ಎಂಬ ವಿಷಯದ ಕುರಿತು ಸಂಶೋಧನೆ ಮಾಡಬಹುದು.
- 'ವೈದೇಹಿಯವರ ಸಾಹಿತ್ಯದಲ್ಲಿ ವೈಚಾರಿಕತೆ' ಎಂಬ ವಿಷಯದ ಕುರಿತು ಸಂಶೋಧನೆ ನಡೆಸಬಹುದು.
- 'ವೈದೇಹಿಯವರ ಸಾಹಿತ್ಯದಲ್ಲಿ ಹಾಸ್ಯದ ಪರಿಕಲ್ಪನೆ'ಯ ಕುರಿತು ಅಧ್ಯಯನ ಮಾಡಬಹುದು.
- ಸಾಮಾಜಿಕ ಚಿಂತನೆಯ ಹಿನ್ನೆಲೆಯಲ್ಲಿ ಬೇರೆ ಭಾಷೆಗಳ ಕಥಾ ಸಾಹಿತ್ಯದೊಂದಿಗೆ ವೈದೇಹಿಯವರ ಕತೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದು.
- ಜಗತ್ತಿನ ಸ್ತ್ರೀವಾದಿ ಸಾಹಿತ್ಯದೊಂದಿಗೆ ವೈದೇಹಿಯವರ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದು.
- ಸಬಾಲ್ಟರ್ನ್ ಅಧ್ಯಯನದ ಹಿನ್ನೆಲೆಯಲ್ಲಿ ಬ್ರಾಹ್ಮಣ ಹೆಣ್ಣುಮಕ್ಕಳು ಎದುರಿಸುವ ಕೌಟುಂಬಿಕ ದೌರ್ಜನ್ಯವನ್ನು ವೈದೇಹಿಯವರ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು.
- ವೈದೇಹಿಯವರ ಸಾಹಿತ್ಯದಲ್ಲಿ ಕಾವ್ಯಗುಣ, ಪ್ರತಿಭಟನೆ, ಪುರುಷ ಪ್ರಧಾನತೆ, ವಿಧವೆಯರು, ಬಡತನ ಇತ್ಯಾದಿ ಪರಿಕಲ್ಪನೆಗಳನ್ನು ಆಧರಿಸಿ ಸಂಶೋಧನಾ ಅಧ್ಯಯನ ನಡೆಸಬಹುದು.

ಅನುಬಂಧ

ಮೂಲ ಪಠ್ಯಗಳು

1. ವೈದೇಹಿ, 1979, ಮರ ಗಿಡ ಬಳ್ಳಿ, ಅಕ್ಷರ ಪ್ರಕಾಶನ, ಹೆಗ್ಗೋಡು
2. ವೈದೇಹಿ, 1984, ಅಂತರಂಗದ ಪುಟಗಳು, ಅಕ್ಷರ ಪ್ರಕಾಶನ, ಹೆಗ್ಗೋಡು
3. ವೈದೇಹಿ, 1986, ಗೋಲ, ಅಕ್ಷರ ಪ್ರಕಾಶನ, ಹೆಗ್ಗೋಡು
4. ವೈದೇಹಿ, 1991, ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು
5. ವೈದೇಹಿ, 2000, ಅಮ್ಮಚ್ಚಿಯೆಂಬ ನೆನಪು, ಅಕ್ಷರ ಪ್ರಕಾಶನ, ಹೆಗ್ಗೋಡು
6. ವೈದೇಹಿ, 2005, ಕ್ರೌಂಚ ಪಕ್ಷಿಗಳು, ಅಕ್ಷರ ಪ್ರಕಾಶನ, ಹೆಗ್ಗೋಡು
7. ವೈದೇಹಿ, 2016, ಕತೆ ಕತೆ ಕಾರಣ, ಅಕ್ಷರ ಪ್ರಕಾಶನ, ಹೆಗ್ಗೋಡು
8. ವೈದೇಹಿ, 2020, ಸಲ್ಮಾ ಮತ್ತು ಸುರಭಿ, ಅಕ್ಷರ ಪ್ರಕಾಶನ, ಹೆಗ್ಗೋಡು
9. ವೈದೇಹಿ, 1992, ಅಸ್ಪೃಶ್ಯರು, ಅಕ್ಷರ ಪ್ರಕಾಶನ, ಹೆಗ್ಗೋಡು
10. ವೈದೇಹಿ, 1990, ಬಿಂದು ಬಿಂದಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು
11. ವೈದೇಹಿ, 1999, ಪಾರಿಜಾತ, ಕ್ರೈಸ್ಟ್ ಕನ್ನಡ ಸಂಘ, ಬೆಂಗಳೂರು
12. ವೈದೇಹಿ, 2011, ಹೂವ ಕಟ್ಟುವ ಕಾಯಕ, ಕ್ರೈಸ್ಟ್ ಕನ್ನಡ ಸಂಘ, ಬೆಂಗಳೂರು.
13. ವೈದೇಹಿ, 2020, ದೀಪದೊಳಗಿನ ದಿಪ, ವಿಕಾಸ ಪ್ರಕಾಶನ, ಬೆಂಗಳೂರು.
14. ವೈದೇಹಿ, 1996, ಮಲ್ಲಿನಾಥನ ಧ್ಯಾನ, ಎರ.ಮು. 2012, ವಸಂತ ಪ್ರಕಾಶನ, ಬೆಂಗಳೂರು.
15. ವೈದೇಹಿ, 2007, ಮೇಜು ಮತ್ತು ಬಡಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
16. ವೈದೇಹಿ, 1998, ಜಾತ್ರೆ, ಅಕ್ಷರ ಪ್ರಕಾಶನ, ಹೆಗ್ಗೋಡು.
17. ವೈದೇಹಿ, 2012, ಹರಿವ ನೀರು, ಅಕ್ಷರ ಪ್ರಕಾಶನ, ಹೆಗ್ಗೋಡು.
18. ವೈದೇಹಿ, 1992, ಧಾಂ ಧೂಂ ಸುಂಟರಗಾಳಿ, ಅಕ್ಷರ ಪ್ರಕಾಶನ, ಹೆಗ್ಗೋಡು.
19. ವೈದೇಹಿ, 1992, ಮೂಕನ ಮಕ್ಕಳು, ಅಕ್ಷರ ಪ್ರಕಾಶನ, ಹೆಗ್ಗೋಡು.
20. ವೈದೇಹಿ, 1992, ಗೊಂಬೆ ಮ್ಯಾಕ್‌ಬೆತ್, ಅಕ್ಷರ ಪ್ರಕಾಶನ, ಹೆಗ್ಗೋಡು.
21. ವೈದೇಹಿ, 1992, ಢಣಾ ಢಂಗುರ, ಅಕ್ಷರ ಪ್ರಕಾಶನ, ಹೆಗ್ಗೋಡು.
22. ವೈದೇಹಿ, 1992, ನಾಯಿಮರಿ ನಾಟಕ, ಅಕ್ಷರ ಪ್ರಕಾಶನ, ಹೆಗ್ಗೋಡು.
23. ವೈದೇಹಿ, 1997, ಸೂರ್ಯ ಬಂದ, ಅಕ್ಷರ ಪ್ರಕಾಶನ, ಹೆಗ್ಗೋಡು.
24. ವೈದೇಹಿ, 1997, ಜುಂ ಜಾಂ ಆನೆ ಮತ್ತು ಪುಟ್ಟ, ಅಕ್ಷರ ಪ್ರಕಾಶನ, ಹೆಗ್ಗೋಡು.

25. ವೈದೇಹಿ, 1997, ಕೋಟುಗುಮ್ಮ, ಅಕ್ಷರ ಪ್ರಕಾಶನ, ಹೆಗ್ಗೋಡು.

26. ವೈದೇಹಿ, 2002, ಹಕ್ಕಿ ಹಾಡು, ಅಕ್ಷರ ಪ್ರಕಾಶನ, ಹೆಗ್ಗೋಡು.

27. ವೈದೇಹಿ, 2002, ಅರ್ಧಚಂದ್ರ ಮಿಠಾಯಿ, ಅಕ್ಷರ ಪ್ರಕಾಶನ, ಹೆಗ್ಗೋಡು.

28. ವೈದೇಹಿ, 2004, ಸೋಮಾರಿ ಓಳ್ಯಾ, ಅಕ್ಷರ ಪ್ರಕಾಶನ, ಹೆಗ್ಗೋಡು.

29. ವೈದೇಹಿ, 2009, ಅಳಿಲು ರಾಮಾಯಣ, ಅಕ್ಷರ ಪ್ರಕಾಶನ, ಹೆಗ್ಗೋಡು.

30. ವೈದೇಹಿ, 2009, ಸತ್ರು ಅಂದ್ರೆ ಸಾಯ್ತಾರ?, ಅಕ್ಷರ ಪ್ರಕಾಶನ, ಹೆಗ್ಗೋಡು.

31. ವೈದೇಹಿ, 2014, ಆನೆ ಬಂತೋ ಆನೆ, ಅಕ್ಷರ ಪ್ರಕಾಶನ, ಹೆಗ್ಗೋಡು.

32. ವೈದೇಹಿ, 2014, ರಾಜಾ ಲಿಯರ್, ಅಕ್ಷರ ಪ್ರಕಾಶನ, ಹೆಗ್ಗೋಡು.

33. ವೈದೇಹಿ, 2015, ಉಂ ಅಂದ ಉಹೂಂ ಅಂದ, ಅಕ್ಷರ ಪ್ರಕಾಶನ, ಹೆಗ್ಗೋಡು.

34. ವೈದೇಹಿ, 2015, ಗೆದ್ದಲು ಪಂಡಿತರು, ಅಕ್ಷರ ಪ್ರಕಾಶನ, ಹೆಗ್ಗೋಡು.

35. ವೈದೇಹಿ, 2014, ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು, ಜಡಭರತ ಪ್ರಕಾಶನ, ಧಾರವಾಡ.

36. ವೈದೇಹಿ, 1984, ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು, ಅಕ್ಷರ ಪ್ರಕಾಶನ, ಹೆಗ್ಗೋಡು.

37. ವೈದೇಹಿ, 1996, ಸೇಡಿಯಾಪು ನೆನಪುಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

38. ವೈದೇಹಿ, 2003, ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಅಕ್ಷರ ಪ್ರಕಾಶನ, ಹೆಗ್ಗೋಡು.

39. ವೈದೇಹಿ, 2008, ಮುಂತಾದ ಕೆಲಪುಟಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

40. ವೈದೇಹಿ, 2022, ನೆನಪಿನ ಉಗ್ರಾಣ, ವಸಂತ ಪ್ರಕಾಶನ, ಬೆಂಗಳೂರು.

ಪರಾಮರ್ಶನ ಗ್ರಂಥಗಳ ವಿವರ

ಸಂಶೋಧನಾ ಮಹಾಪ್ರಬಂಧಗಳು:

1. ಅನಸೂಯ ಎಂ. ಕದಂ, 2002, ಮಹಿಳಾ ಶೋಷಣೆಯ ನೆಲೆಗಳು, ಡಾ. ವಿಠಲರಾವ್ ಗಾಯಕ್ವಾಡ್, ಕನ್ನಡ ವಿಶ್ವವಿದ್ಯಾಲಯ ಹಂಪಿ.
2. ಅನ್ನಪೂರ್ಣ ಎನ್. ಎಸ್, 2017, ಕನ್ನಡ ಮಹಿಳಾ ಕಾದಂಬರಿಗಳಲ್ಲಿ ಜಾತಿ–ವರ್ಗ–ಲಿಂಗ ವ್ಯವಸ್ಥೆ, ಪ್ರೊ. ಸಿ. ಪಿ. ಸಿದ್ಧಾಶ್ರಮ, ಮೈಸೂರು ವಿಶ್ವವಿದ್ಯಾನಿಲಯ
3. ಆಶಾ ಎನ್. ಜಿ, 2016, ವೈದೇಹಿ ಮತ್ತು ಹೆಚ್. ನಾಗವೇಣಿ ಕರಾವಳಿಯ ಇಬ್ಬರು ಲೇಖಕಿಯರ ಕೃತಿಗಳ ತೌಲನಿಕ ಅಧ್ಯಯನ, ಡಾ. ಎಲ್ ಸಿ ಸುಮಿತ್ರಾ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
4. ಕೋದಂಡರಾಮ ಎನ್. ಕೆ, 1996, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಡಾ. ರಾಮೇಗೌಡ, ಮೈಸೂರು ವಿಶ್ವವಿದ್ಯಾನಿಲಯ.
5. ಗಿರೀಶ್ ಎಂ. ಬಿ, 2017, ಕನ್ನಡ ಮಕ್ಕಳ ನಾಟಕಗಳ ತಾತ್ವಿಕ ನೆಲೆಗಳು, ಡಾ. ಅಕ್ಕಮಹಾದೇವಿ, ಮೈಸೂರು ವಿಶ್ವವಿದ್ಯಾನಿಲಯ
6. ಗೀತಾ ಬಾಲಿನಾಯಕ, 2000, ಕನ್ನಡ ಕಥಾಸಾಹಿತ್ಯ ಮತ್ತು ಸ್ತ್ರೀ ನಿರ್ವಚನೆ, ಡಾ ಹೆಚ್. ಎಸ್ ಶ್ರೀಮತಿ, ಕನ್ನಡ ವಿಶ್ವ ವಿದ್ಯಾಲಯ ಹಂಪಿ.
7. ನಿಂಬಪ್ಪ, 2012, ಮಕ್ಕಳ ರಂಗಭೂಮಿ: ಒಂದು ಅಧ್ಯಯನ, ಡಾ. ಅರ್ಜುನ ಗೋಳಸಂಗಿ, ಕನ್ನಡ ವಿಶ್ವ ವಿದ್ಯಾಲಯ ಹಂಪಿ.
8. ಪ್ರತಿಮಾ ಕೆ. ಪಿ, 2017, ಕನ್ನಡ ಮಹಿಳಾ ಕಾದಂಬರಿಗಳಲ್ಲಿ ಮಹಿಳಾ ಸಬಲೀಕರಣದ ನೆಲೆಗಳು, ಪ್ರೊ. ಪ್ರೀತಿ ಶ್ರಿಮಂಧರ ಕುಮಾರ್, ಮೈಸೂರು ವಿಶ್ವವಿದ್ಯಾನಿಲಯ
9. ಭಾರತಿ, 2012, ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳು : ಕೋಟ ಉಪಭಾಷೆಯನ್ನು ಅನುಲಕ್ಷಿಸಿ, ಡಾ. ಎ. ಸುಬ್ಬಣ್ಣ ರೈ, ಕನ್ನಡ ವಿಶ್ವವಿದ್ಯಾಲಯ ಹಂಪಿ.
10. ಮಂಜುಳ ಬಿ. ಕೆ, 2013, ಆಧುನಿಕ ಮಹಿಳಾ ಕಥಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ಡಾ. ವಿಶ್ವನಾಥ್, ಮೈಸೂರು ವಿಶ್ವವಿದ್ಯಾನಿಲಯ
11. ಮಯ್ಯ ಪಾ. ನ, 1992, ಕೋಟದವರು: ಕೋಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನ, ಡಾ. ಪುರುಷೋತ್ತಮ ಬಿಳಿಮಲೆ, ಮಂಗಳೂರು ವಿಶ್ವವಿದ್ಯಾನಿಲಯ.

12. ಮಾಲಿನಿ, 2012, ಶಶಿ ದೇಶಪಾಂಡೆ ಮತ್ತು ವೈದೇಹಿಯವರ ಸೃಜನಶೀಲ ಬರಹಗಳಲ್ಲಿನ ಕಲ್ಪನೆಗಳ ಪುನರ್ನಿರ್ಮಾಣದ ಮೇಲೆ ವಿಶೇಷ ಒತ್ತುಕೊಟ್ಟ ಅಧ್ಯಯನ, ಡಾ. ಮಾಧವ ಭಟ್, ಕನ್ನಡ ವಿಶ್ವವಿದ್ಯಾಲಯ, ಹಂಪಿ.
13. ರಂಗಸ್ವಾಮಿ ಎಂ., 2007, ಕಂದಮಿಳ ನಾರಿನೋಟ, ಸ್ತ್ರೀವಾದಿ ಹಿನ್ನೆಲೆಯಿಂದ ಕನ್ನಡ ಮತ್ತು ತಮಿಳು ಮಹಿಳಾ ಸಾಹಿತ್ಯದ ಅಧ್ಯಯನ, ಡಾ. ಅಕ್ಕಮಹಾದೇವಿ, ಮೈಸೂರು ವಿಶ್ವವಿದ್ಯಾನಿಲಯ.
14. ಲತಾ ಜಿ. ಎಸ್, 2007, ಆಧುನಿಕ ಕನ್ನಡ ಕಥನಸಾಹಿತ್ಯದಲ್ಲಿ ಪೌರಾಣಿಕ ಸ್ತ್ರೀಪಾತ್ರಗಳ ಅಧ್ಯಯನ, ಡಾ. ಸಬಿಹಾ, ಮಂಗಳೂರು ವಿಶ್ವವಿದ್ಯಾನಿಲಯ.
15. ಲೋಕೇಶ ಅಗಸನಕಟ್ಟೆ, 2003 ಆಧುನಿಕ ಕನ್ನಡ ಕಾವ್ಯ ಸಮಾಜ–ಸಂಸ್ಕೃತಿ, ಅಲೋಕ ಪ್ರಕಾಶನ ಚಿತ್ರದುರ್ಗ.
16. ಶಿವರಾಮ ಪಡಿಕ್ಕಲ್, 1987, ನಾಡುನುಡಿಯ ರೂಪಕ : ಕನ್ನಡದ ಮೊದಲ ಕಾದಂಬರಿಗಳ ಅಧ್ಯಯನ, ಡಾ. ಬಿ. ಎ. ವಿವೇಕ ರೈ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.
17. ಸಂತೋಷ್ ಎ. ಜಿ, 2002, ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಡಾ. ಕಾಳೇಗೌಡ ನಾಗವಾರ, ಮೈಸೂರು ವಿಶ್ವವಿದ್ಯಾನಿಲಯ.
18. ಸುಮಂಗಲಾ ಡಿ, 2010, ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ (ಸಣ್ಣಕತೆ)ದಲ್ಲಿ ಪ್ರತಿಭಟನೆಯ ವಿನ್ಯಾಸಗಳು, ಪ್ರೊ. ಪ್ರೀತಿ ಶ್ರಿಮಂಧರ ಕುಮಾರ್, ಮೈಸೂರು ವಿಶ್ವವಿದ್ಯಾನಿಲಯ
19. ಸುಲತಾ, 2012, ಕರಾವಳಿ ಲೇಖಕಿಯರ ಕತೆಗಳಲ್ಲಿ ಅಭಿವ್ಯಕ್ತಗೊಂಡ ಸ್ತ್ರೀ ಸಂಸ್ಕೃತಿಯ ವಿಭಿನ್ನ ಆಯಾಮಗಳು, ಡಾ. ಶ್ರೀಧರ ಹೆಚ್ ಜಿ, ಕನ್ನಡ ವಿಶ್ವ ವಿದ್ಯಾಲಯ ಹಂಪಿ.

ಡಿ.ಲಿಟ್ ಮಹಾ ಪ್ರಬಂಧ:

1. ಸೋಮಶೇಖರ ಸಿ., 2003, ಹನ್ನೆರಡನೇ ಶತಮಾನದ ವಚನಗಳಲ್ಲಿ ಸಾಮಾಜಿಕ ಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಮರ್ಶಾ ಕೃತಿಗಳು:

1. ಅಮೂರ ಜಿ. ಎಸ್ (ಸಂ), 1999, ಅವಳ ಕತೆಗಳು, ಪ್ರಿಸಮ್ ಬುಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
2. ಅಮೂರ ಜಿ. ಎಸ್, 2003, ಕನ್ನಡ ಕಥನ ಸಾಹಿತ್ಯ ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಅಮೂರ ಜಿ. ಎಸ್, 1970, ಕೃತಿ ಪರಿಕ್ಷೆ, ವಸಂತ ಪ್ರಕಾಶನ, ಬೆಂಗಳೂರು.
4. ಅಮೂರ ಜಿ. ಎಸ್, 2005, ಕೊರಳು ಕೊಳಲು, ಪ್ರಿಯದರ್ಶಿನಿ ಪ್ರಕಾಶನ. ಬೆಂಗಳೂರು.
5. ಅಶೋಕ ಟಿ.ಪಿ., 2014, ಕಥನ ಕಾರಣ, ಅಕ್ಷರ ಪ್ರಕಾಶನ, ಹೆಗ್ಗೋಡು.
6. ಅಶೋಕ ಟಿ.ಪಿ., 2013, ಕಥನ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು.
7. ಅಶೋಕ ಟಿ.ಪಿ., 2013, ಕಾವ್ಯ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು.
8. ಅಶೋಕ ಟಿ.ಪಿ, 1995, ವೈದೇಹಿಯವರ ಕತೆಗಳು, ಕುಂದಾಪುರ ಕನ್ನಡ ಸಂಘ
9. ಅಶೋಕ ಟಿ.ಪಿ., 2013, ವೈದೇಹಿ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು.
10. ಆರ್ಯಾಂಬಾ ಪಟ್ಟಾಭಿ (ಸಂ), 2004, ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ, ಮೈಸೂರು.
11. ಉಷಾ. ಪಿ. ರೈ, 2009, ಮಧ್ಯಂತರ, ಕಿರಣ್ ಬುಕ್ ಡಿಸ್ಟ್ರಿಬ್ಯೂಟರ್ಸ್,
12. ಉಪಾಧ್ಯ ಜಿ. ಎನ್, 2005, ವಿಚಾರ ಬೆಳಕು, ಅಭಿಜಿತ್ ಪ್ರಕಾಶನ , ಮುಂಬಯಿ
13. ಉಷಾ ಸ, 2009, ವೈದೇಹಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
14. ಕುಲಕರ್ಣಿ ಪ್ರ. ವಿ. ಮತ್ತಿತರರು (ಸಂ), 1998, ಕದಂಬ, ಪ್ರಭಸ ಪ್ರಕಾಶನ, ಮಧುರೈ.
15. ಕಿಶೋರಿ ನಾಯಕ್. ಕೆ (ಸಂ), 2011, ನಾನು ಮತ್ತು ನನ್ನ ಬರಹ, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ.
16. ಕರೀಗೌಡ ಬೀಚನಹಳ್ಳಿ, 2003, ಶತಮಾನದ ಸಣ್ಣಕತೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
17. ಕರೀಗೌಡ ಬೀಚನಹಳ್ಳಿ, 2000, ಸಂಕಥನ, ಅಜಂತ ಪ್ರಕಾಶನ, ಬೆಂಗಳೂರು,
18. ಗಾಯತ್ರೀ ನಾವಡ, 2003, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ,
19. ಗಿರಡ್ಡಿ ಗೋವಿಂರಾಜ, 2009, ಕಲ್ಪಿತ ವಾಸ್ತವ, ಸಾಹಿತ್ಯ ಪ್ರಕಾಶನ, ಹುಬ್ಬಳಿ.
20. ಗಿರಡ್ಡಿ ಗೋವಿಂದರಾಜ, 2015, ಸಮಗ್ರ ವಿಮರ್ಶೆ ಸಂಪುಟ ಎರಡು, ಸಪ್ನ ಬುಕ್ ಹೌಸ್, ಬೆಂಗಳೂರು.
21. ತಮಿಳ್ ಸೆಲ್ವಿ, 2015, ಅನನ್ಯ, ಸೃಷ್ಟಿ ಪ್ರಕಾಶನ, ಬೆಂಗಳೂರು.

22. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (ಸಂ), 1994, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
23. ಧನಂಜಯ ಕುಂಬ್ಳೆ ಮತ್ತು ಕಿದೂರು ವೇಣುಗೋಪಾಲ ಶೆಟ್ಟಿ (ಸಂ), 2013, ಕನ್ನಡ ಮನಸ್ಸು, ಆಳ್ವಾಸ್ ಪ್ರಕಾಶನ. ಮೂಡಬಿದಿರೆ.
24. ನಾಯಕ ಜಿ. ಹೆಚ್, 2011, ಮೌಲ್ಯ ಮಾರ್ಗ ಸಂಪುಟ 1, ಸಿರಿವರ ಪ್ರಕಾಶನ, ಬೆಂಗಳೂರು.
25. ನಾವಡ ಎ. ವಿ, 2015, ಸಾಹಿತ್ಯ ಶೋಧ, ಶೋಧನ ಪ್ರಕಾಶನ. ಮಂಗಳೂರು.
26. ಪೂವಪ್ಪ ಕಣಿಯೂರು, 2013, ತೀಡಿದಷ್ಟು ಗಂಧ, ತರಂಗಿಣಿ ಪ್ರಕಾಶನ.
27. ಪ್ರತಾಪಚಂದ್ರ ಶೆಟ್ಟಿ ಹಳ್ನಾಡು(ಸಂ), 2010, ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ, ಹೇಮಾವತಿ ಪ್ರಕಾಶನ, ನೀರುಮಾರ್ಗ.
28. ಪ್ರಭಾವತಿ ಎಸ್. ವಿ, 2000, ಸ್ತ್ರೀವಾದದ ಪ್ರಸ್ತುತತೆ, ಅಶ್ವಿನಿ ಗ್ರಾಫಿಕ್ಸ್, ಬೆಂಗಳೂರು.
29. ಪ್ರಶಾಂತ್ ನಾಯಕ್ ಜಿ (ಸಂ), 2005, ಸಾಹಿತ್ಯ ವಿಮರ್ಶೆ 2004, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
30. ಬಸವರಾಜ ನಾಗವ್ವನವರ (ಸಂ), 2013, ಪರಾಮರ್ಶೆಯ ಪಯಣದಲ್ಲಿ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.
31. ಬಸವರಾಜ ಸಬರದ, 2013 ಸಾಹಿತ್ಯ ಸಿಂಚನ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ
32. ಬೋರೇಗೌಡ ಚಿಕ್ಕಮರಳಿ ಮತ್ತು ರಾಮಕೃಷ್ಣ .ಮ (ಸಂ), 2010, ಸಾಹಿತ್ಯ ಸಂಕೀರ್ಣ, ಜನದನಿ ಸಾಂಸ್ಕೃತಿಕ ಟ್ರಸ್ಟ್, ಬೆಂಗಳೂರು.
33. ಮುರಳೀಧರ ಉಪಾಧ್ಯ ಹಿರಿಯಡಕ, 2009, ಪುಸ್ತಕ ಪ್ರತಿಷ್ಠೆ, ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು.
34. ಮುರಳೀಧರ ಉಪಾಧ್ಯ ಹಿರಿಯಡಕ (ಸಂ), 2018, ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ, ಅಭಿನವ ಪ್ರಕಾಶನ, ಬೆಂಗಳೂರು.
35. ರಾಘವೇಂದ್ರ ರಾವ್ ಹೆಚ್. ಎಸ್ (ಸಂ), 2001, ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,
36. ರಾಜಶೇಖರ್ ಜಿ., ಜಿ. ರಾಜಶೇಖರ್ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು
37. ರಾಜೇಶ್ವರಿ ಮಹೇಶ್ವರಯ್ಯ ಮತ್ತು ಡಾ. ಹೆಚ್. ಎಂ ಮಹೇಶ್ವರಯ್ಯ (ಸಂ), 2017, ಕರ್ನಾಟಕದ ಭಾಷೆಗಳು, ಸಂಪುಟ–1 ಅಕ್ಷರ ಪ್ರಕಾಶನ, ಹೆಗ್ಗೋಡು,
38. ಲಂಕೇಶ ಪಿ, 2008, ಸಾಹಿತಿ ಸಾಹಿತ್ಯ ವಿಮರ್ಶೆ, ಲಂಕೇಶ್ ಪ್ರಕಾಶನ ಬೆಂಗಳೂರು.

39. ವಸಂತಕುಮಾರ ತಾಳ್ತಜೆ (ಸಂ), 1993, ಜನಪರ ನಿಲುವು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ.
40. ವಿವಿಧ ಲೇಖಕಿಯರು (ಸಂ), 1993, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
41. ವಿವೇಕ ರೈ. ಬಿ. ಎ, 1995, ಗಿಳಿಸೂವೆ, ಅಕ್ಕೆಸಿರಿ ಸಾಂಸ್ಕೃತಿಕ ಕೇಂದ್ರ ಮಂಗಳೂರು.
42. ವೀಣಾ ಶಾಂತೇಶ್ವರ, 2009, ಇಲ್ಲಿಂದ ಮುಂದೆಲ್ಲಿಗೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
43. ವೆಂಕಟೇಶಮೂರ್ತಿ ಹೆಚ್. ಎಸ್, 2005, ಎದುರೀಜು, ಭಾಗೀರಥಿ ಪ್ರಕಾಶನ, ಬೆಂಗಳೂರು
44. ವೆಂಕಟಸುಬ್ಬಯ್ಯ .ಜಿ, 2003, ಪರಾಮರ್ಶನ, ಮಾಸ್ತಿ ಅಧ್ಯಯನ ಪೀಠ, ಬೆಂಗಳೂರು.
45. ವಾದಿರಾಜ ಭಟ್ ಕನರಾಡಿ (ಸಂ), 1997, ಹೆಸರಾದ ಪಟ್ಟಣ ಬಸ್ರೂರು ಒಂದು ಅಧ್ಯಯನ, ಶ್ರೀ ಶಾರದಾ ಕಾಲೇಜು ಟ್ರಸ್ಟ್, ಬಸ್ರೂರು.
46. ಶ್ರೀಮತಿ ಹೆಚ್. ಎಸ್, 1999, ಚಹರೆ, ಇಳಾ ಪ್ರಕಾಶನ, ಬೆಂಗಳೂರು.
47. ಶೈಲಾ ಯು, 2012, ಪ್ರಾದೇಶಿಕತೆಯೂ ಕಲ್ಲು ಹೇಳುವ ಕತೆಗಳೂ, ಬೆನಕ ಪ್ರಕಾಶನ, ಪಜೀರು.
48. ಶಾಂತಾ ಇಮ್ರಾಪುರ, 2001, ಮಹಿಳೆ ಸಾಹಿತ್ಯ ಸಂಸ್ಕೃತಿ, ಚೇತನ ಪ್ರಕಾಶಧನ, ಧಾರವಾಡ.
49. ಶಿವರಾಮು ಕಾಡನಕುಪ್ಪೆ, 2003, ಸಾಮಾಜಿಕ ನೆಲೆ, ಕನ್ನಡ ಪುಸ್ತಕ ಪ್ರಾಧಿಕಾರ.
50. ಶಂಕರರಾವ್ ಚ. ನ, 1995, ಸಾಮಾಜಿಕ ಮತ್ತು ಸಮಾಜಶಾಸ್ತ್ರೀಯ ಚಿಂತನೆ, ಜೈ ಭಾರತ್ ಪ್ರಕಾಶನ, ಮಂಗಳೂರು.
51. ಶಿವಪ್ರಕಾಶ್ ಹೆಚ್. ಎಸ್, 1993, ಸಾಹಿತ್ಯ ಮತ್ತು ರಂಗಭೂಮಿ, ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು.
52. ಶಾಂತಾ ಇಮ್ರಾಪುರ, 2007, ಸಾಹಿತ್ಯ ಸಂವೇದನೆ, ರೇಣುಕಾ ಮುದ್ರಣಾಲಯ, ಧಾರವಾಡ.
53. ಸಬಿಹಾ ಭೂಮಿಗೌಡ ಮತ್ತು ಡಾ.ಮಲ್ಲಿಕಾ ಘಂಟಿ (ಸಂ), 2006, ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
54. ಸಬಿಹಾ ಭೂಮಿಗೌಡ, 2006, ನುಡಿಗವಳ, ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು.
55. ಸಬಿಹಾ ಭೂಮಿಗೌಡ (ಸಂ), 2016, ಬಹುಭಾಷಾ ಮಹಿಳಾ ಧ್ವನಿ,ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.
56. ಸಬಿಹಾ ಭೂಮಿಗೌಡ (ಸಂ), 2006, ಸಂ–ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

57. ಸಬಿಹಾ ಮತ್ತಿತರರು (ಸಂ), 2012, ಸಂ– ಶಿವರಾಮ ಕಾರಂತರ ಕಾದಂಬರಿಗಳ ಪ್ರಾದೇಶಿಕ ಸಾಂಸ್ಕೃತಿಕ ಪದಕೋಶ, ಡಾ. ಶಿವರಾಮ ಕಾರಂತ ಪೀಠ– ಮಂಗಳೂರು ವಿಶ್ವವಿದ್ಯಾನಿಲಯ.
58. ಸಾತ್ವಿಕ್ ಎನ್. ವಿ (ಸಂ), 2010, ಸಂಸ್ಕೃತಿ ಜಾತ್ರೆ, ಹೇಮಾವತಿ ಪ್ರಕಾಶನ, ನೀರುಮಾರ್ಗ.
59. ಸುಮಿತ್ರಾ ಎಲ್. ಸಿ, 1997, ವಿಭಾವ, ಅಶ್ವಿನಿ ಗ್ರಾಫಿಕ್ಸ್ , ಬೆಂಗಳೂರು.
60. ಸುಮಿತ್ರಾಬಾಯಿ ಬಿ. ಎನ್, 2017, ವೈದೇಹಿ, ಕಾಂತಾವರ ಕನ್ನಡ ಸಂಘ, ಕಾಂತಾವರ
61. ಹಳ್ಳಿಕೇರಿ ಎಫ್. ಟಿ ಮತ್ತು ಕೆ. ರವೀಂದ್ರನಾಥ (ಸಂ), 2002, ಸಂ. ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
62. ಹೇಮಲತಾ. ಹೆಚ್ ಎಂ, 2004, ಮಹಿಳಾ ಅಧ್ಯಯನ, ಡಿ ವಿ ಕೆ ಮೂರ್ತಿ ಪ್ರಕಾಶನ, ಮೈಸೂರು.

ಲೇಖನಗಳು:

1. ಅಶೋಕ ಟಿ. ಪಿ, 02/03/2004, 'ಮನೋಲೋಕಗಳ ಮುನ್ನೋಟ: ವೈದೇಹಿಯವರ ಅಲ್ಲಲ್ಲಿನ ಲೋಕದವರು', ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ, ಪುಟ ಸಂಖ್ಯೆ 3.
2. ಅಶೋಕ ಟಿ. ಪಿ, 29/12/2013, 'ಅಂತಃಕರಣದ ಕಣ್ಗಾವಲು, ಹಕ್ಕಿನ ಪ್ರಶ್ನೆ : ವೈದೇಹಿಯವರ ಹಕ್ಕಿಲ್ಲದವರು', ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ, ಪುಟ ಸಂಖ್ಯೆ 3.
3. ಆನಂದರಾಮ ಉಪಾಧ್ಯ, 23/08/2015, 'ನೋವಿನ ಮುಪ್ಪರಿಯ ಅಕ್ಕು', ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ, ಪುಟ ಸಂಖ್ಯೆ 4.
4. ಮೈತ್ರಿ ಭಟ್, ಅಕ್ಟೋಬರ್–ಡಿಸೆಂಬರ್ 2016, 'ವೈದೇಹಿಯವರ ಕಥನಸಾಹಿತ್ಯದಲ್ಲಿ ಮಹಿಳೆಯ ಮನಸಿನ ಅಭಿವ್ಯಕ್ತಿ', ಅಚಲ ಮಹಿಳಾ ಅಧ್ಯಯನ ತ್ರೈಮಾಸಿಕ 27ನೇ ಸಂಪುಟ, 4ನೇ ಸಂಚಿಕೆ. ಮಹಿಳಾ ಅಧ್ಯಯನ ಮಂಡಲ. ಮೈಸೂರು. ಪುಟ ಸಂಖ್ಯೆ 71–75
5. ವೈದೇಹಿ, 16/12/2018, 'ದುಡಿಯುವ ಮಹಿಳೆ ದುಡಿಯದ ಮಹಿಳೆ', ಸಾಪ್ತಾಹಿಕ ಸಂಪದ, ಮುಖಪುಟ, ಉದಯವಾಣಿ.
6. ಶಿವರಾಮ ಪಡಿಕ್ಕಲ್, 06/06/1993, 'ಅಸ್ಪೃಶ್ಯರು ಅನಾವರಣಗೊಳ್ಳುವ ಸ್ತ್ರೀ ಲೋಕ', ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ, ಪುಟ ಸಂಖ್ಯೆ 3.

ಜಾಲತಾಣ ಕೊಂಡಿಗಳು

ಪ್ರದೇಶದ ವ್ಯಾಖ್ಯೆಗಳು

ಕೇಂಬ್ರಿಡ್ಜ್ ಯೂನಿವರ್ಸಿಟಿ ಡಿಕ್ಷನರಿ
https://dictionary.cambridge.org/dictionary/english/region
ಮರಿಯಮ್ ವೆಬ್ಸ್ಟರ್ ಡಿಕ್ಷನರಿ
https://www.merriam-webster.com/dictionary/region
ಎನ್ಸೈಕ್ಲೋಪಿಡಿಯ ಬ್ರಿಟಾನಿಕ ವಿಶ್ವಕೋಶ
https://www.britannica.com/science/region-geography
ಆಕ್ಸ್‌ಫರ್ಡ್ ಲರ್ನರ್ಸ್ ಡಿಕ್ಷನರಿ
https://www.oxfordlearnersdictionaries.com/definition/english/region

ಪ್ರಾದೇಶಿಕತೆಯ ವ್ಯಾಖ್ಯೆಗಳು
ಎನ್ಸೈಕ್ಲೋಪಿಡಿಯ ಬ್ರಿಟಾನಿಕ ವಿಶ್ವಕೋಶ
https://www.britannica.com/dictionary/regionalism
ಕೋಲಿನ್ಸ್ ಡಿಕ್ಷನರಿ
https://www.collinsdictionary.com/dictionary/english/regionalism
ಮರಿಯಮ್ ವೆಬ್ಸ್ಟರ್ ಡಿಕ್ಷನರಿ
https://www.merriam-webster.com/dictionary/regionalism
ಕೇಂಬ್ರಿಡ್ಜ್ ಊನಿವರ್ಸಿಟಿ ಡಿಕ್ಷನರಿ
https://dictionary.cambridge.org/dictionary/english/regionalism
ಆಕ್ಸ್‌ಫರ್ಡ್ ಲರ್ನರ್ಸ್ ಡಿಕ್ಷನರಿ
https://www.oxfordlearnersdictionaries.com/definition/english/regionalism

ಸಂದರ್ಶನಗಳು
ಮಣಿಪಾಲ (ಡೀಮ್ಡ್ ಟು ಬಿ) ವಿಶ್ವವಿದ್ಯಾಲಯದ ತತ್ವಶಾಸ್ತ್ರ ಮತ್ತು ಮಾನವಿಕತೆಗಳ ಅಧ್ಯಯನ ಕೇಂದ್ರದಲ್ಲಿ 19 ನವೆಂಬರ್ 2012ರಲ್ಲಿ ನಡೆದ ಪ್ರೊ. ಯು. ಆರ್. ಅನಂತಮೂರ್ತಿ ಮತ್ತು ವೈದೇಹಿಯವರ ನಡುವಿನ ಸಂವಾದ ಕಾರ್ಯಕ್ರಮದ ದೃಶ್ಯ ಚಿತ್ರೀಕರಣ
https://youtu.be/2VfAJ9s6Juk

ಡಿ.ಡಿ. ಚಂದನ ವಾಹಿನಿಯ ‘ಶುಭೋದಯ ಕರ್ನಾಟಕ’ ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿದ್ದ ವೈದೇಹಿಯವರ ಸಂದರ್ಶನದ ದೃಶ್ಯ ಚಿತ್ರೀಕರಣ

https://youtu.be/JG8D3qFfP_Y